ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 5 ಸೋಮವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 19 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮಹಿಳೆ ಹಂತಕನಿಗೆ ಜೀವಾವಧಿ ಶಿಕ್ಷೆ



ಮೈಸೂರು, ಮೇ 4– ಮಹಿಳೆಯನ್ನು ಹತ್ಯೆ ಮಾಡಿದ ವ್ಯಕ್ತಿಗೆ ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಮೈಸೂರಿನ ಜಯದೇವನಗರದಲ್ಲಿ ವಾಸವಿದ್ದ ಒರಿಸ್ಸಾ ಮೂಲದ ಪ್ರಮೋದ್ ಕುಮಾರ್‌ಗೆ ಶಿಕ್ಷೆ ವಿಧಿಸಲಾಗಿದ್ದು, ಈತ ಕಳೆದ ವರ್ಷ ತನ್ನೊಂದಿಗಿದ್ದ ಕಬೇರಿ ಗಡಾಯಿ ಎಂಬಾಕೆಯನ್ನು ಹತ್ಯೆ ಮಾಡಿದ್ದ.

ಜಯದೇವನಗರದ 3ನೇ ಕ್ರಾಸ್‌ನಲ್ಲಿ ಮನೆಯೊಂದನ್ನು ಬಾಡಿಗೆ ಪಡೆದು ಪ್ರಮೋದ್ ಕುಮಾರ್ ಹಾಗೂ ಕಬೇರಿ ಗಡಾಯಿ ವಾಸವಿದ್ದರು. ತಾವು ದಂಪತಿಗಳೆಂದು ಮನೆ ಮಾಲೀಕರಿಗೆ ತಿಳಿಸಿದ್ದು, ಇವರಿಗೆ 14 ವರ್ಷದ ಮಗನಿದ್ದಾನೆ. ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದ ಪ್ರಮೋದ್‌ಕುಮಾರ್ ಮನೆಯವರೊಂದಿಗೆ ಅನ್ಯೋನ್ಯವಾಗಿದ್ದರು. ಈ ಮಧ್ಯೆ ಉತ್ತರಪ್ರದೇಶ ಮೂಲದ ಸಚಿನ್ ಕುಮಾರ್ ಹಾಗೂ ಕಬೇರಿ ಗಡಾಯಿ ನಡುವೆ ಸ್ನೇಹ ಬೆಳೆದಿತ್ತು. ನಿರಂತರವಾಗಿ ಮೊಬೈಲ್‌ನಲ್ಲಿ ಮಾತನಾಡುವುದು, ಮೆಸೇಜ್ ಮಾಡುವುದು ನಡೆದಿತ್ತು. ಈ ಸಲುಗೆ ಸಂಬಂಧವಾಗಿ ಮುಂದುವರೆದಿತ್ತು.

ಇದರಿಂದ ಪ್ರಮೋದ್‌ಕುಮಾರ್ ಹಾಗೂ ಕಬೇರಿ ಗಡಾಯಿ ನಡುವೆ ವೈಮನಸ್ಸು ಉಂಟಾಗಿತ್ತು. 2023ರ ಡಿಸೆಂಬರ್ 19ರಂದು ಇನ್ನೆಂದೂ ಸಚಿನ್ ಜೊತೆ ಮಾತನಾಡದಂತೆ ಕಬೇರಿ ಗಡಾಯಿಗೆ ಎಚ್ಚರಿಕೆ ನೀಡಿದ್ದ. ಆದರೂ ಸಚಿನ್ ಹಾಗೂ ಕಬೇರಿ ಸಂಬಂಧ ಮುಂದುವರೆದಿತ್ತು. ಇದರಿಂದ ಮನೆಯಲ್ಲಿ ಅನೇಕ ಬಾರಿ ಜಗಳವಾಗಿತ್ತು. 2024ರ ಜನವರಿ 2ರಂದು ರಾತ್ರಿ ಕಬೇರಿ ಗಡಾಯಿ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಅಡುಗೆ ಮಾಡುತ್ತಿದ್ದಳು. ಆ ವೇಳೆ ಪ್ರಮೋದ್‌ಕುಮಾರ್ ಆಕೆಯ ತಲೆಗೂದಲು ಹಿಡಿದು ಎಳೆದಾಡಿದಾಗ ಕಿರುಚಿಕೊಂಡಿದ್ದಾಳೆ. ಶಬ್ದ ಕೇಳಿ ಪುತ್ರ ಅಡುಗೆ ಮನೆಗೆ ಓಡಿಬಂದು ತಾಯಿ ರಕ್ಷಿಸಲು ಯತ್ನಿಸಿದ್ದಾನೆ. ಆದರೆ ಪ್ರಮೋದ್ ಕುಮಾರ್ ಅಡುಗೆ ಮನೆಯಲ್ಲಿದ್ದ ಚಾಕು ತೆಗೆದುಕೊಂಡು ಕಬೇರಿ ಗಡಾಯಿಯ ಕತ್ತು ಕೊಯ್ದು ಹತ್ಯೆ ಮಾಡಿದ್ದ.

ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಹಿಂದಿನ ಇನ್ಸ್‌ಪೆಕ್ಟರ್‌ಗಳಾದ ಎ.ಮಲ್ಲೇಶ್ ಹಾಗೂ ಶಾಂತಾರಾಮ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪ್ರದೀಪ್‌ಕುಮಾರ್‌ಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ಶುಕ್ರವಾರ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಈ.ಯೋಗೇಶ್ವರ ವಾದ ಮಂಡಿಸಿದ್ದರು.

ಸಂಘಟಿತ ಹೋರಾಟದಿಂದ ಕಾರ್ಮಿಕರ ಹಕ್ಕುಗಳಲ್ಲಿ ಸುಧಾರಣೆ

ಕಾರ್ಮಿಕ ಹಕ್ಕುಗಳ ಕಾರ್ಯಾಗಾರದಲ್ಲಿ ಡಾ.ಸಿ. ರೇಣುಕಾಂಬ ಪ್ರತಿಪಾದನೆ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಕಾರ್ಮಿಕ ಹಕ್ಕುಗಳ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಮಿಕ ಹಕ್ಕುಗಳ ಕಾರ್ಯಾಗಾರದಲ್ಲಿ ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದ ಅಧ್ಯಕ್ಷೆ ಡಾ.ಸಿ.ರೇಣುಕಾಂಬ ಮಾತನಾಡಿದರು.

ಮೈಸೂರು, ಮೇ 4(ಜಿಎ)–ಹೋರಾಟಗಳ ಫಲವಾಗಿ ಮಹಿಳೆಯರು, ಪುರುಷರಿಗೆ ಸಮಾನ ವೇತನ ಹಕ್ಕು ದೊರೆತಿದೆ. ಕಾರ್ಮಿಕರ ಹಕ್ಕುಗಳಲ್ಲಿ ಸುಧಾರಣೆ ಆಗಿದೆ. ಇನ್ನೂ ಆಗುತ್ತಲಿದೆ. ಹೀಗಾಗಿ ಸಂಘಟಿತ ಹೋರಾಟ ಸದಾ ಮುಂದುವರಿಯಬೇಕಾಗಿದೆ ಎಂದು ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದ ಅಧ್ಯಕ್ಷೆ ಡಾ.ಸಿ.ರೇಣುಕಾಂಬ ಸಲಹೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಕಾರ್ಮಿಕ ಹಕ್ಕುಗಳ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಮಿಕ ಹಕ್ಕುಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ದುಡಿಯುವ ಕಡೆ ಸಮಸ್ಯೆ ಬಂದಾಗ ಕಾರ್ಮಿಕರು ಸುಮ್ಮನಿರಬಾರದು, ಕಾರ್ಮಿಕ ಸಂಘಗಳ ನೆರವಿನಿಂದ ಬಗೆಹರಿಸಿಕೊಳ್ಳಲು ಮುಂದಾಗಬೇಕು, ಇದೇ ಕಾರಣದಿಂದಲೇ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬಿವೇ ಮೊದಲಾದ ಸೌಲಭ್ಯಗಳು ದೊರೆಯುವಂತಾಗಿವೆ ಎಂಬುದನ್ನು ಮರೆಯಬಾರದು ಎಂದರು.

ಯಾವುದೇ ಕಾರ್ಖಾನೆ ಏಳಿಗೆಯಲ್ಲಿ ಕಾರ್ಮಿಕರ ಪಾತ್ರ ಪ್ರಮುಖ, ಇಲ್ಲೆಲ್ಲ ಅವರು ಒಂದರ ಮೇಲೊಂದರಂತೆ ರಾತ್ರಿ ಪಾಳಿ, ಹಗಲು ಪಾಳಿ, ಜನರಲ್ ಪಾಳಿಗಳಲ್ಲಿ ದುಡಿಯುವಾಗಿನ ಕಷ್ಟ ಅವರ ಕುಟುಂದವರಿಗೇ ಗೊತ್ತು, ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ನೀಡುವುದೂ ಕಷ್ಟವಾಗುತ್ತಿರುತ್ತದೆ. ಹೀಗಾಗಿ ಕುಟುಂಬದ ಮಹಿಳೆಯರ ಹೊಣೆಗಾರಿಕೆಯೂ ಕಡಿಮೆ ಇಲ್ಲ ಎಂದು ತಿಳಿಸಿದರು.

ಇಎಸ್‌ಐ ಅಧಿಕಾರಿ ಉಮೇಶ್ ಮಾತನಾಡಿ, ಕಾರ್ಮಿಕರು ಹಾಗೂ ಅವರ ಇಡೀ ಕುಟುಂಬವೇ ಇಎಸ್‌ಐ ವ್ಯಾಪ್ತಿಗೆ ಬರುತ್ತದೆ. ಆದರೆ ಇಎಸ್‌ಐನಿಂದ ದೊರೆಯುವ ಸೌಲಭ್ಯದ ಅರಿವು ಸಾಕಷ್ಟು ಜನರಿಗೆ ಇಲ್ಲ. ಕೇವಲ ವೈದ್ಯಕೀಯ ಸೌಲಭ್ಯದ ಬಗ್ಗೆ ಮಾತ್ರವೇ ಗಮನ ನೀಡುತ್ತಾರೆ. ಇದು ಸರಿಯಲ್ಲ. ಬದಲಾಗಿ ಏನೇನು ಸವಲತ್ತುಗಳಿವೆ ಎಂಬ ಮಾಹಿತಿ ತಿಳಿದಿರಬೇಕು. ತಮ್ಮ ಮಕ್ಕಳು ವೈದ್ಯರಾಗಬೇಕೆಂಬ ಕನಸನ್ನು ನನಸಾಗಿಸಿಕೊಳ್ಳಲು ಇಎಸ್‌ಐ ಸಹಾ ನೆರವಾಗುತ್ತದೆ. ನೀಟ್‌ನಲ್ಲಿ ಇಎಸ್‌ಐ ಕೋಟಾ ಜಾರಿಗೆ ಬಂದಿದ್ದು, ಶೇ.5ರಷ್ಟು ಅವಕಾಶವಿದೆ. ಹೀಗಾಗಿ ಕಾರ್ಮಿಕರು ಈ ಯೋಜನೆ ಬಗ್ಗೆ ಸಂಬಂಧಿತ ಇಎಸ್‌ಐ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯುವುದು ಅಗತ್ಯ ಎಂದು ತಿಳಿಸಿದರು.

ಅನಾರೋಗ್ಯಕ್ಕೆ ಒಳಗಾದರೆ ಆರಂಭದ ದಿನದಿಂದ ಗುಣಮುಖನಾಗುವವರೆಗೆ ಚಿಕಿತ್ಸೆ, ಶಾಶ್ವತ ಅಂಗವೈಕಲ್ಯ ಆದರೆ ಪಿಂಚಣಿ, ಸಿಕ್‌ನೆಸ್ ಬೆನಿಫಿಟ್, ಅಪಘಾತವಾದರೆ ಶೇ.90ರಷ್ಟು ವೇತನ, ಅಂಗಲೂನ ಆದರೆ ಶಾಶ್ವತ ಪರಿಹಾರ, ಮರಣ ಹೊಂದಿದರೆ ಕುಟುಂಬದವರಿಗೆ ಪಿಂಚಣಿ ಮೊದಲಾದ ಸೌಲಭ್ಯಗಳ ಬಗ್ಗೆ ಕಾರ್ಮಿಕರಿಗೆ ಅರಿವು ಮೂಡಿಸಬೇಕಾಗಿದೆ. ನಿವೃತ್ತಿ ನಂತರ ವರ್ಷಕ್ಕೆ 120 ರೂ., ಪಾವತಿಸಿದಲ್ಲಿ ಗಂಡ, ಹೆಂಡತಿಗೆ ವೈದ್ಯಕೀಯ ಸೌಲಭ್ಯವೂ ದೊರೆಯುತ್ತದೆ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಭವಿಷ್ಯ ನಿಧಿ ಪ್ರವರ್ತಕ ಅಧಿಕಾರಿ ಬಿ.ಎನ್.ರಮೇಶ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸ್ವಯಂ ಸೇವಕರಾದ ಎನ್.ಲೋಕೇಶ್, ರಾಜ್ಯಾಧ್ಯಕ್ಷ ಆರ್.ಶ್ರೀನಿವಾಸ್, ಸಹ ಕಾರ್ಯದರ್ಶಿ ಡಾ.ಮೌಲ್ಯ ಜೈಕುಮಾರ್ ಉಪಸ್ಥಿತರಿದ್ದರು.

'ನಿತ್ಯ ಸಚಿವ' ಕೆ.ವಿ.ಶಂಕರಗೌಡ ಸಮಾಜಸೇವಾ ಪ್ರಶಸ್ತಿಗೆ ಆಯ್ಕೆ

ನಾಳೆ ಕಿರುರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ



ಮೈಸೂರು : ಮಾಜಿ ಶಿಕ್ಷಣ ಸಚಿವ, ಸಾಹಿತಿ, ಸಹಕಾರಿ ಧುರೀಣ, ರಂಗಕರ್ಮಿ ಹಾಗೂ ಕುವೆಂಪು ಅವರಿಂದ 'ನಿತ್ಯ ಸಚಿವ' ಗೌರವಕ್ಕೆ ಪಾತ್ರರಾಗಿದ್ದ ಕೆ.ವಿ.ಶಂಕರಗೌಡ ಸ್ಮರಣಾರ್ಥ ಅದಮ್ಯ ರಂಗಶಾಲೆ ವತಿಯಿಂದ ನೀಡಲಾಗುವ 'ಕೆ.ವಿ.ಶಂಕರಗೌಡ ಸಮಾಜ ಸೇವಾ ಪ್ರಶಸ್ತಿ'ಗೆ ವಿವಿಧ ಕ್ಷೇತ್ರದ ಏಳು ಮಂದಿ ಸಾಧಕ ಗಣ್ಯರು ಆಯ್ಕೆಯಾಗಿದ್ದಾರೆ ಎಂದು ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರ ಮಂಡ್ಯ ತಿಳಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಶ್ರೀರಂಗಪಟ್ಟಣದ ಡಿವೈಎಸ್‌ಪಿ ಶಾಂತಮಲ್ಲಪ್ಪ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಬೆಂಗಳೂರಿನ ರಾಜ್ಯ ಖಜಾನೆ ಇಲಾಖೆಯ ಹೆಚ್ಚುವರಿ ನಿರ್ದೇಶಕಿ ವಿ.ಭಾಗ್ಯಲಕ್ಷ್ಮಿ, ಮೈಸೂರು ಛೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜೀ ಟಿವಿ ರಿಯಾಲಿಟಿ ಶೋ ಹಾಗೂ ಸಿನಿಮಾ ಬರಹಗಾರ ಮಂಡ್ಯದ ಲೋಕೇಶ್‌ಗೌಡ, ಮೈಸೂರಿನ ಯುವ ಉದ್ಯಮಿ ಸಂಜಯ್ ಹೆಬ್ಬಾರ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ನಗರದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಮೇ 6 ರಂದು ಸಂಜೆ 5–30 ಗಂಟೆಗೆ ನಡೆಯಲಿರುವ 'ಬಾಲಂಗೋಚಿ' ಬೇಸಿಗೆ ಶಿಬಿರದ ಸಮರೋಪ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರು 'ನಿತ್ಯ ಸಚಿವ ಕೆ.ವಿ.ಶಂಕರಗೌಡ ಸಮಾಜ ಸೇವಾ ಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ. ಸಮಾರಂಭವನ್ನು ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಹಾಗೂ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಉದ್ಘಾಟಿಸಲಿದ್ದು, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಅಧ್ಯಕ್ಷತೆ ವಹಿಸುವರು. ಪ್ರಶಸ್ತಿ ಪುರಸ್ಕೃತ ಸಾಧಕರನ್ನು ಕುರಿತು ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ ಅಭಿನಂದನಾ ನುಡಿಗಳನ್ನಾಡಲಿದ್ದು, ಮಂಗಳೂರು ವಲಯದ ಆಂತರಿಕ ಭದ್ರತಾ



ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಡಾ.ಎ.ಎನ್.ಪ್ರಕಾಶ್ ಗೌಡ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ, ಡಾ.ಎ.ಟಿ.ಶಿವರಾಮ್, ಪಡುವಾರಹಳ್ಳಿ ಗ್ರಾಮಭ್ಯುದಯ ಟ್ರಸ್ಟಿನ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವಸ್ವಾಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಶ್ರೀ ರಾಮಾನುಜಾಚಾರ್ಯರ ಜಯಂತಿ



ಮೈಸೂರಿನ 23ನೇ ವಾರ್ಡಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಪುಸ್ತಕ ಸಂತಾನ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಶ್ರೀ ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಹರೀಶ್‌ಗೌಡ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ರಾಮಾನುಜಂ, ಸುದರ್ಶನ್ ವಿಜ್ಞೇಶ್ವರ ಭಟ್, ಸುರೇಂದ್ರ ನವೀನ್, ವಳ್ಳಿನಾದನ, ಮಂಜುನಾಥ್ ರಾಜೇಂದ್ರ, ರವಿಚಂದ್ರನ್ ಮತ್ತಿತರರು ಉಪಸ್ಥಿತರಿದ್ದರು.

ಉದ್ದಿಮೆ ಪರವಾನಗಿ ನವೀಕರಣ ಮೇಳ

ಮೈಸೂರು,ಮೇ4–ಮೈಸೂರು ನಗರಪಾಲಿಕೆ ವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಆವರಣದಲ್ಲಿ ಉದ್ದಿಮೆ ಪರವಾನಗಿ ನವೀಕರಣ ಮೇಳವನ್ನು ಮೇ 7ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ. ಮೇಳದಲ್ಲಿ ಪಾಲಿಕೆ ವ್ಯಾಪ್ತಿಯ ಹೋಟೆಲ್‌ಗಳ 2025–26ನೇ ಸಾಲಿನ ಉದ್ದಿಮೆ ಪರವಾನಗಿ ನವೀಕರಣಕ್ಕೆ ಅವಕಾಶವಿದ್ದು, ಗುರುತಿನ ಪುರಾವೆ, ಸ್ಥಳದ ಮಾಲೀಕತ್ವದ ದಾಖಲೆ, ಪಾನ್ ನಂಬರ್, ಮೊಬೈಲ್ ನಂಬರ್, ಪಾಸ್‌ಪೋರ್ಟ್ ಫೋಟೋ, ಇ–ಮೇಲ್ ಐಡಿ, ಈ ಹಿಂದಿನ ವರ್ಷದ ಉದ್ದಿಮೆ ಪರವಾನಗಿ ನಕಲು ಪ್ರತಿ ನೀಡಿ, ನಿಗದಿತ ಶುಲ್ಕ ಪಾವತಿಸುವ ಮೂಲಕ ನವೀಕರಣ ಮಾಡಿಕೊಳ್ಳಬಹುದು ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮನವಿ ಮಾಡಿದ್ದಾರೆ.

ಒಳ ಮೀಸಲಾತಿ ವೇಳೆ ಮಾದಿಗ ಎಂದು ಬರೆಸಿ

ಪ್ರಗತಿಪರ ಚಿಂತಕ, ಹೋರಾಟಗಾರ ಅರಕಲವಾಡಿ ನಾಗೇಂದ್ರ ಮನವಿ

ಮೈಸೂರು, ಮೇ 4(ಜಿಎ)–ಒಳಮೀಸಲಾತಿ ಸಮೀಕ್ಷೆ ವೇಳೆ ಕಲಂ 61ರಲ್ಲಿ ಮಾದಿಗ ಎಂದು ಬರೆಸಬೇಕು. ಯಾವುದೇ ಕಾರಣಕ್ಕೂ ಸುಳ್ಳು ಮಾಹಿತಿ ನೀಡದೆ ಸತ್ಯ ಸಂಗತಿಯನ್ನು ತಿಳಿಸಿ ಎಂದು ಪ್ರಗತಿಪರ ಚಿಂತಕ ಹಾಗೂ ಹೋರಾಟಗಾರ ಅರಕಲವಾಡಿ ನಾಗೇಂದ್ರ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 30 ವರ್ಷಗಳ ಹೋರಾಟದ ಫಲವಾಗಿ ಒಳಮೀಸಲಾತಿ ಜಾರಿಗೊಳಿಸುವ ಕಾರ್ಯ ಸನ್ನಿಹಿತವಾಗಿದೆ. ಸುಪ್ರೀಂ ಕೋರ್ಟ್ ಒಳಮೀಸಲಾತಿಯನ್ನು ಜಾರಿಗೊಳಿಸುವ ಅಧಿಕಾರವನ್ನು ಆಯಾ ರಾಜ್ಯ ಸರ್ಕಾರಗಳಿಗೆ ನೀಡಿದೆ. ಆದರೆ ಅದಕ್ಕೆ ಮಾನದಂಡ ಇದೆ. ಈ ಹಿನ್ನೆಲೆಯಲ್ಲಿ ಜಸ್ಟಿಸ್ ನಾಗಮೋಹನ್‌ದಾಸ್ ಆಯೋಗ ರಚಿಸಲಾಗಿದೆ ಎಂದರು.

ಆಯೋಗ ಮಧ್ಯಂತರ ವರದಿ ನೀಡಿದೆ. ಇದರಲ್ಲಿಯೂ 101 ಉಪಜಾತಿಗಳ ಸಮೀಕ್ಷೆ ಬಗ್ಗೆ ಪ್ರಸ್ತಾಪ ಇದೆ. ಮೇ 5ರಿಂದ ಮೊದಲ ಹಂತದಲ್ಲಿ ಮನೆ ಮನೆಗೆ ಭೇಟಿ ನೀಡಿ, 45 ಪ್ರಶ್ನೆಗಳಿಗೆ ಮಾಹಿತಿ ಸಂಗ್ರಹಿಸಲಿದ್ದಾರೆ. ನಂತರ 2ನೇ ಹಂತದಲ್ಲಿ ಆಯಾ ಮತಗಟ್ಟೆಗಳಲ್ಲಿ ಮತ್ತೆ ಸಮೀಕ್ಷೆ ಕಾರ್ಯ ನಡೆಯಲಿದೆ. ಮೂರನೇ ಹಂತದಲ್ಲಿ ಆನ್‌ಲೈನ್ ಮೂಲಕ ಅವಕಾಶ ನೀಡಲಾಗಿದೆ. 45 ಪ್ರಶ್ನೆಗಳಿಗೂ ಸರಿಯಾದ ಉತ್ತರ ನೀಡಿ. ಜಮೀನು ಸರ್ಕಾರದ ಹೆಸರಿನಲ್ಲಿದ್ದರೆ ಸ್ವಂತ ಜಮೀನು ಎಂದು ಬರೆಸಬೇಡಿ. ಸತ್ಯವನ್ನು ಮತ್ತು ನಿಖರವಾದ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಗಣತಿದಾರರು ಸಹ ಒಂದೆರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಪಡೆದು ಉಳಿದ ಪ್ರಶ್ನೆಗಳಿಗೆ ಬರೆದುಕೊಳ್ಳುವ ಸಾಧ್ಯತೆ ಇದೆ. ಇದಕ್ಕೆ ಸಮುದಾಯದವರು ಅವಕಾಶ ಮಾಡಿಕೊಡಬೇಕು. ಇದು ಮುಂದೆ ನಿಮಗೆ ತೊಂದರೆಯಾಗಲಿದೆ. ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಬೇಕು. ಮುಂದಿನ 20–30 ವರ್ಷಗಳ ಕಾಲ ಸರ್ಕಾರ ಯೋಜನೆ ಜಾರಿಗೊಳಿಸಲು ಅನುಕೂಲವಾಗಲಿದೆ ಎಂದರು.

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್ ಓಣಿಕೇರಿ ಮಾತನಾಡಿ, ಅನಿಷ್ಟ ಪದ್ಧತಿಗಳಿಗೆ ಒಳಗಾಗಿ ಕನಿಷ್ಠ ಜೀವನ ನಡೆಸಿದ ಏಕೈಕ ಜನಾಂಗ ಮಾದಿಗ. ಈಗ ಒಳಮೀಸಲಾತಿ ಸಿಗುವ ಕಾಲ ಕೂಡಿ ಬಂದಿದೆ. ಸಮುದಾಯವರು ನಿಖರವಾದ ಮಾಹಿತಿ ನೀಡಿ. ಮಾದಿಗ ಎಂದು ಬರೆಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್, ಸಾಮಾಜಿಕ ನ್ಯಾಯಪರ ವೇದಿಕೆ ಡಾ.ಮರಡೀಪುರ ರವಿಕುಮಾರ್, ಹೋರಾಟಗಾರರಾದ ಸುನೀಲ್, ಬಿ.ಬಸಪ್ಪ, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಸನ್ಮಾನ...



ಕಾರ್ಮಿಕರ ದಿನಾಚರಣೆ ಅಂಗವಾಗಿ ಚಾಮುಂಡಿಬೆಟ್ಟ ಗ್ರಾಮ ಪಂಚಾಯತಿ ವತಿಯಿಂದ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಶ್ರೀಮತಿ ನಾಗಮ್ಮ, ಉಪಾಧ್ಯಕ್ಷ ರವಿ, ಸದಸ್ಯರಾದ ಭರತ್, ಮಂಜುನಾಥ್, ಶಂಭುಲಿಂಗ, ಸುಜಾತ ವೆಂಕಟೇಶ್, ಪಿಡಿಓ ರೂಪೇಶ್‌ಕುಮಾರ್, ಪೌರಕಾರ್ಮಿಕರು ಈ ವೇಳೆ ಹಾಜರಿದ್ದರು.

ಮಂಗಳೂರಿನ ಘಟನೆ ಖಂಡಿಸಿ ಮೈಸೂರಲ್ಲಿ ವಾಟಾಳ್ ಪ್ರತಿಭಟನೆ



ರಾಜ್ಯದಲ್ಲಿ ನಡೆಯುತ್ತಿರುವ ಗಲಭೆ ಖಂಡಿಸಿ ಶಾಸನ ಸಭೆ ಕರೆಯಬೇಕೆಂದು ಒತ್ತಾಯಿಸಿ, ಮೈಸೂರಿನಲ್ಲಿ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ಮೈಸೂರು,ಮೇ4(ಜಿಎ)–ಮಂಗಳೂರು ಘಟನೆ ಸೇರಿದಂತೆ ರಾಜ್ಯದಲ್ಲಿ ನಡೆಯುತ್ತಿರುವ ಗಲಭೆ ಘಟನೆ ಖಂಡಿಸಿ ಕೂಡಲೇ ಶಾಸನ ಸಭೆ ಕರೆಯಬೇಕೆಂದು ಒತ್ತಾಯಿಸಿ, ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕರ್ನಾಟಕದ ಪ್ರಸಿದ್ಧ ಪ್ರವಾಸಿ ತಾಣವಾದ ಮಂಗಳೂರಿನಲ್ಲಿ ಪದೇಪದೆ ಕೋಮು ಗಲಭೆ ನಡೆಯುತ್ತಿವೆ. ಸರ್ಕಾರ ಈ ಕೂಡಲೇ ಎಚ್ಚರಿಕೆ ವಹಿಸಬೇಕು. ಕೂಡಲೇ ಶಾಸನ ಸಭೆ ಕರೆದು ಶಾಂತಿ ಸುವ್ಯವಸ್ಥೆ ಕಾಪಾಡಬೇಕು. ರಾಜ್ಯದಲ್ಲಿ ನಡೆಯುತ್ತಿರುವ ಕೋಮು ದಳ್ಳುರಿ, ಧರ್ಮ ಧರ್ಮಗಳ ನಡುವೆ ದ್ವೇಷ ಭಾವನೆ ಪ್ರಚೋದನಕಾರಿ ಬೆಳವಣಿಗೆಗಳ ಹತ್ತಿಕ್ಕಬೇಕು. ಯಡಿಯೂರಪ್ಪ ಕಾಲದಿಂದಲೂ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಈಗಲಾದರೂ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದರು.

ಕಳೆದ ಜನವರಿ ತಿಂಗಳಿಂದ ಏಪ್ರಿಲ್ ವರೆಗೆ 400ಕ್ಕೂ ಹೆಚ್ಚು ಕೊಲೆ ಕೇಸ್‌ಗಳು, 120 ಅತ್ಯಾಚಾರಗಳು,70ಕ್ಕೂ ಹೆಚ್ಚು ಪೋಕ್ಸೋ ಕೇಸ್‌ಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಕರಣಗಳನ್ನು ಕೂಡಲೇ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೂಡಲೇ ಶಾಸನ ಸಭೆ ಕರೆಯಬೇಕು ಎಂದು ಒತ್ತಾಯಿಸಿದರು.

ಗಾಯಕ ಸೋನು ನಿಗಮ್ ವಿವಾದಾತ್ಮಕ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಗಾಯಕ ಸೋನು ನಿಗಮ್‌ಗೆ ಕನ್ನಡ ಚಿತ್ರರಂಗದಿಂದ ನಿಷೇಧಿಸಿ, ಕನ್ನಡ ಪ್ರತಿಭೆಗಳಿಗೆ ಚಿತ್ರ ಗಾಯನದಲ್ಲಿ ಅವಕಾಶ ಕೊಡಬೇಕು. ಅನ್ಯ ಭಾಷೆಯ ಗಾಯಕರನ್ನು ಹಾಡಿಸುವುದನ್ನು ನಿಲ್ಲಿಸಬೇಕು. ಕನ್ನಡ ಚಿತ್ರರಂಗದ ನಿರ್ಮಾಪಕರು ಸೋನು ನಿಗಮ್‌ಗೆ ಅವಕಾಶ ನೀಡಬಾರದು. ನಟರು ಸೋನು ನಿಗಮ್ ಹಾಡಿಗೆ ಬಾಯಾಡಿಸುವುದನ್ನು ನಿಲ್ಲಿಸಬೇಕು. ಕೂಡಲೇ ಸೋನು ನಿಗಮ್ ಕ್ಷಮೆಯಾಚಿಸಬೇಕು. ಆತನನ್ನು ನಮ್ಮ ಪೊಲೀಸರು ಬಂಧಿಸಿ ಜೈಲಿನಲ್ಲಿಡಬೇಕು. ನಮ್ಮ ಭಾಷೆಯ ಗಾಯಕರಿಗೆ ಅವಕಾಶ ನೀಡಿ ಪ್ರೋತ್ಸಾಹಿಸಬೇಕು. ಬೇರೆ ರಾಜ್ಯದ ಗಾಯಕರಿಂದ ಹಾಡಿಸುವುದನ್ನು ನಮ್ಮ ಚಿತ್ರರಂಗ ನಿಲ್ಲಿಸಬೇಕು ಎಂದು ವಾಟಾಳ್ ಆಗ್ರಹಿಸಿದರು.

ವಸತಿ ಶಾಲೆ, ನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 4–ವಿವಿಧ ಸರ್ಕಾರಿ ವಸತಿ ಶಾಲೆ/ ವಸತಿ ನಿಲಯಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ, ನೇತಾಜಿ ಸುಭಾಷ್‌ಚಂದ್ರ ಬೋಸ್ ಆವಾಸೀಯ ವಿದ್ಯಾಲಯ ವಸತಿ ಶಾಲೆ/ ವಸತಿ ನಿಲಯಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಆಫ್‌ಲೈನ್ ಅಥವಾ ಆನ್‌ಲೈನ್ ಮೂಲಕ ಮೇ 20ರೊಳಗೆ ಅರ್ಜಿ ಸಲ್ಲಿಸಬಹುದು. ದಾಖಲಾತಿ ಬಯಸುವ ವಸತಿ ಶಾಲೆಗಳಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಆಫ್‌ಲೈನ್ ಮೂಲಕ ಇಲ್ಲವೇ ಸಮಗ್ರ ಶಿಕ್ಷಣ ಕರ್ನಾಟಕ ವಿದ್ಯಾವಾಹಿನಿ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾದಾನ ಬೈ ಯು–2025 ಯೋಜನೆ

ಬಳಸಿದ ಪುಸ್ತಕಗಳನ್ನು ಅಗತ್ಯವಿರುವ ವಿದ್ಯಾರ್ಥಿಗಳಿಗೆ ನೀಡಿ

ಮೈಸೂರು, ಮೇ4–ಭಾರತೀಯ ಜೈನ ಸಂಘಟನೆ (ಬಿಜೆಎಸ್), ಮೈಸೂರು ಚಾಪ್ಟರ್, ಪ್ರಥಮ ಪಿಯುಸಿ ಮತ್ತು ಅದಕ್ಕೂ ಮೇಲ್ಪಟ್ಟ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಬಳಸಿದ ಪಠ್ಯಪುಸ್ತಕಗಳನ್ನು ಸಂಗ್ರಹಿಸಲು ವಿದ್ಯಾದಾನ-ಬೈ ಯು–2025 ಯೋಜನೆಯನ್ನು ಆಯೋಜಿಸಿದೆ. ನಂತರ ಅದನ್ನು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅವರ ಅಧ್ಯಯನದ ದೃಷ್ಟಿಯಿಂದ ಸಹಾಯ ಮಾಡಲು ನೀಡಲಾಗುವುದು.

ಭಾರತೀಯ ಜೈನ್ ಸಂಘಟನೆಯು ಏ.27ರಂದು ಪುಸ್ತಕಗಳನ್ನು ಸಂಗ್ರಹಿಸಲು ಆರಂಭಿಸಿದ್ದು, ಮೇ 4 ಮತ್ತು 11ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಈ ಕೆಳಗಿನ ಸ್ಥಳಗಳಲ್ಲಿ ಎರಡು ಸುತ್ತುಗಳು ಪುಸ್ತಕ ಸಂಗ್ರಹ ಕಾರ್ಯ ನಡೆಯಲಿದೆ.

ಶ್ರೀ ಸ್ಥಾನಿಕವಾಸಿ ಜೈನ್ ಭವನ, 3ನೇ ಕ್ರಾಸ್, ಹಳ್ಳದಕೇರಿ; ಶ್ರೀ ತೇರಾಪಂತ್ ಸಭಾ ಭವನ, ಎಂ.ಜಿ.ರಸ್ತೆ ಮತ್ತು ಅದೇಶ್ವರ್ ವಾಟಿಕಾ ಮತ್ತು ಪಾರ್ಶ್ವ ವಾಟಿಕಾ, ಮೈಸೂರು ಹಾಲಿನ ಡೈರಿ ಸಮೀಪ. ಹೆಚ್ಚಿನ ಮಾಹಿತಿಗೆ ಅಮಿತ್ ಚೌಹಾನ್, ಮೊ.98451–12231, ನವರತನ್ ಮಾಲ್ ಪಿಟಿಂರಾ, ಮೊ.94498–15656, ಕೌಶಿಕ್ ರಾಥೋಡ್, ಮೊ.79963–35666, ಪುನೀತ್ ಜುಗ್‌ರಾಜ್, ಮೊ. 95380–25545, ಅಕ್ಷಂಯ್ ವಾಣಿಗೋಟಾ, ಮೊ. 99720–03500, ಹಿಮಾಂಶು ಅಚ್ಚಾ, ಮೊ. 86180–51838 ಸಂಪರ್ಕಿಸಬಹುದು.

ಒಡಿಶಾದ ಇಬ್ಬರ ಬಂಧನ; 32 ಕೆಜಿ ಗಾಂಜಾ ವಶ

ಮೈಸೂರು, ಮೇ 4– ಮೈಸೂರು ಪೊಲೀಸರು ಒಡಿಶಾ ಮೂಲದ ಇಬ್ಬರನ್ನು ಬಂಧಿಸಿ, ಅಪಾರ ಪ್ರಮಾಣದ ಗಾಂಜಾ ವಶಪಡಿಸಿಕೊಂಡಿದ್ದಾರೆ. ಒಡಿಶಾದ ಮಲ್ಕಂಗಿರಿ ಜಿಲ್ಲೆಯ ಮಿಥುನ್ ದಾಲಿ(36) ಹಾಗೂ ಬಬೂಲಾ ಮದಿ(33) ಬಂಧಿತರಾಗಿದ್ದು, ಇವರ ಕಾರಿನಲ್ಲಿ 42 ಬಂಡಲ್‌ಗಳಲ್ಲಿದ್ದ 32 ಕೆಜಿ 625 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಮತ್ತೊರ್ವ ಆರೋಪಿ ಸಾಧಿಕ್ ಪಾಷಾ ತಲೆಮರೆಸಿಕೊಂಡಿದ್ದಾನೆ. ಲಷ್ಕರ್ ಮೊಹಲ್ಲಾ, ಅಕ್ಕಿಚೌಕ, 2ನೇ ಕ್ರಾಸ್‌ನಲ್ಲಿರುವ ಲಾಡ್ಜ್‌ವೊಂದರ ಬಳಿ ಏ.30ರಂದು ರಾತ್ರಿ 7 ಗಂಟೆ ವೇಳೆ ನಿಂತಿದ್ದ ಕಾರಿನಲ್ಲಿ ಗಾಂಜಾ ಇರುವ ಬಗ್ಗೆ ಖಚಿತ ಮಾಹಿತಿ ದೊರೆತ ಕೂಡಲೇ ಸಬ್‌ಇನ್ಸ್‌ಪೆಕ್ಟರ್‌ಗಳಾದ ಕೆ.ಲೇಪಾಕ್ಷ, ರಾಜು ಕೋನಕೇರಿ, ಸಿಬ್ಬಂದಿ ರವಿಕುಮಾರ್, ಪುರುಷೋತ್ತಮ್, ಮಧುಕುಮಾರ್, ಹೆಚ್.ಎಂ ದೇವರಾಜ, ದೊಡ್ಡೇಗೌಡ, ಮೋಹನಾರಾಧ್ಯ ಹಾಗೂ ಮಮತಾ ತಂಡ ದಾಳಿ ನಡೆಸಿದಾಗ ಸಾಧಿಕ್ ಪಾಷಾ ಪರಾರಿಯಾಗಿದ್ದು, ಒಡಿಶಾದ ಇಬ್ಬರು ಸಿಕ್ಕಿಬಿದ್ದಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.05.2025 ಸೋಮವಾರ, ಮಳೆ ನಕ್ಷತ್ರ: ಭರಣಿ 27.04.2025ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ–2025 ಮತ್ತು ರಾಜಗೋಪುರಕ್ಕೆ ಭೂಮಿಪೂಜೆ, ಶ್ರೀ ಕೃಷ್ಣ ದೇವಾಲಯದ 34ನೇ ವಾರ್ಷಿಕೋತ್ಸವದ ಅಂಗವಾಗಿ ಬೆಳಗ್ಗೆ ಗರುಡೋತ್ಸವ, ಸುದರ್ಶನ ಹೋಮ, ರಥೋತ್ಸವ, ಬೆಳಗ್ಗೆ 9ಕ್ಕೆ ಉತ್ಸವ, ಧ್ವಜಾರೋಹಣ, ಕುಂಭಾರಾಧನ ಪೂರ್ವಕ ಯಾಗಶಾಲಾ ಪ್ರವೇಶ, ಸಂಜೆ 6ಕ್ಕೆ ಚತುಸ್ಥಾನಾರ್ಚನ ಪೂರ್ವಕ, ವಿಷ್ಣು ಸಹಸ್ರನಾಮ ಹೋಮ, ಚಂದ್ರಮಂಡೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, 3ನೇ ಹಂತ, ಗೋಕುಲಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ, ಶ್ರೀ ನಟರಾಜ ಪೋಸ್ಟ್‌ಗ್ರಾಜ್ಯುಯೇಟ್ ಸೆಂಟರ್ (ಎಂಕಾಂ):** ವಿಶೇಷ ಉಪನ್ಯಾಸ, ವಿಷಯ: ಹಣಕಾಸು ವರದಿ ಮತ್ತು ವರ್ಗಾವಣೆ ಬೆಲೆಗಳ ಪರಿಕಲ್ಪನೆಯಲ್ಲಿ ಐಎಫ್‌ಆರ್‌ಗಳ ಪ್ರಾಮುಖ್ಯತೆ ಮತ್ತು ಎಎಲ್‌ಸಿಯಲ್ಲಿ ಬಳಸುವ ವಿಧಾನಗಳು, ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾ ಸ್ವಾಮೀಜಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಕನ್ನಡ ಸಾಹಿತ್ಯ ಪರಿಷತ್ತು 111ನೇ ವರ್ಷದ ಸಂಸ್ಥಾಪನಾ ದಿನಾಚರಣೆ, ಉದ್ಘಾಟನೆ: ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದಿಸುವವರು: ವಿಶ್ರಾಂತ ಪ್ರಾಧ್ಯಾಪಕ ಡಾ.ಡಿ.ಕೆ.ರಾಜೇಂದ್ರ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು ಭವನ, ವಿಜಯನಗರ, ಬೆಳಗ್ಗೆ 10ಕ್ಕೆ.

■ **ಬ್ಯಾಂಟರ್ ಬಾಬು ಪಬ್ಲಿಕೇಷನ್ :** ವಿಶ್ವ ವ್ಯಂಗ್ಯ ಚಿತ್ರಕಾರರ ದಿನಾಚರಣೆ ಅಂಗವಾಗಿ ವ್ಯಂಗ್ಯಚಿತ್ರಕಾರ ಹಾಗೂ ಘುಲ್ ಬ್ರೈಟರ್ ಎಂ.ವಿ.ನಾಗೇಂದ್ರಬಾಬು ಅವರ ವ್ಯಂಗ್ಯ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಹಿರಿಯ ಚಿತ್ರ ಕಲಾವಿದ ಎನ್.ಬಿ.ಕಾವೇರಪ್ಪ, ಸ್ಥಳ: ಶ್ರೀ ಕಲಾನಿಕೇತನ, ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ, ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಎಂ.ರಾಘವೇಂದ್ರ, ಎಂ. ಎ. ಶೋಭಾ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ–ಭಾಗವಹಿಸುತ್ತಾರೆ, ನಿರ್ಮಾಣ–ನಂದನ್‌ಕುಮಾರ್. ಎಲ್.ಒ, 8.35–ಮನೆ ಮನೆಯ ಹಣತೆ, ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ. 8.50–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ರಾಷ್ಟ್ರೀಯ ಗ್ರಂಥಾಲಯ ಸಂಸ್ಥಾಪಕರಾದ ಬಿ.ಎಸ್.ಕೇಶವನ್ ಅವರೊಂದಿಗೆ ಡಾ.ಹಾ.ಮಾ.ನಾಯಕ್ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಾರುಣಿ. ಪಿ. ರಾವ್–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ –ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ ವಿಶ್ವ ಥಲೆಸೀಮಿಯಾ ದಿನಾಚರಣೆ ಸಂಬಂಧವಾಗಿ ಕಾರ್ಯಕ್ರಮ. ಥಲೆಸೀಮಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮೈಸೂರು ಘಟಕದ ಖಜಾಂಚಿ ಡಾ.ಶರತ್‌ಕೀರ್ತಿ. ಆರ್ ಮತ್ತು ಮಕ್ಕಳ ಹೆಮಟಾಲಜಿಸ್ಟ್ ಮತ್ತು ಅಂಕಾಲಜಿಸ್ಟ್ ಡಾ.ಸೌಮ್ಯ ಜೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, ಜಯಂತಿ. ವಿ.ಭಟ್,2.40 ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಪದ್ಮಶಂಕರ್, ವಯೋಲಿನ್ ವಾದನ, 4.00–ಮಹಿಳಾರಂಗ, ಅಕ್ಕಾ ಕೇಳವ್ವ ಮಹಿಳೆಯರ ಕೋರಿಕೆಯ ಚಿತ್ರಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, ಸಂಕಲನ–ನೇತ್ರಾ ಕೆ, 4.45–ಹಿಂದಿ ಪಾಠ–ಪ್ರಸ್ತುತಿ: ಎಸ್.ಈಶ್ವರಭಟ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕಿರುಹಣ್ಣುಗಳ ಬೇಸಾಯ ಕುರಿತು ಬೆಂಗಳೂರಿನ ತೋಟಗಾರಿಕಾ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಜಿ.ಎಸ್.ಕೆ.ಸ್ವಾಮಿ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ, ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105 ಘಟಿಕೋತ್ಸವದಲ್ಲಿ ಕನ್ನಡ ಎಂ.ಎ. ವಿಷಯದಲ್ಲಿ ಪ್ರಥಮ rankನೊಂದಿಗೆ 11 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಹೆಚ್. ಡಿ.ಕೋಟೆ ತಾಲೂಕು ಕುಣಿಗಲು ಗ್ರಾಮದ ಕಾವ್ಯ ಸಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರಪಂಚಂ ಸೀತಾರಾಮ್–ಕೊಳಲುವಾದನ, 10.00–ರೂಪಕ, 10.30–ಸವಿನೆನಪು, ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 5 ಸೋಮವಾರ 2025

ಸಂಪುಟ: 46 | ಸಂಚಿಕೆ: 19 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪಹಲ್ಗಾಮ್ ಉಗ್ರರ ದಾಳಿ: ಭಾರತ–ಪಾಕ್ ನಡುವೆ ಹೆಚ್ಚಿದ ಉದ್ವಿಗ್ನತೆ

ವಾಯುಸೇನೆ ಮುಖ್ಯಸ್ಥರಿಂದ ಪ್ರಧಾನಿ ಮೋದಿ ಭೇಟಿ

• ಭಾರತದ ವಿರುದ್ಧ ವಕ್ರದೃಷ್ಟಿ ಬೀರಿದವರಿಗೆ ತಕ್ಕ ತಿರುಗೇಟು: ರಕ್ಷಣಾ ಸಚಿವ ರಾಜನಾಥ್‌ಸಿಂಗ್ • ಪಾಕ್‌ಗೆ ಮತ್ತೆರಡು ಅಣೆಕಟ್ಟುಗಳ ನೀರು ಬಂದ್

ನವದೆಹಲಿ, ಮೇ 4– ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ಮಧ್ಯೆ, ವಾಯುಪಡೆಯ ಮುಖ್ಯಸ್ಥ ಮಾರ್ಷಲ್ ಎಪಿ ಸಿಂಗ್ ಇಂದು ಪ್ರಧಾನಿ ನರೇಂದ್ರ ಮೋದಿಯ ವರನ್ನು ಭೇಟಿಯಾದರು. ಪ್ರಧಾನ ಮಂತ್ರಿ ಮತ್ತು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ ನಡುವಿನ ಪ್ರತ್ಯೇಕ ಸಭೆಯ ನಂತರ 24 ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ವಾಯುಪಡೆಯ ಮುಖ್ಯಸ್ಥರೊಂದಿಗಿನ ಚರ್ಚೆ ನಡೆಯಿತು. ಕಳೆದ ವಾರ ಪ್ರಧಾನಿಯವರು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರನ್ನು ಭೇಟಿ ಮಾಡಿದ್ದರು.


ಪ್ರಧಾನಮಂತ್ರಿ ನರೇಂದ್ರ ಮೋದಿ

ಸಭೆಯ ಅಧಿಕೃತ ವರದಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿಲ್ಲವಾದರೂ, ಏಪ್ರಿಲ್ 22 ರಂದು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಗುಂಪಿನ ಮೇಲೆ ಭಯೋತ್ಪಾದಕರು ಗುಂಡು ಹಾರಿಸಿದ ದಾಳಿಗೆ ಪ್ರತಿಕ್ರಿಯೆಯಾಗಿ ನಡೆಯುತ್ತಿರುವ ಚರ್ಚೆಗಳ ಭಾಗವಾಗಿ ಇದನ್ನು ನೋಡಲಾಗುತ್ತಿದೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 28 ಪ್ರವಾಸಿಗರು ಸಾವಿಗೀಡಾಗಿದ್ದು, ಈ ಘಟನೆ ಭಾರತವನ್ನು ಕೆರಳುವಂತೆ ಮಾಡಿದೆ. ಉಗ್ರರ ದಾಳಿಯನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ ಸರ್ಕಾರ, ದಾಳಿ ನಡೆದ ಮರುದಿನವೇ ಸಂಪುಟ ಸಮಿತಿಯ (ಸಿಸಿಎಸ್) ಸಭೆಯ ನಡೆಸಿತ್ತು.

ಉಗ್ರ ದಾಳಿಗೆ ಬಲವಾಗಿ ಪ್ರತಿಕ್ರಿಯಿಸಲು ತಂತ್ರ, ಗುರಿಗಳು ಮತ್ತು ಸಮಯವನ್ನು ನಿರ್ಧರಿಸಲು ಸರ್ಕಾರವು ಈ ಸಭೆ ನಡೆಸಿದ್ದು, ಸಭೆಯಲ್ಲಿ ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆಯ ಪರಮಾಧಿಕಾರವನ್ನು ನೀಡಿತ್ತು.

ಭಯೋತ್ಪಾದಕ ದಾಳಿಯ ರೂವಾರಿಗಳ ವಿರುದ್ಧ ಸರ್ಕಾರವು ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇವೆಂದು ವಿರೋಧ ಪಕ್ಷಗಳು ತಿಳಿಸಿದ್ದವು. ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆಗಳು ಯಶಸ್ವಿಯಾಗಿ ನಡೆದ ನಂತರ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಕಾರ್ಯಗಳು ಉತ್ತಮವಾದ ಹಿನ್ನೆಲೆಯಲ್ಲಿ ಉಗ್ರರ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಭಾರತದ ವಿರುದ್ಧ ವಕ್ರದೃಷ್ಟಿ ಬೀರಿದವರಿಗೆ ತಕ್ಕ ತಿರುಗೇಟು: ಭಾರತದ ಮೇಲೆ ವಕ್ರದೃಷ್ಟಿ ಬೀರುವವರಿಗೆ ತಕ್ಕನಾದ ಪ್ರತ್ಯುತ್ತರ ಕೊಡುವುದು ನನ್ನ ಕರ್ತವ್ಯ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.

ಪಹಲ್ಗಾಮ್ ದಾಳಿಗೆ ಕಾರಣರಾದ ಯಾರನ್ನೂ ಸುಮ್ಮನೆ ಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿರುವ ಬೆನ್ನಲ್ಲೇ ರಾಜನಾಥ್ ಅವರು ಈ ಹೇಳಿಕೆ ನೀಡಿರುವುದು ಮಹತ್ವ ಪಡೆದಿದೆ. ದೆಹಲಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿ ಮಾತನಾಡಿದ ಸಚಿವ, ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಶೈಲಿ, ಅವರ ದಿಟ್ಟ ನಿರ್ಧಾರ, ಜೀವನದಲ್ಲಿ ಅವರು ತೆಗೆದುಕೊಳ್ಳುವ ಸವಾಲುಗಳ ಬಗ್ಗೆ ಜನರಿಗೆ ಈಗಾಗಲೇ ತಿಳಿದಿದೆ. ಮೋದಿ ಸರ್ಕಾರದಿಂದ ನೀವು ಏನು ಆಗಬೇಕೆಂದು ಬಯಸಿದ್ದೀರೋ, ಅದು ಖಂಡಿತ ಆಗಲಿದೆ ಎಂದಿದ್ದಾರೆ. ಈ ದೇಶದ ರಕ್ಷಣಾ ಸಚಿವನಾಗಿ ಭದ್ರತಾ ಪಡೆಗಳ ಬೆನ್ನಿಗೆ ನಿಲ್ಲುವುದು, ಗಡಿ ಸುರಕ್ಷತೆ ಖಾತರಿಪಡಿಸಿಕೊಳ್ಳುವುದು ಹಾಗೂ ದೇಶದ ಮೇಲೆ ವಕ್ರದೃಷ್ಟಿ ಬೀರಿದವರಿಗೆ ತಕ್ಕ ತಿರುಗೇಟು ನೀಡುವುದು ನನ್ನ ಕರ್ತವ್ಯ ಎಂದು ರಾಜನಾಥ್ ಹೇಳಿದ್ದಾರೆ.


ಅಮರ್‌ಪ್ರೀತ್ ಸಿಂಗ್


ಮತ್ತೆರಡು ಅಣೆಕಟ್ಟುಗಳ ನೀರು ಬಂದ್: ಪಹಲ್ಗಾಮ್ ಉಗ್ರ ದಾಳಿ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನತೆ ಉಲ್ಬಣವಾಗಿರುವಂತೆಯೇ ಇತ್ತ ಪಾಕಿಸ್ತಾನಕ್ಕೆ ಭಾರತ ಸರ್ಕಾರ ಮತ್ತೊಂದು ಶಾಕ್ ನೀಡಿದೆ. ಈಗಾಗಲೇ ಸಿಂಧೂ ನದಿಯ ನೀರು ಸ್ಥಗಿತ ಮಾಡಿರುವ ಭಾರತ ಇದೀಗ ಪಾಕಿಸ್ತಾನಕ್ಕೆ ಮತ್ತೊಂದು ಆಘಾತ ನೀಡಿದೆ. ಪಾಕಿಸ್ತಾನಕ್ಕೆ ಹರಿಯುತ್ತಿದ್ದ ಬಾಗ್ಲಿಹಾರ್ ಅಣೆಕಟ್ಟು ಸೇರಿದಂತೆ 2 ಅಣೆಕಟ್ಟುಗಳ ನೀರನ್ನೂ ಕೂಡ ಭಾರತ ನಿಲ್ಲಿಸಿದೆ.

ಭಾರತವು ಚೆನಾಬ್ ನದಿಯ ಬಾಗ್ಲಿಹಾರ್ ಅಣೆಕಟ್ಟಿನ ಮೂಲಕ ನೀರಿನ ಹರಿವನ್ನು ಸ್ಥಗಿತಗೊಳಿಸಿದೆ. ಇದಲ್ಲದೆ ಝೀಲಂ ನದಿಯ ಕಿಶನ್‌ಗಂಗಾ ಅಣೆಕಟ್ಟಿನಲ್ಲೂ ಇದೇ ರೀತಿಯ ಕ್ರಮಗಳನ್ನು ಯೋಜಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಎರಡೂ ಅಣೆಕಟ್ಟುಗಳು ಜಲ ವಿದ್ಯುತ್ ಕೇಂದ್ರಗಳಾಗಿದ್ದು, ಜಮ್ಮುವಿನ ರಾಂಬನ್‌ನಲ್ಲಿರುವ ಬಾಗ್ಲಿಹಾರ್ ಮತ್ತು ಉತ್ತರ ಕಾಶ್ಮೀರದ ಕಿಶನ್‌ಗಂಗಾ – ಭಾರತಕ್ಕೆ ನೀರು ಬಿಡುಗಡೆಯ ಸಮಯವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ನೀಡುತ್ತವೆ ಎಂದು ಹೇಳಲಾಗಿದೆ.

ಈ ಹಿಂದೆ ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ನಡೆದ ಸಿಂಧೂ ಜಲ ಒಪ್ಪಂದವು 1960 ರಿಂದ ಭಾರತ ಮತ್ತು ಪಾಕಿಸ್ತಾನದ ನಡುವೆ ಸಿಂಧೂ ನದಿ ಮತ್ತು ಅದರ ಉಪನದಿಗಳ ಬಳಕೆಯನ್ನು ನಿಯಂತ್ರಿಸುತ್ತಿದೆ. ಬಾಗ್ಲಿಹಾರ್ ಅಣೆಕಟ್ಟು ಎರಡು ನೆರೆಹೊರೆಯವರ ನಡುವೆ ದೀರ್ಘಕಾಲದ ವಿವಾದದ ವಿಷಯವಾಗಿದೆ. ಪಾಕಿಸ್ತಾನ ಹಿಂದೆ ಇದೇ ವಿಚಾರವಾಗಿ ವಿಶ್ವಬ್ಯಾಂಕ್ ಮಧ್ಯಸ್ಥಿಕೆಯನ್ನು ಕೋರಿತ್ತು.

ಕಾಂಗ್ರೆಸ್‌ನ ಇತಿಹಾಸದ ತಪ್ಪುಗಳ ಜವಾಬ್ದಾರಿ ಹೊರುವೆ



ನವದೆಹಲಿ, ಮೇ 4– ಕಾಂಗ್ರೆಸ್ ಮಾಡಿದ ಬಹಳಷ್ಟು ತಪ್ಪುಗಳು ನಾನು ಪಕ್ಷದಲ್ಲಿ ಇಲ್ಲದಿದ್ದಾಗ ಸಂಭವಿಸಿವೆ. ಪಕ್ಷವು ತನ್ನ ಇತಿಹಾಸದಲ್ಲಿ ಮಾಡಿದ ಎಲ್ಲಾ ತಪ್ಪುಗಳ ಜವಾಬ್ದಾರಿಯನ್ನು ತೆಗೆದುಕೊಳ್ಳಲು ನಾನು ಹೆಚ್ಚು ಸಂತೋಷಪಡುತ್ತೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

1984ರ ಗಲಭೆಗಳು ಮತ್ತು ಸಿಖ್ ಸಮುದಾಯದೊಂದಿಗಿನ ಕಾಂಗ್ರೆಸ್ ಸಂಬಂಧದ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ. 80ರ ದಶಕದಲ್ಲಿ ನಡೆದಿದ್ದು ತಪ್ಪು ಎಂದು ನಾನು ಸಾರ್ವಜನಿಕವಾಗಿ ಹೇಳಿದ್ದೇನೆ ಎಂದು ಅವರು ಹೇಳಿದ್ದಾರೆ. ಏಪ್ರಿಲ್ 21 ರಂದು ಅಮೆರಿಕದ ಬ್ರೌನ್ ವಿಶ್ವವಿದ್ಯಾಲಯದ ವ್ಯಾಟ್ಸನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟರ್‌ನ್ಯಾಷನಲ್ ಆಂಡ್ ಪಬ್ಲಿಕ್ ಅಫೇರ್ಸ್‌ನಲ್ಲಿ ನಡೆದ ■ 6ನೇ ಪುಟಕ್ಕೆ

ರೈತರ ಪಂಪ್‌ಸೆಟ್‌ಗಳಿಗೆ ಹಗಲಲ್ಲಿ ವಿದ್ಯುತ್ ನೀಡಲು ತೀರ್ಮಾನ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಣೆ

ಹಾವೇರಿ, ಮೇ 4– ಕುಸುಮ್ ಯೋಜನೆ ಮೂಲಕ ಪ್ರತಿ ತಾಲೂಕಿನಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕ ಸ್ಥಾಪನೆ ಮಾಡಿ ಇದರಿಂದ ಹಗಲು ಹೊತ್ತಿನಲ್ಲಿಯೇ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ನೀಡಲು ಸರ್ಕಾರ ತೀರ್ಮಾನ ಮಾಡಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ಹೇಳಿದರು.

ಹಾವೇರಿ ಜಿಲ್ಲೆಯ ಹಾನಗಲ್ ವಿಧಾನ ಸಭಾ ಕ್ಷೇತ್ರದ ಅಕ್ಕಿ ಆಲೂರಿನಲ್ಲಿ ಭಾನುವಾರ ನಡೆದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾಜಿ ಸಿಎಂ ಬಂಗಾರಪ್ಪ ಅವರ ಅವಧಿಯಲ್ಲಿ ರೈತರ ಪಂಪ್ ಸೆಟ್‌ಗೆ ಉಚಿತ ವಿದ್ಯುತ್ ನೀಡಲಾಯಿತು. 2013ರ ಕಾಂಗ್ರೆಸ್ ಸರ್ಕಾರದ ವೇಳೆ ನಾನು ಇಂಧನ ಸಚಿವನಾಗಿದ್ದಾಗ ರೈತರ ಪಂಪ್ ಸೆಟ್‌ಗಳಿಗೆ ನೀಡುವ ■ 6ನೇ ಪುಟಕ್ಕೆ



ಪಾಕಿಸ್ತಾನಕ್ಕೆ ಫಿರಂಗಿ, ಮದ್ದು ಗುಂಡುಗಳ ಕೊರತೆ: ಯುದ್ಧ ಸಾಮರ್ಥ್ಯ ಕೇವಲ 4 ದಿನಗಳವರೆಗೆ ಸೀಮಿತ

ಇಸ್ಲಾಮಾಬಾದ್, ಮೇ 4– ಪಹಲ್ಗಾಮ್ ಉಗ್ರರ ದಾಳಿ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಪಾಕಿಸ್ತಾನದ ಸೇನೆಯು ಫಿರಂಗಿ, ಮದ್ದು ಗುಂಡುಗಳ ತೀವ್ರ ಕೊರತೆಯನ್ನು ಎದುರಿಸುತ್ತಿದೆ. ಇದು ಅದರ ಯುದ್ಧ ಸಾಮರ್ಥ್ಯವನ್ನು ಕೇವಲ 4 ದಿನಗಳವರೆಗೆ ಸೀಮಿತಗೊಳಿಸಿದೆ.

ಈ ಕೊರತೆಗೆ ಪ್ರಮುಖ ಕಾರಣ ಪಾಕಿಸ್ತಾನವು ಇತ್ತೀಚೆಗೆ ಉಕ್ರೇನ್ ಜೊತೆ ಮಾಡಿಕೊಂಡ ಶಸ್ತ್ರಾಸ್ತ್ರ ಒಪ್ಪಂದವಾಗಿದ್ದು, ಇದು ತನ್ನ ಯುದ್ಧೋಪಕರಣಗಳನ್ನು ಖಾಲಿ ಮಾಡಿದೆ. ಸೇನೆಗೆ ಮದ್ದುಗುಂಡುಗಳನ್ನು ಪೂರೈಸುವ ಪಾಕಿಸ್ತಾನ್ ಆರ್ಡನೆನ್ಸ್ ಫ್ಯಾಕ್ಟರಿಗಳು (ಪಿಓಎಫ್) ಹೆಚ್ಚುತ್ತಿರುವ ಜಾಗತಿಕ ಬೇಡಿಕೆ ಮತ್ತು ಹಳತಾದ ಉತ್ಪಾದನಾ ಸೌಲಭ್ಯಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿವೆ ಎಂದು ಎಎನ್‌ಐ ವರದಿ ಮಾಡಿದೆ.

ಪರಿಣಾಮವಾಗಿ ಯುದ್ಧಸಾಮಗ್ರಿಗಳನ್ನು ಮರುಪೂರಣಗೊಳಿಸಲಾಗಿಲ್ಲ. ಪಾಕಿಸ್ತಾನದ ಯುದ್ಧ ಸಾಮಗ್ರಿ ನಿಕ್ಷೇಪಗಳು


ಪಾಕಿಸ್ತಾನದ ಫಿರಂಗಿ ಪಡೆಯ ಸಂಗ್ರಹ ಚಿತ್ರ

ಕೇವಲ 96 ಗಂಟೆಗಳ ಕಾಲ ಮಾತ್ರ ತೀವ್ರ ಸಂಘರ್ಷವನ್ನು ತಡೆದುಕೊಳ್ಳಬಲ್ಲವು. ಇದರಿಂದಾಗಿ ಪಾಕಿಸ್ತಾನಿ ಸೇನೆಯು ದುರ್ಬಲಗೊಳ್ಳುತ್ತದೆ.

ಸಂಖ್ಯಾತ್ಮಕವಾಗಿ ಬಲಾಢ್ಯವಾಗಿರುವ ಭಾರತೀಯ ಸೇನೆಯ ವಿರುದ್ಧ ಕ್ಷಿಪ್ರ ಸಜ್ಜುಗೊಳಿಸಲು ಪಾಕ್ ಸೇನೆಯು ಫಿರಂಗಿ ಮತ್ತು ಶಸ್ತ್ರಸಜ್ಜಿತ ಘಟಕಗಳನ್ನು ಅವಲಂಬಿಸಿದೆ. ಆದಾಗ್ಯೂ ಉಕ್ರೇನ್‌ಗೆ 155 ಎಂಎಂ ಮದ್ದುಗುಂಡುಗಳನ್ನು ಮಾರಾಟ ಮಾಡಿದ ನಂತರ ಪಿಓಎಫ್ ದೇಶೀಯ ಸಂಗ್ರಹಣೆಯನ್ನು ಮರುಪೂರಣಗೊಳಿಸಲು ಹೆಣಗಾಡುತ್ತಿದೆ ಎಂದು ವರದಿಗಳು ಹೇಳುತ್ತವೆ. ದೇಶದ ಭದ್ರತಾ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರ ಬೇಡಿಕೆಗಳನ್ನು ಪೂರೈಸುವ ಪಾಕಿಸ್ತಾನದ ನಿರ್ಧಾರವು ಕಾರ್ಯತಂತ್ರದ ಅಸ್ತಿತ್ವದ ವಿರುದ್ಧ ಆರ್ಥಿಕ ಹತಾಶೆಯನ್ನು ಸಮತೋಲನಗೊಳಿಸುವ ಪ್ರಯತ್ನವಾಗಿದೆ ಎಂದು ಐಎಎನ್‌ಎಸ್ ವರದಿ ಮಾಡಿದೆ. ಪಾಕಿಸ್ತಾನದ ಆರ್ಥಿಕ ಬಿಕ್ಕಟ್ಟು, ಹೆಚ್ಚಿನ ಹಣದುಬ್ಬರ, ಹೆಚ್ಚುತ್ತಿರುವ ಸಾಲ ಮತ್ತು ಕ್ಷೀಣಿಸುತ್ತಿರುವ ವಿದೇಶಿ ವಿನಿಮಯ ಮೀಸಲು, ಮಿಲಿಟರಿ ಕಾರ್ಯಾಚರಣೆಯ ಸಾಮರ್ಥ್ಯಗಳ ಮೇಲೆ ಮತ್ತಷ್ಟು ಪರಿಣಾಮ ಬೀರಿದೆ. ■ 6ನೇ ಪುಟಕ್ಕೆ

ನಿಮ್ಮ ಪತ್ರಗಳು

ಪ್ರಧಾನಿ ಮೋದಿ ಅವರಿಗೊಂದು ಪತ್ರ

1971ರ ಯುದ್ಧದಲ್ಲಿ ಇಂದಿರಾ ಗಾಂಧಿ ಮಾಡಿದಂತೆ ನೀವೂ ಭೌಗೋಳಿಕ ಪ್ರದೇಶ ಸೃಷ್ಟಿಸಿ

ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಜಿ, ತೀವ್ರವಾಗಿ ಮನಸ್ಸಿನಲ್ಲಿ ಗಾಯಗೊಂಡ ಭಾರತದ ಜಾತ್ಯಾತೀತ ನಾಗರಿಕ, ಎಂಬತ್ತರ ಪ್ರಾಯದ ನಿಮ್ಮ ಹಿತೈಷಿಯ ಶುಭಾಶಯಗಳು.


ನರೇಂದ್ರ ಮೋದಿ

ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತೀಕಾರ ತೀರಿಸಿಕೊಳ್ಳಲೇಬೇಕು. ಇತ್ತೀಚೆಗೆ ಬಿಹಾರದ ನೆಲದಲ್ಲಿ ನೀವು ಮಾಡಿದ ಸಂಕಲ್ಪ ಕಾರ್ಯಗತಗೊಳಿಸುವ ಮೂಲಕ ಭಯೋತ್ಪಾದಕರು ಹಾಗೂ ಅದಕ್ಕೆ ಬೆನ್ನೆಲುಬಾಗಿರುವವರ ಸಮಾಧಿ ಆಗಲೇಬೇಕು. ಹಾಗೆ ಮಾಡಲು ಇದು ಸುಸಂದರ್ಭ.

1971ರಲ್ಲಿ ಭಾರತ, ಪಾಕಿಸ್ತಾನದೊಂದಿಗೆ ಹೋರಾಡಿ ಬಾಂಗ್ಲಾದೇಶವನ್ನು ಸೃಷ್ಟಿಸಿದ ಯುದ್ಧ ಕುರಿತಾಗಿ ಪ್ರಸಿದ್ಧ ಪತ್ರಕರ್ತ ಮತ್ತು ಲೇಖಕ ಡೋಮ್ ಮೊರೇಸ್ ಅವರ ಮಾತುಗಳನ್ನು ನೆನಪಿಸಿಕೊಳ್ಳಿ. ಇಂದಿರಾ ಗಾಂಧಿಯವರ ವಿಜಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಡೋಮ್ ಮೊರೇಸ್, 'ಶ್ರೀಮತಿ ಇಂದಿರಾ ಗಾಂಧಿ ಇತಿಹಾಸ ಸೃಷ್ಟಿಸಿದ್ದು ಮಾತ್ರವಲ್ಲ, ಜೊತೆಗೆ ಭೌಗೋಳಿಕ ಪ್ರದೇಶವನ್ನು ಸಹ ಸೃಷ್ಟಿಸಿದರು' ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಬರೆದಿದ್ದಾರೆ. ಈಗ ನಮ್ಮ ದೇಶಕ್ಕೆ ಬಂದ ಈ ಸಂಕಷ್ಟದ ಸಮಯದಲ್ಲಿ ಈ ಮಹತ್ವದ ಹೇಳಿಕೆಯನ್ನು ನಿಮಗೆ ನೆನಪಿಸಲು ಬಯಸುತ್ತೇನೆ. ಏಕೆಂದರೆ, ನೀವು ಕೂಡ ಇಂದಿರಾ ಗಾಂಧಿಯವರಂತೆ ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಮತ್ತು ಇತಿಹಾಸದ ಜೊತೆಗೆ ನಮ್ಮ ದೇಶದ ಹಿತಕ್ಕೆ ಬೇಕಾದ ಭೌಗೋಳಿಕತೆ ಪ್ರದೇಶವನ್ನು ಸೃಷ್ಟಿಸಬೇಕು.

ಭಾರತಕ್ಕೆ ಹೋಲಿಸಿದರೆ ಕರವಸ್ತ್ರ ಗಾತ್ರದ ಇಸ್ಲಾಮಿಕ್ ರಾಷ್ಟ್ರವಾದ ಬಾಂಗ್ಲಾದೇಶ, ಕೋಳಿ ಕತ್ತು (ಚಿಕನ್ ನೆಕ್) ಎಂದೂ ಕರೆಯಲ್ಪಡುವ ಕಿರಿದಾದ ಸಿಲಿಗುರಿ ಕಾರಿಡಾರ್ ಅನ್ನು ಸ್ವಾಧೀನಪಡಿಸಿಕೊಂಡು ಅಸ್ಸಾಂ ರಾಜ್ಯವನ್ನು ವಶಪಡಿಸಿಕೊಳ್ಳುವ ಬೆದರಿಕೆ ಹಾಕುವ ದುರಹಂಕಾರವನ್ನು ಪ್ರದರ್ಶಿಸಿದೆ. ಆದುದರಿಂದ ಈ ಕಿರಿದಾದ ಸಿಲಿಗುರಿಯ ಸುತ್ತಲಿನ ಬಾಂಗ್ಲಾದೇಶದ ಪ್ರದೇಶವನ್ನು ಆಕ್ರಮಿಸಿಕೊಳ್ಳಬೇಕು ಮತ್ತು ಸಿಲಿಗುರಿ ಕಾರಿಡಾರ್ ಅನ್ನು ವಿಸ್ತರಿಸಬೇಕು. ಜೊತೆಗೆ ತಕ್ಷಣ ಈ ಸ್ಥಳದಲ್ಲಿ ಕದ್ದು ಬರುವ ನುಸುಳುಕೋರರನ್ನು ತಡೆಯಲು ತಕ್ಕ ಭದ್ರತಾ ಗೋಡೆ–ಬೇಲಿ ಹಾಕಬೇಕು.

ಈ ಕಡೆ ಪಶ್ಚಿಮದಲ್ಲಿ, ಕಾಶ್ಮೀರದ ಪಿಓಕೆ ಎಂದು ಕರೆಯಲ್ಪಡುವ ಪಾಕಿಸ್ತಾನದವರು 'ಕದ್ದ' ಭಾಗವನ್ನು (ನಮ್ಮ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪ್ರಯೋಗಿಸಿದ ಪದ) ಮರಳಿ ಪಡೆದುಕೊಳ್ಳಬೇಕು. ಆಗ ಮಾತ್ರ, ಭಾರತದ ಸಾರ್ವಭೌಮತ್ವ ಮತ್ತು ಅದರ ಪ್ರದೇಶಗಳಲ್ಲಿ ಐಕ್ಯತೆ ಹಾಗೂ ಸಮಗ್ರತೆಯನ್ನು ನಮ್ಮ ಸಂವಿಧಾನದ ಪೀಠಿಕೆಯಂತೆ ಪುನಃಸ್ಥಾಪಿಸಲು ಸಾಧ್ಯವಾಗಲಿದೆ.

ಭಾರತ ಈಗ ಪಾಕಿಸ್ತಾನದ ಮೇಲೆ ಯುದ್ಧದ ದಾಳಿ ಮಾಡುವುದಾದರೆ ಮೊದಲು ಈ ಕೆಲಸ ಮುಗಿಸಬೇಕು. ಸನಾತನ ಧರ್ಮದ ನೆಲೆಯಾದ ಈ ಭೂಮಿ ಶತಮಾನಗಳಿಂದಲೂ ಶಾಂತಿಪ್ರಿಯರ ಭೂಮಿಯಾಗಿಯೇ ಉಳಿಯಿತು. ಹಾಗಾಗಿ ಪರಕೀಯರು ನಮ್ಮ ದೇಶವನ್ನು ಆಕ್ರಮಿಸಿದರು. ಈಗ ನಮ್ಮ ಭೂಮಿಯನ್ನು ಇಸ್ಲಾಂ ದೇಶಗಳಾದ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಂದ ಉಳಿಸಿಕೊಳ್ಳಲು ಮತ್ತು ನಮ್ಮ ಜನರನ್ನು ರಕ್ಷಿಸಲು ಮಹಾಭಾರತ ಧರ್ಮ ಯುದ್ಧ ಮಾಡುವ ಸಮಯ ಒದಗಿಬಂದಿದೆ. ಭಾರತಕ್ಕೆ ಜಯವಾಗಲಿ, ನಿಮಗೆ ಶುಭವಾಗಲಿ.

–ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ'

ಮೈಸೂರಲ್ಲಿ ಮರಗಳಿಗಿಲ್ಲ ಉಳಿಗಾಲ

■ ಹವಾಮಾನ ವೈಪರೀತ್ಯದಿಂದ ಬುದ್ಧಿ ಕಲಿಯದ ಜನ ■ ರಸ್ತೆ ಬದಿಯಲ್ಲಿರುವ ಮರಗಳಿಗೆ ಮೊಳೆ ಹೊಡೆದು ಹಿಂಸೆ ■ ಕೆಲವೆಡೆ ಅಂಗಡಿಗಳ ಬೋರ್ಡ್‌ಗೆ ಅಡ್ಡಲಾಗಿದೆ ಎಂದು ಕಡಿತ ■ ಮರಗಳ ಸಂರಕ್ಷಣೆಗೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಆಗ್ರಹ


ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿ ಕತ್ತರಿಸಲ್ಪಟ್ಟ ಹೊಂಗೆ ಮರ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಮೇ 4– ರಸ್ತೆ ಅಗಲೀಕರಣಕ್ಕಾಗಿ ಹೈದರಾಲಿ ರಸ್ತೆಯಲ್ಲಿ 41 ಮರಗಳ ಹನನ ಪ್ರಕರಣ ಪರಿಸರ ಪ್ರೇಮಿಗಳನ್ನು ಆಕ್ರೋಶಕ್ಕೆ ಈಡು ಮಾಡಿತ್ತಾದರೂ, ಮೈಸೂರಿನ ವಿವಿಧೆಡೆ ರಸ್ತೆ ಬದಿಯಲ್ಲಿ ಬೆಳೆದಿದ್ದ ಮರಗಳನ್ನು ಸದ್ದಿಲ್ಲದೇ ಸಾಯಿಸುವಂತಹ ಸಂಚು ನಡೆಯುತ್ತಿದ್ದು, ಮರಗಳ ಸಂರಕ್ಷಣೆಗೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪರಿಸರ ಪ್ರೇಮಿಗಳು ಆಗ್ರಹಿಸಿದ್ದಾರೆ.

ಮೈಸೂರಿನ ಪ್ರಮುಖ ರಸ್ತೆಗಳಾಗಿರುವ ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ದಶಕಗಳ ಹಿಂದೆ ಬೆಳೆದಿದ್ದ ಗಿಡ–ಮರವನ್ನು, ಅಂಗಡಿಗಳ ಫಲಕಕ್ಕೆ ಅಡ್ಡಿಯಾಗುತ್ತದೆ ಎಂಬ ಕಾರಣದಿಂದ ಕೆಲ ಅಂಗಡಿಗಳ ಮಾಲೀಕರು ಆ್ಯಸಿಡ್ ಸೇರಿದಂತೆ ವಿವಿಧ ರಾಸಾಯನಿಕ ವಸ್ತುಗಳನ್ನು ಸಿಂಪಡಿಸಿ ಮರಗಳಿಲ್ಲದಂತೆ ಮಾಡಿ, ಇದೀಗ ಮೈಸೂರು ನಗರಕ್ಕೆ ಸಂಚಕಾರವನ್ನು ತಂದೊಡ್ಡಿದ್ದಾರೆ.

ಇದೀಗ ಅದೇ ಮಾದರಿಯಲ್ಲಿ ಬೆಳೆದು ನಿಂತಿರುವ ಮರಗಳನ್ನು ನಿಧಾನ ಗತಿಯಲ್ಲಿ ಸಾಯಿಸುವ ದುರಾಳತನಕ್ಕೆ ಕೆಲವು ಕಿಡಿಗೇಡಿಗಳು ಮುಂದಾಗಿದ್ದು, ಇದರಿಂದ ಭವಿಷ್ಯದಲ್ಲಿ ಮೈಸೂರು ನಗರ ಹವಾಮಾನ ವೈಪರೀತ್ಯದಿಂದ ಜನರು ನರಳಾಡುವಂತಹ



ಸ್ಥಿತಿಗೆ ದೂಡಲ್ಪಡುತ್ತಿದ್ದಾರೆ. ಹೈದರಾಲಿ ರಸ್ತೆಯ ಅಗಲೀಕರಣಕ್ಕಾಗಿ ರಸ್ತೆಯ ಎರಡೂ ಬದಿಯಲ್ಲಿ ಬೆಳೆದಿದ್ದ 41 ಮರಗಳನ್ನು ರಾತ್ರೋರಾತ್ರಿ ಹನನ ಮಾಡಿದ ಪ್ರಕರಣ ರಾಜ್ಯದಾದ್ಯಂತ ಸದ್ದು ಮಾಡಿತ್ತು. ಅಲ್ಲದೇ ಮಾನಂದವಾಡಿ ರಸ್ತೆ ಮತ್ತು ದಟ್ಟಗಳ್ಳಿಯಲ್ಲೂ ರಸ್ತೆ ಅಗಲೀಕರಣ ಮತ್ತು ವಿದ್ಯುತ್ ಲೈನ್‌ಗಾಗಿ 300 ಮರಗಳ ಕಡಿತಕ್ಕೆ ಗುರುತು ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಪರಿಸರವಾದಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮರಗಳ ಕಡಿತಕ್ಕೆ ಬ್ರೇಕ್ ಹಾಕುವಂತೆ ಒಕ್ಕೊರಲಿನಿಂದ ಆಗ್ರಹಿಸಿದ್ದರು.

ಆ ಬಳಿಕ ಮರ ಉಳಿಸಿ ಅಭಿಯಾನಕ್ಕೆ ಕರೆ ನೀಡಿದ್ದರು. ಇದೀಗ ಸದ್ದಿಲ್ಲದೇ ಮರಗಳಿಗೆ ಕೇಡು ಬಯಸುತ್ತಿರುವ ದುರುಳರ ವಿರುದ್ಧ ಮತ್ತೊಂದು ಹಂತದ ಹೋರಾಟ ಆರಂಭಿಸುವುದಕ್ಕೆ ಪರಿಸರವಾದಿಗಳು ನಿರ್ಧರಿಸಿದ್ದಾರೆ. ಮೈಸೂರಿನ ವಿವಿಧ ರಸ್ತೆ ಬದಿ ಬೆಳೆದಿರುವ ಮರಗಳ ಸಂರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಮರಗಳಿಗೆ ಅನಗತ್ಯವಾಗಿ ಮೊಳೆ ಹೊಡೆದು ಹಿಂಸಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಮೈಸೂರಿನ ನ್ಯೂ ಕಾಂತರಾಜ ಅರಸ್ ರಸ್ತೆಯ ವೇದಾಂತ ಹೆಮ್ಮಿಗೆ ವೃತ್ತದಿಂದ ಶ್ರೀಕಂಠ ಶರ್ಮ ವೃತ್ತ (ಗಾಡಿ ಚೌಕ)ದ ಕಡೆಗೆ ಹೋಗುವ ರಸ್ತೆಯ ಎರಡೂ ■ 6ನೇ ಪುಟಕ್ಕೆ


ಮೈಸೂರಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿನ ಮರಗಳಿಗೆ ಮೊಳೆ ಹೊಡೆದಿರುವುದು.

ನಕ್ಕರೆ ಅದೇ ಸ್ವರ್ಗ

ತಂದೆ : ಮಗನೇ... ಅಮೆರಿಕಾದಲ್ಲಿ 15 ವರ್ಷದ ಮಕ್ಕಳು ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲಬಲ್ಲರು.

ಮಗ : ಆದರೆ ಪಪ್ಪಾ, ಭಾರತದಲ್ಲಿ ಒಂದು ವರ್ಷದ ಮಗುವೂ ತನ್ನ ಸ್ವಂತ ಕಾಲಿನ ಮೇಲೆ ನಿಲ್ಲುತ್ತದೆ. 15 ವರ್ಷದವರೆಗೂ ಕಾಯಲ್ಲ ಪಪ್ಪಾ!

ಮೈಸೂರು ಮಿತ್ರ

ಸೋಮವಾರ, 5 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ನೆಮ್ಮದಿಯ ಜೀವನಕ್ಕೆ ಕೆಲವರನ್ನು ಕ್ಷಮಿಸಿ ಬಿಡಿ, ಇನ್ನೂ ಕೆಲವರನ್ನು ಮರೆತು ಬಿಡಿ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುತ್ತ ಬಡಿದರೆ, ಹಾವು ಸಾಯೋದಿಲ್ಲ

ನಿಮ್ಮ ಪತ್ರಗಳು

■ ಲಂಚವಿಲ್ಲದೆ ಕೆಲಸ ಪಡೆದವರಿಂದ ಲಂಚಕ್ಕೆ ಕೈಚಾಚಿ ಆತ್ಮವಂಚನೆ

ಮಾನ್ಯರೆ,

ಒಂದು ರೂಪಾಯಿ ಲಂಚವಿಲ್ಲದೆ ಒಂದು ಸಾವಿರ ಗ್ರಾಮ ಆಡಳಿತಾಧಿಕಾರಿಗಳ ನೇಮಕ ಮಾಡಿರುವ ಸರ್ಕಾರದ ನಡೆ ಶ್ಲಾಘನೀಯ. ಸರ್ಕಾರಿ ಕೆಲಸಕ್ಕೆ ಸೇರಲು ಹಾತೊರೆಯುವವರು ಕೆಲಸ ಸಿಕ್ಕ ಕೂಡಲೇ, ವಿಧಾನಸೌಧದ ಮುಂಭಾಗದಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯ ಅವರು ಕೆತ್ತಿಸಿರುವ ಸರ್ಕಾರಿ ಕೆಲಸ ದೇವರ ಕೆಲಸ ಎಂಬ ಸಂಗತಿ ಮರೆತು ಲಂಚ ಹೊಡೆಯುವುದರಲ್ಲೇ ಮಗ್ನರಾಗಿ ತಮಗೆ ತಾವೇ ಆತ್ಮವಂಚನೆ ಮಾಡಿಕೊಂಡರು, ಏನು ಆಗಿಲ್ಲವೇನೋ ಎಂದು ಇರುವುದನ್ನು ಪ್ರತಿಯೊಬ್ಬರೂ ಪ್ರತಿದಿನ ನೋಡುತ್ತಿದ್ದೇವೆ.

ಕರ್ನಾಟಕ ಇತಿಹಾಸದಲ್ಲೇ ಲಂಚವಿಲ್ಲದೆ ನೇಮಕ ಅಂದರೆ ಇದೇ ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿ, ಕಂದಾಯ ಇಲಾಖೆಯದು ಅತ್ಯಂತ ಜವಾಬ್ದಾರಿಯುತ ಕೆಲಸ. ನಮ್ಮ ರಾಜ್ಯದಲ್ಲಿ ಸಣ್ಣ ಹಿಡುವಳಿದಾರರು, ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರಿಗೆ ತೊಂದರೆ ಕೊಡುವುದಾಗಲೀ, ಭ್ರಷ್ಟಾಚಾರಕ್ಕಾಗಲೀ ಅವಕಾಶ ಕೊಡಬಾರದು, ಅವರಿಗೆ ಅನುಕೂಲ ಕಲ್ಪಿಸುವುದು ಆಡಳಿತಾಧಿಕಾರಿಗಳ ಜವಬ್ದಾರಿಯಾಗಿರುತ್ತದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ಸ್ವಾಗತಾರ್ಹ.

ವಿಧಾನಸೌಧದಿಂದ ಹಿಡಿದು ತಳಮಟ್ಟದ ಗ್ರಾಮ ಪಂಚಾಯಿತಿ ತನಕ ಎಲ್ಲ ಇಲಾಖೆಗಳಲ್ಲೂ ಲಂಚ ತೆಗೆದುಕೊಳ್ಳುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ಮುಖ್ಯಮಂತ್ರಿಗಳು ಕಡಿವಾಣ ಹಾಕಿ ಸರ್ಕಾರಿ ಕೆಲಸ ಮಾಡಿಸಿಕೊಳ್ಳಲು ಕಚೇರಿಗಳಿಗೆ ಅಲೆದಲೆದು ಸಾಕಾಗಿರುವ ಜನತೆಗೆ ಅನುಕೂಲ ಕಲ್ಪಿಸುವುದು ಸೂಕ್ತ. **–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.**

■ ಖರ್ಗೆ ಹೇಳಿಕೆ ಸ್ವಾಗತಾರ್ಹ

ಮಾನ್ಯರೆ,

ಪಾಕ್ ಬೆಂಬಲಿತ ಉಗ್ರಗಾಮಿಗಳನ್ನು ಮಟ್ಟ ಹಾಕಲು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕೈಗೊಳ್ಳುವ ಯಾವುದೇ ಕ್ರಮಕ್ಕೂ ತಮ್ಮ ಪಕ್ಷ ಬೆಂಬಲ ನೀಡುತ್ತದೆಂಬ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಸ್ವಾಗತಾರ್ಹವಾಗಿದೆ.

ಇಂತಹ ವಿಚಾರದಲ್ಲಿ ಯಾವುದೇ ಪಕ್ಷ ರಾಜಕೀಯ ಬೆರೆಸಬಾರದು. ರಾಷ್ಟ್ರದ ಭದ್ರತೆ ಮತ್ತು ಸಮಗ್ರತೆ ಸಂರಕ್ಷಣೆ ಎಲ್ಲಾ ಪಕ್ಷಗಳ ಆದ್ಯ ಕರ್ತವ್ಯವಾಗಿದೆ. ಕಾಂಗ್ರೆಸ್ ಸೇರಿದಂತೆ ಬಹುತೇಕ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಲಿದೆ. ನೀಚ ಪಾಕಿಸ್ತಾನದ ವಿರುದ್ಧ ಈಗಾಗಲೇ ಅತ್ಯಂತ ಬಿಗುವಿನ ರಾಜಕೀಯ ಕ್ರಮ ಕೈಗೊಂಡಿರುವ ಭಾರತ, ಅಗತ್ಯವಾದರೆ, ಯುದ್ಧಕ್ಕೂ ಸಿದ್ಧವಾಗಿದೆ. ಆದರೆ ಅದು ಕೊನೆಯ ಅಸ್ತ್ರವಾಗಿರಲಿ.

–ಕೆ.ವಿ.ವಾಸು, ವಕೀಲರು–ನೋಟರಿ, ವಿವೇಕಾನಂದನಗರ.

■ ಅಮೃತ್ ನೀರಿನ ಯೋಜನೆ ಹಣ ಏನಾಯಿತು?

ಮಾನ್ಯರೆ,

ಮೈಸೂರಿನ ಬೋಗಾದಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅಮೃತ್ ಕುಡಿಯುವ ನೀರಿನ ಯೋಜನೆ ಉತ್ತಮವಾಗಿ ಜಾರಿಗೊಂಡಿದೆ. ಹೊಸ ಸಂಪರ್ಕ ನೀಡಲಾಗುತ್ತಿದೆ ಅಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಆದರೆ ವಾಸ್ತವದಲ್ಲಿ ಹೊಸದಾಗಿ ಒಂದು ಹೊಸ ನಲ್ಲಿ ನೀರಿನ ಸಂಪರ್ಕ ಕೊಟ್ಟ ಉದಾಹರಣೆ ಸಿಗುತ್ತಿಲ್ಲ. ಉದಾಹರಣೆಗೆ ಈ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕ್ರೈಸ್ಟ್ ಶಾಲೆಯ ಸುತ್ತಮುತ್ತಲಿನ ಯಾವುದೇ ಲೇಔಟ್‌ಗೆ ಈವರೆಗೆ ಯಾರೂ ನೀರಿನ ಸಂಪರ್ಕ ಕೊಟ್ಟಿಲ್ಲ. ಜನ ಉಪ್ಪು ನೀರಿನ ಸಮಸ್ಯೆಯಿಂದ ತತ್ತರಿಸಿದ್ದಾರೆ. ಈ ಬಗ್ಗೆ ವಿಚಾರಿಸಿದರೆ ಇಂದು–ನಾಳೆ, ಹೊಸ ಟ್ಯಾಂಕ್ ನಿರ್ಮಾಣ ಬಳಿಕ, ಹೀಗೆ ಕೇವಲ ಭರವಸೆ ನೀಡಿ ಸಾರ್ವಜನಿಕರನ್ನು ಅಧಿಕಾರಿಗಳು ಸಾಗ ಹಾಕುತ್ತಿದ್ದಾರೆ. ಇಂದಿನವರೆಗೂ ಇಲ್ಲಿಗೆ ಪೈಪ್‌ಲೈನ್ ನಿರ್ಮಾಣಗೊಂಡಿಲ್ಲ. ಕಬಿನಿ ನೀರು ಹರಿಸುವ ಯಾವುದೇ ಕುರುಹು ಕಾಣಿಸುತ್ತಿಲ್ಲ. ಹಾಗಾದರೆ ಅಮೃತ್ ಯೋಜನೆಯ ಹಣ ಹೇಗೆ ಖರ್ಚಾಗುತ್ತಿದೆ? ಯಾವುದಕ್ಕೆ ಅಧಿಕಾರಿಗಳು ಈ ಹಣವನ್ನು ವೆಚ್ಚ ಮಾಡುತ್ತಿದ್ದಾರೆ? ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಯಬೇಕಿದೆ. **–ಸುರಭಿ ಭಟ್, ರೂಪನಗರ ಮುಖ್ಯ ರಸ್ತೆ, ಮೈಸೂರು.**

■ ಮೋರಿ ಸಮಸ್ಯೆ ಪರಿಹರಿಸಿ



ಮಾನ್ಯರೆ,

ಬೆಂಗಳೂರು–ಮೈಸೂರು ಹೆದ್ದಾರಿಗೆ ಸಂಪರ್ಕಿಸುವ ರಸ್ತೆ ಸಂತ ಫಿಲೋಮಿನಾ ಪ್ರೌಢಶಾಲೆ ಎದುರು, ದೇವಸ್ಥಾನದ ಮುಂದೆ, ಪಾಲಿಕೆ ವಲಯ 7 ಕಚೇರಿ ಹಿಂಭಾಗ ವರ್ಷಪೂರ್ತಿ ನೀರು, ಮೋರಿ ಹಾಗೂ ರಸ್ತೆಯ ಮಟ್ಟ ಒಂದೇ. ಹಾಗಾಗಿ ರಸ್ತೆಯ ನೀರು ಮೋರಿಗೆ ಹೋಗಲು ಕಸ ತುಂಬಿದ ಕಾರಣ ಹಾಗೂ ಅವೈಜ್ಞಾನಿಕ ಕಾಮಗಾರಿ ಪ್ರತಿಫಲ ಪಾದಚಾರಿ ಮಾರ್ಗ ಇಲ್ಲವಾಗಿದೆ. ಹಲವು ವರ್ಷಗಳಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆ ಅನುಭವಿಸುವಂತಾಗಿದೆ. ಆದರೂ ಪಾಲಿಕೆ ಅಧಿಕಾರಿಗಳು ಇದರ ಪರಿವೇ ಇಲ್ಲದಂತೆ ಇದೆ ಮಾರ್ಗದಲ್ಲಿ ದಿನನಿತ್ಯ ಓಡಾಡುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸೂಕ್ತ ಪರಿಹಾರ ಕಲ್ಪಿಸಲು ಮನವಿ. **–ಶ್ರೀಕಂಠಮೂರ್ತಿ, ಸ್ಥಳೀಯ ನಿವಾಸಿ.**

■ ಫಲಿತಾಂಶ ವಿಶೇಷ ..!

ಮಾನ್ಯರೆ,

ಈ ಬಾರಿ 22 ವಿದ್ಯಾರ್ಥಿಗಳು
ಎಸ್‌ಎಸ್‌ಎಲ್‌ಸಿಯಲ್ಲಿ
ಗಳಿಸಿದ್ದಾರೆ 625ಕ್ಕೆ 625
ಪೂರ್ಣ ಮಾರ್ಕು !
ಆರಕ್ಕೆ ಆರು ವಿಷಯಗಳಲ್ಲಿ
ನಪಾಸಾದವರೂ
ಕತ್ತರಿಸಿಹರಂತೆ ಕೇಕು !

–ಮ.ಗು.ಬಸವಣ್ಣ, ಸೌರಭ, ಜೆಎಸ್‌ಎಸ್ ಬಡಾವಣೆ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಮಕ್ಕಳಿಗೆ ಚೆಲ್ಲಾಟ... ಹೆತ್ತವರಿಗೆ ಪ್ರಾಣ ಸಂಕಟ...!



ಇಂದಿನ ಮಕ್ಕಳ ಆದ್ಯತೆಗಳನ್ನು ತಿಳಿಯುವುದು ಹೆತ್ತವರಿಗೆ ದುಸ್ತರವಾಗಿದೆ. ತಾಯಿ–ತಂದೆಯರ ಆರ್ಥಿಕ ಪರಿಸ್ಥಿತಿಯನ್ನು ಅರಿಯದೆ ಇಲ್ಲಸಲ್ಲದ್ದನ್ನು ಡಿಮ್ಯಾಂಡ್ ಮಾಡುತ್ತಾರೆ. ಅದರಲ್ಲೂ ಕಾಲೇಜು ಮಕ್ಕಳಂತೂ ಅತಿರೇಕ ಪರಮಾವಧಿಯಂತೆ ವರ್ತಿಸುತ್ತಾರೆ. ಕಾಲೇಜಿನ ದುಬಾರಿ ಶುಲ್ಕ ಪಾವತಿಸಲು ಪೋಷಕರು ಸಾಲ ಮಾಡಿರುತ್ತಾರೆ, ಅಷ್ಟಾಗಿಯೂ ಬ್ರ್ಯಾಂಡೆಡ್ ಬಟ್ಟೆಗಳು, ದುಬಾರಿ ವಾಚ್, ನಾಲ್ಕಾರು ಸಾವಿರ ರೂಪಾಯಿಗಳ ಚಪ್ಪಲಿ/ಶೂಗಳಿಗಾಗಿ ಪೀಡಿಸುತ್ತಾರೆ. ಕೆಲವರಂತೂ ದುಬಾರಿ ಬೈಕ್‌ಗಳನ್ನು ಡಿಮ್ಯಾಂಡ್ ಮಾಡುತ್ತಾರೆ. ಆನ್‌ಲೈನ್‌ನಲ್ಲಿ ಅನೇಕ ಅನಗತ್ಯ ವಸ್ತುಗಳನ್ನು ಬುಕ್ ಮಾಡಿ ಹೆತ್ತವರಿಂದ ಹಣ ಪೀಕಿಸುತ್ತಾರೆ. ವಿದ್ಯಾರ್ಜನೆ ಮಾಡುವ ಮಕ್ಕಳಿಗೆ ಊಟ–ತಿಂಡಿ, ಬಟ್ಟೆಬರೆ ಮೊದಲ ಆದ್ಯತೆ ಆಗಬಾರದು. ಆದರೆ ಇಂದಿನ ಮಕ್ಕಳು ನಿತ್ಯ ಕಾಲೇಜಿಗೆ ಹೋಗುವಾಗ ಫ್ಯಾಷನ್ ಶೋಗೆ ಹೋಗುವ ರೀತಿಯಲ್ಲಿ ಸಿದ್ಧವಾಗುವುದು ಮಾತ್ರ ದುರದೃಷ್ಟಕರ.

ಖ್ಯಾತ ಸಾಹಿತಿಗಳಾದ ಬೀಚಿಯವರು ಹಸಿದ ಹೊಟ್ಟೆಗೆ, ಉಕ್ಕುವ ಪ್ರಾಯಕ್ಕೆ ಇರುವ ಕಿವುಡು ಯಾವ ಕಲ್ಲಿಗೂ ಇಲ್ಲ? ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಇಂದಿನ ಯುವ ಪೀಳಿಗೆಯ ವಿಚಿತ್ರ ಆಟಪಾಠ, ನೋಟ, ಹುಚ್ಚಾಟಗಳನ್ನು ಕಂಡಾಗ ಅವರ ಮಾತು ಅಕ್ಷರಶಃ ನಿಜ ಎನಿಸುತ್ತದೆ. ಎಲ್ಲಿ ಓಡುವಿರಿ? ನಿಲ್ಲಿ ಯುವಕರೆ ! ಹುಚ್ಚು ಕನಸುಗಳ ಬದಿಗೊತ್ತಿ, ಅಪ್ಪ ಅಮ್ಮನ ಪರಿಸ್ಥಿತಿಯ ಒಮ್ಮೆ ತಿರುಗಿ ನೋಡಿ. ಅವರ ಶ್ರಮ, ತ್ಯಾಗಗಳ ಒಮ್ಮೆ ತಿಳಿದು ನೋಡಿ. ನಿಮ್ಮ ಆತುರದ ನಿರ್ಧಾರಗಳಿಗೆ ಹೆತ್ತವರ ಹಿತಾಸಕ್ತಿಯನ್ನು ಬಲಿಕೊಡಬೇಡಿ. ಕಣ್ಣೀರ ತರಿಸಬೇಡಿ. ಎಲ್ಲಾ ಯುವಕರಿಗೆ ಈ ಮಾತನ್ನು ಹೇಳುತ್ತಿಲ್ಲ. ಬೇಜವಾಬ್ದಾರಿಯಿಂದ ವರ್ತಿಸುತ್ತಾ ಹೆತ್ತವರ ನೆಮ್ಮದಿಯನ್ನು ಕಸಿಯುತ್ತಿರುವವರಿಗೆ ಕಿವಿಮಾತಿದು.

'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ' ಗಾದೆ ಮಾತೊಂದಿದೆ. ಇದನ್ನು ತುಸು ಮಾರ್ಪಡಿಸಿ ಆಧುನಿಕವಾಗಿ 'ಮಕ್ಕಳಿಗೆ ಪರೀಕ್ಷೆ ಬಂದರೆ ಹೆತ್ತವರಿಗೆ ಜ್ವರ ಬರುತ್ತೆ' ಎನ್ನಬಹುದು. ಇಂದಿನ ದಿನಮಾನದಲ್ಲಿ ಇರುವ ಒಂದೋ, ಎರಡೋ ಮಕ್ಕಳು ಹೆತ್ತವರಿಗೆ ಹೊರೆ ಎನಿಸುತ್ತಿದ್ದಾರೆ. ಹೊರೆ ಆಗಿರುವುದು ಅವರನ್ನು ಸಾಕಿ ಸಲುಹಲು, ದುಬಾರಿಯಾಗಿರುವ ಶಿಕ್ಷಣ ಕೊಡಿಸಲು ಅಷ್ಟೇ ಅಲ್ಲ, ಮಕ್ಕಳ ಮನೋಭಾವಕ್ಕೆ ಹೊಂದಿಕೊಳ್ಳಲು ಕಷ್ಟವಾಗುತ್ತಿರುವುದಕ್ಕೆ. ಎಷ್ಟೋ ಮನೆಗಳಲ್ಲಿ ಮಕ್ಕಳು ಮಾಡುವ ತಪ್ಪಿಗೆ ಹೆತ್ತವರು ಶಿಕ್ಷೆ ಅನುಭವಿಸುತ್ತಾರೆ. ಉದಾಹರಣೆಗೆ ಇಂದಿನ ಅಪ್ರಾಪ್ತ ಮಕ್ಕಳು ಸೈಕಲ್ ಸವಾರಿಯಲ್ಲಿ ಖುಷಿ ಕಾಣುವುದಕ್ಕಿಂತ ಸೈಕಲ್ ಮೋಟಾರ್ ಸವಾರಿಯಲ್ಲಿ ಹೆಚ್ಚು ಖುಷಿ ಕಾಣುತ್ತಾರೆ. ಹೆತ್ತವರ ಹಿತನುಡಿಯನ್ನು ಧಿಕ್ಕರಿಸಿ ಅಪ್ಪ/ಅಮ್ಮನ ಬೈಕ್ ಅಥವಾ ಸ್ಕೂಟರ್‌ನ್ನು ಹದಿಹರೆಯದ ಹುಚ್ಚಿನಲ್ಲಿ ದಿಕ್ಕಾಪಾಲು ಚಲಾಯಿಸಿ ಅಪಘಾತ ಮಾಡಿದರೆ ಕಾನೂನು ಹೆತ್ತವರಿಗೆ ದಂಡ ಸಹಿತ ಶಿಕ್ಷೆ ನೀಡುತ್ತದೆ. ಅದೇ ರೀತಿ ಸಣ್ಣಪುಟ್ಟ ತಪ್ಪುಗಳಿಗೂ ಹೆತ್ತವರು ತಲೆತಗ್ಗಿಸಬೇಕಾದ ಪ್ರಸಂಗಗಳು ನಡೆಯುತ್ತವೆ.

ಉತ್ತಮವಾದ ಕಾಲೇಜಿಗೆ ದಾಖಲು ಮಾಡಿ, ಒಳ್ಳೆಯ ಟ್ಯೂಷನ್ ಕೊಡಿಸಿದ್ದರೂ ಕಡಿಮೆ ಅಂಕ ಗಳಿಸಿದಾಗ ಕಾಲೇಜಿನ ಆಡಳಿತ ಮಂಡಳಿ ಹೆತ್ತವರನ್ನು ಕರೆಯಿಸಿ ಬುದ್ಧಿ ಹೇಳುತ್ತದೆ. ಈ ಸನ್ನಿವೇಶ ನೋಡಿದಾಗ, ಎಷ್ಟೋ ಹೆತ್ತವರು ಈ ಪರಿಸ್ಥಿತಿ ಯಾವ ಶತ್ರುವಿಗೂ ಬೇಡ ಅಂದುಕೊಳ್ಳುತ್ತಾರೆ. ಎಲ್ಲಾ ಮಕ್ಕಳು ಹೀಗೆ ಇರುತ್ತಾರೆ ಅಂತಲ್ಲ. ಹೆತ್ತವರ ಕೆಲಸದಲ್ಲಿ ನೆರವಾಗಿ, ಟ್ಯೂಷನ್ ಇಲ್ಲದೆಯೂ ಉತ್ತಮ ಅಂಕ ಗಳಿಸಿ ಮನೆಗೆ ಕೀರ್ತಿ ತಂದವರೂ ಇದ್ದಾರೆ.

ಅನೇಕ ಮಕ್ಕಳಿಗೆ ಹೆತ್ತವರು ಬುದ್ಧಿ ಮಾತು ಹೇಳಿದರೆ ಇನ್ನಿಲ್ಲದ ಕೋಪ ಬರುತ್ತದೆ. ಹೆತ್ತವರಿಂದ ಅವರು ಪ್ರೀತಿ, ವಿಶ್ವಾಸ, ಕಾಳಜಿ ನಿರೀಕ್ಷಿಸುವುದಕ್ಕಿಂತ ಹೆಚ್ಚಾಗಿ ಅಪ್ಪ ATM ಮೆಷಿನ್ ಆಗಬೇಕು, ಅಮ್ಮ Food Factory ಆಗಬೇಕು ಅಷ್ಟೇ! ಅವರ ಚಲನವಲನಗಳ ಬಗ್ಗೆ ಪ್ರಶ್ನೆ ಮಾಡಿದರೆ, ಎಲ್ಲಿಗೆ ಹೋಗುವಿರಿ? ಎಷ್ಟೊತ್ತಿಗೆ ಬರುವಿರಿ? ಎಂದು ಕೇಳಿದರೆ ಅವರ ಪ್ರತಿಕ್ರಿಯೆ ಖಾರವಾಗಿರುತ್ತದೆ. ಅನೇಕ ಮಕ್ಕಳು ಕಾಲೇಜು/ಟ್ಯೂಷನ್‌ಗೆ ಬಂಕ್ ಮಾಡಿ ಸ್ನೇಹಿತರ ಜೊತೆ ಎಲ್ಲೆಲ್ಲೋ ಸುತ್ತಾಡಲು ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಹೆತ್ತವರು ಮಕ್ಕಳನ್ನು ಪ್ರಶ್ನಿಸುವುದು ತಪ್ಪು ಎಂಬ ಮನೋಭಾವ ಬಹುಪಾಲು ಮಕ್ಕಳಲ್ಲಿದೆ. ಬಿಸಿರಕ್ತದ ಯುವಕರು ಹದಿಹರೆಯದಲ್ಲಿ ದಾರಿ ತಪ್ಪಿದರೆ ಅವರಿಗೆ ಭವಿಷ್ಯಕ್ಕೆ ಮಾರಕವಾಗುತ್ತದೆ ಎಂದು ಭಾವಿಸಿ ಹೆತ್ತವರು ಕಾಳಜಿ ತೋರಿದರೆ ಅವರಿಗೆ ಅದು ಕಿರಿಕಿರಿ ಎನಿಸುತ್ತದೆ.

ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಮೊಬೈಲ್ ಫೋನ್ ಇಂದಿನ ವಿದ್ಯಾರ್ಥಿ ಸಮುದಾಯಕ್ಕೆ ವರವಾಗುವ ಬದಲು ಹೆಚ್ಚು ಶಾಪವಾಗಿದೆ ಎನ್ನಬಹುದು. ಕೋವಿಡ್ ಕಾಲದಲ್ಲಿ ಆನ್‌ಲೈನ್ ತರಗತಿಗೆ ನೆಪದಲ್ಲಿ ಎಳೆಯ ಮಕ್ಕಳು ಹಾಗೂ ಯುವಕರಿಗೆ ವರ ಎನಿಸಿದ ಮೊಬೈಲ್ ಫೋನ್ ಒಂದು ಗೀಳಾದ ಕಾರಣಕ್ಕೆ ಇಂದು ಶಾಪವಾಗಿ ಪರಿಣಮಿಸಿದೆ. ಮೊಬೈಲ್ ಫೋನ್ ಎಂಬುದು ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ ಆಗಿದೆ. ಅಬಾಲವೃದ್ಧರಾಗಿ ಎಲ್ಲರನ್ನು ಇಂದು ಸಾಮಾಜಿಕ ಜಾಲತಾಣಗಳು ತಮ್ಮ ಮಾಯಾಜಾಲಕ್ಕೆ ಸೆಳೆದಿವೆ. ಒಳ್ಳೆಯದರ ಜೊತೆಗೆ ಕೆಟ್ಟದ್ದನ್ನು ಎಗ್ಗಿಲ್ಲದೆ ನೋಡುವ ಅವಕಾಶ ಹೇರಳವಾಗಿದೆ. ಇದರಿಂದ ಅನೇಕ ಯುವಕ/ಯುವತಿಯರು ಅಮೂಲ್ಯ ಸಮಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಎಷ್ಟೋ ಮನೆಯಲ್ಲಿ ಮೊಬೈಲ್ ಫೋನ್ ವಿಚಾರಕ್ಕೆ ಜಗಳಗಳು, ವೈಮನಸ್ಸುಗಳು ಉಂಟಾಗುತ್ತಿವೆ. ಮೊಬೈಲ್ ಫೋನ್ ಕೊಡಿಸಲಿಲ್ಲ ಅಥವಾ ಮೊಬೈಲ್ ಫೋನ್ ಬಳಕೆಗೆ ಕಡಿವಾಣ ಹಾಕಿದರು ಎಂಬ ಕಾರಣಕ್ಕೆ ಮಕ್ಕಳು ತಮ್ಮ ಮಾನಸಿಕ ಸ್ಥಿಮಿತ ಕಳೆದುಕೊಂಡು ಹೆತ್ತವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ಉದಾಹರಣೆಗಳಿವೆ. ಇನ್ನು ಕೆಲವು ಅಯೋಗ್ಯ ಮಕ್ಕಳು ತಮ್ಮ ಅವಿವೇಕದಿಂದ ಆತ್ಮಹತ್ಯೆ ಮಾಡಿಕೊಂಡು ಹೆತ್ತವರನ್ನು ಕಣ್ಣೀರಿನಲ್ಲಿ ಕೈತೊಳೆಸುತ್ತಿದ್ದಾರೆ. ಇವೆಲ್ಲವನ್ನೂ ಗಮನಿಸಿದಾಗ ಇಂದಿನ ಮಕ್ಕಳನ್ನು ಸಾಕುವುದು ಒಂದು ಸವಾಲಾಗಿ ಪರಿಣಮಿಸಿದೆ. ಮುಷ್ಠಿಯಲ್ಲಿ ಹಕ್ಕಿಯೊಂದನ್ನು ಹಿಡಿದಿಡುವಂತಿದೆ. ಅತಿಯಾದ ರಕ್ಷಣೆ ಮಾಡಿ ಮುಷ್ಠಿ ಬಿಗಿ ಹಿಡಿದರೆ ಉಸಿರುಗಟ್ಟಿ ಸಾಯುವಂತೆ ಆಗುತ್ತದೆ, ಮುಷ್ಠಿ ಸಡಿಲಿಸಿದರೆ ಪುರ್ರೆಂದು ಹಾರಿಹೋಗುತ್ತದೆ.

ಇಂದಿನ ವಿದ್ಯಾರ್ಥಿಗಳು ದಿಕ್ಕು ತಪ್ಪಲು ಇಂದು ಅನೇಕ ಕೆಟ್ಟ ಮಾರ್ಗಗಳಿವೆ. ಆನ್‌ಲೈನ್ ಗೇಮ್, ಕ್ರಿಕೆಟ್ ಬೆಟ್ಟಿಂಗ್ ಇವುಗಳು ಆರ್ಥಿಕ ಸಂಕಷ್ಟಕ್ಕೆ ದೂಡಿದರೆ, ಮದ್ಯಪಾನ, ಧೂಮಪಾನ, ಡ್ರಗ್ಸ್ ಸೇವನೆಯಂತಹ ದುರ್ವ್ಯಸನಗಳು ಯುವಕರ ಭವಿಷ್ಯಕ್ಕೆ ಮಾರಕವಾಗಿವೆ. ಮನೆಯಲ್ಲಿ ಮುಗ್ಧರಂತೆ ವರ್ತಿಸುತ್ತಾ ಮುಖವಾಡ ಧರಿಸುವ ಮಕ್ಕಳು ಹೊರ ಪ್ರಪಂಚದಲ್ಲಿ ಬೇರೆಯದೇ ಮುಖ ಹೊಂದಿರುತ್ತಾರೆ. ಅಪ್ಪ–ಅಮ್ಮನಿಂದ ಸುಲಭವಾಗಿ ಹಣ ಪಡೆದು ದುಂದುವೆಚ್ಚ ಮಾಡಿ, ಇಲ್ಲಸಲ್ಲದ ವ್ಯಸನಗಳ ದಾಸರಾಗುತ್ತಿದ್ದಾರೆ. ಹೆಣ್ಣುಮಕ್ಕಳನ್ನು ಸಾಕಿ ಸಲಹುವುದು ಹೆತ್ತವರಿಗೆ ಒಂದು ದೊಡ್ಡ ಜವಾಬ್ದಾರಿಯೇ ಆಗಿದೆ. ಶಿಕ್ಷಣದ ಕಾರಣಕ್ಕೆ ಮನೆಗಿಂತ ಹೆಚ್ಚು ಸಮಯ ಅವರು ಹೊರಗೆ ಕಳೆಯಬೇಕಾದ ಅವಶ್ಯಕತೆ ಇರುತ್ತದೆ. ಬಹುಪಾಲು ಹೆಣ್ಣುಮಕ್ಕಳು ತಮ್ಮ ಹೆತ್ತವರ ಕಾಳಜಿ ಹಾಗೂ ಪ್ರೀತಿ ಅರಿತು ಜವಾಬ್ದಾರಿಯಿಂದ ವರ್ತಿಸುತ್ತಾರೆ. ಹೆತ್ತವರ ಕನಸುಗಳನ್ನು ಈಡೇರಿಸುತ್ತಾರೆ. ಆದರೆ ಕೆಲವು ಹೆಣ್ಣಮಕ್ಕಳು ಹದಿಹರೆಯದ ವಯಸ್ಸಿನಲ್ಲಿ ಹುಡುಗಾಟಿಕೆಯಿಂದ ತುಂಬಾ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಮುಗ್ಧ ಹೆಣ್ಣುಮಕ್ಕಳನ್ನು ಗುರಿಯಾಗಿಸಿಕೊಂಡ ಅವಿವೇಕಿ ಯುವಕರು ಅವರಿಗೆ ಪ್ರೀತಿ ಪ್ರೇಮದ ಬಣ್ಣದ ನಾಟಕವಾಡಿ ಅವರ ಬದುಕನ್ನೇ ಹೈರಾಣ ಮಾಡುತ್ತಿದ್ದಾರೆ. ಲವ್ ಜಿಹಾದ್‌ನಂತಹ ವ್ಯವಸ್ಥಿತ ಜಾಲಕ್ಕೆ ಹೆಣ್ಣುಮಕ್ಕಳು ಅರಿವಿಲ್ಲದೆ ಸಿಲುಕಿ ನರಳುತ್ತಾರೆ. ಪ್ರತಿವರ್ಷ ಹರೆಯದ ಸಾವಿರಾರು ಹೆಣ್ಣುಮಕ್ಕಳು ಕಾಣೆಯಾಗುತ್ತಿರುವುದು ವರದಿಯಾಗುತ್ತಿದೆ. ಅವರು ಏನಾದರು? ಎಲ್ಲಿದ್ದಾರೆ? ಎಂಬ ಮಾಹಿತಿ ಇಲ್ಲದೆ ಪೋಷಕರು ಸಾಯುವವರೆವಿಗೂ ನೋವು ಅನುಭವಿಸುತ್ತಾರೆ. ಮತ್ತೆ ಕೆಲವು ಯುವತಿಯರು ಪ್ರೀತಿ ಪ್ರೇಮದ ಬಲೆಗೆ ಸಿಲುಕಿ, ಅಪ್ಪ–ಅಮ್ಮ ಹುಡುಕಿದ ಯೋಗ್ಯ ವರನಿಗೆ ಕೈಕೊಟ್ಟು ಮದುವೆ ಮಂಟಪದಿಂದ ಓಡಿಹೋಗುವ ಕೆಟ್ಟ ತೀರ್ಮಾನ ಮಾಡುವುದು ಆಘಾತಕಾರಿ ಬೆಳವಣಿಗೆಯಾಗಿದೆ. ಹೆತ್ತವರ ಹಣ ವ್ಯರ್ಥ ಮಾಡುವುದಲ್ಲದೆ, ಸಮಾಜದಲ್ಲಿ ಅವರ ಗೌರವವನ್ನು ಮಣ್ಣುಪಾಲು ಮಾಡಿ ಹೋಗಿ ಬಿಡುತ್ತಾರೆ. ಇವರ ಹುಡುಗಾಟಿಕೆಯ ತಪ್ಪು ತೀರ್ಮಾನಗಳಿಗೆ ಹೆತ್ತವರು ಶಿಕ್ಷೆ ಅನುಭವಿಸುವುದು ಯಾವ ನ್ಯಾಯ?

ಇಂದಿನ ಮಕ್ಕಳ ಆದ್ಯತೆಗಳನ್ನು ತಿಳಿಯುವುದು ಹೆತ್ತವರಿಗೆ ದುಸ್ತರ. ತಾಯಿ–ತಂದೆಯರ ಆರ್ಥಿಕ ಪರಿಸ್ಥಿತಿಯನ್ನು ಅರಿಯದೆ ಇನ್ನಿಲ್ಲದ ಡಿಮ್ಯಾಂಡ್ ಮಾಡುತ್ತಾರೆ. ಅದರಲ್ಲೂ ಕಾಲೇಜು ಮಕ್ಕಳಂತೂ ಅತಿರೇಕ ಪರಮಾವಧಿಯಂತೆ ವರ್ತಿಸುತ್ತಾರೆ. ಕಾಲೇಜಿನ ದುಬಾರಿ ಶುಲ್ಕ ಪಾವತಿಸಲು ಪೋಷಕರು ಸಾಲ ಮಾಡಿರುತ್ತಾರೆ, ಅಷ್ಟಾಗಿಯೂ ಬ್ರ್ಯಾಂಡೆಡ್ ಬಟ್ಟೆಗಳು, ದುಬಾರಿ ವಾಚ್, ನಾಲ್ಕಾರು ಸಾವಿರ ರೂಪಾಯಿಗಳ ಚಪ್ಪಲಿ/ ಶೂಗಳಿಗಾಗಿ ಪೀಡಿಸುತ್ತಾರೆ. ಕೆಲವರಂತೂ ದುಬಾರಿ ಬೈಕ್‌ಗಳನ್ನು ಡಿಮ್ಯಾಂಡ್ ಮಾಡುತ್ತಾರೆ. ಆನ್‌ಲೈನ್‌ನಲ್ಲಿ ಅನೇಕ ಅನಗತ್ಯ ವಸ್ತುಗಳನ್ನು ಬುಕ್ ಮಾಡಿ ಹೆತ್ತವರಿಂದ ಹಣ ಪೀಕಿಸುತ್ತಾರೆ. ವಿದ್ಯಾರ್ಜನೆ ಮಾಡುವ ಮಕ್ಕಳಿಗೆ ಊಟ–ತಿಂಡಿ, ಬಟ್ಟೆಬರೆ ಮೊದಲ ಆದ್ಯತೆ ಆಗಬಾರದು. ಆದರೆ ಇಂದಿನ ಮಕ್ಕಳು ನಿತ್ಯ ಕಾಲೇಜಿಗೆ ಹೋಗುವಾಗ ಫ್ಯಾಷನ್ ಶೋಗೆ ಹೋಗುವ ರೀತಿಯಲ್ಲಿ ಸಿದ್ಧವಾಗುವುದು ಮಾತ್ರ ದುರದೃಷ್ಟಕರ. ಪುಣ್ಯವಶಾತ್ ಹಲವು ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯ ಇದೆ. ಅಷ್ಟಾಗಿಯೂ ಪದವಿ ವಿದ್ಯಾರ್ಥಿಗಳಲ್ಲಿ ಕೆಲವರು ವಸ್ತ್ರ ಸಂಹಿತೆ ಮೀರಿದ ಬಟ್ಟೆಗಳನ್ನು ಧರಿಸಿ, ಅದರಲ್ಲೂ ದುಬಾರಿ ಬೆಲೆಯ ಹರಿದ ಬಟ್ಟೆಗಳನ್ನು ಧರಿಸಿ, ನಮ್ಮ ಸಂಸ್ಕೃತಿಗೆ ಧಕ್ಕೆ ತರುವುದಲ್ಲದೆ, ಬಟ್ಟೆ ಧರಿಸುವ ಉದ್ದೇಶವನ್ನೇ ಹಾಳುಗೆಡವುತ್ತಿರುವುದು ವಿಷಾದನೀಯ.


ಮಕ್ಕಳೇ ಎಲ್ಲಾ ತಪ್ಪುಗಳನ್ನು ಎಸಗುತ್ತಾರೆ ಎಂದು ಇಲ್ಲಿ ಹೇಳುತ್ತಿಲ್ಲ. ಪೋಷಕರ ಪ್ರತಿಷ್ಠೆಯೂ ಸಹ ಮಕ್ಕಳನ್ನು ದಾರಿ ತಪ್ಪಿಸಲು ಪರೋಕ್ಷವಾಗಿ ಕೆಲಸ ಮಾಡುತ್ತಿದೆ. ಮಕ್ಕಳಿಗೆ ಇಷ್ಟವಾದ ಕೋರ್ಸ್ ಕೊಡಿಸುವ ಬದಲು ತಮಗೆ ಇಷ್ಟವಾದ ಕೋರ್ಸ್‌ನ್ನು ಬಲವಂತವಾಗಿ ಕೊಡಿಸುವ ಅನೇಕ ಪೋಷಕರಿದ್ದಾರೆ. ಅಷ್ಟೇ ಅಲ್ಲದೆ ಇಂತಿಷ್ಟು ಅಂಕ ಗಳಿಸಬೇಕೆಂಬ ಷರತ್ತು ಹಾಕುತ್ತಾರೆ. ಉತ್ತಮ ಫಲಿತಾಂಶ ಗಳಿಸಿದರೆ ದುಬಾರಿ ಮೊಬೈಲ್ ಫೋನ್ ಹಾಗೂ ಬೈಕ್ ಕೊಡಿಸುವ ಆಮಿಷ ಒಡ್ಡುತ್ತಾರೆ. ಎಷ್ಟೋ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ತುಂಡು ಉಡುಗೆ ಹಾಕಿಸಿ ಸಂಭ್ರಮಿಸುತ್ತಾರೆ. ಸಮಾಜದಲ್ಲಿ ನಡೆಯುತ್ತಿರುವ ದುಷ್ಕೃತ್ಯಗಳು ತಿಳಿದಿದ್ದರೂ ಮಕ್ಕಳಿಗೆ ಬುದ್ಧಿ ಹೇಳಲು ಮುಂದಾಗುವುದಿಲ್ಲ. ಶಿಕ್ಷಣದ ಉದ್ದೇಶವನ್ನೇ ಮರೆತು, ಕೇವಲ ಉತ್ತಮ ಸಂಬಳ ಗಿಟ್ಟಿಸುವ ಕೆಲಸಕ್ಕಾಗಿ ಶಿಕ್ಷಣ ಎಂಬ ಧ್ಯೇಯದಿಂದ ಇವೆಲ್ಲವೂ ಆಗುತ್ತಿವೆ.

ಹೆತ್ತವರು ಮಕ್ಕಳಿಗೆ ಕೇಳಿದ್ದನ್ನೆಲ್ಲಾ ಕೊಡಿಸಿದರೆ ಸಾಲದು, ಸಂಸ್ಕಾರವನ್ನು ಸಹ ಕೊಡಬೇಕು. ಮಕ್ಕಳು ಅಷ್ಟೇ, ಸ್ನೇಹಿತರ ಆಯ್ಕೆಯಲ್ಲಿ ಎಚ್ಚರ ವಹಿಸಬೇಕು. ಕೇವಲ ಅಕ್ಷರಸ್ಥನಾದರೆ ಸಾಲದು, ವಿದ್ಯಾವಂತರ ಲಕ್ಷಣವಾದ ವಿವೇಕ ಹಾಗೂ ವಿನಯವಂತಿಕೆ ಇರಬೇಕು. ಮಕ್ಕಳು ಏನೇ ಸಾಧನೆ ಮಾಡಿದರೂ ಪ್ರಜ್ಞಾವಂತಿಕೆಯಿಂದ ವರ್ತಿಸಬೇಕು. ಹೆತ್ತವರು ನೊಂದುಕೊಳ್ಳುವ ಕೃತ್ಯಗಳನ್ನು ಮಾಡಬಾರದು. ಯೌವನದ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗಬಾರದು. ಮನೆಗೆ ಹಾಗೂ ಸಮಾಜಕ್ಕೆ ಕಂಟಕವಾಗಬಾರದು. ಆಗ ಅವರು ಮನೆಗೂ ಆಸ್ತಿ, ದೇಶಕ್ಕೂ ಆಸ್ತಿಯಾಗುತ್ತಾರೆ.

ಹೂರಣ : ಮಕ್ಕಳು ಹೆತ್ತವರ ಕಣ್ಣಲ್ಲಿ ಆನಂದಬಾಷ್ಪ ತರಿಸುವ ಸಾಧನೆ ಮಾಡಬೇಕೆ ಹೊರತು ಆಧಿಬಾಷ್ಪ ತರಿಸಬಾರದು

ನಾಳೆ ಜ್ಯೋತಿರ್ಲಿಂಗ ದರ್ಶನ ಅವಕಾಶ

ಮೈಸೂರಿನ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲೂ ದರ್ಶನ




ಮೈಸೂರು, ಮೇ 4(ಜಿಎ)–ಮೈಸೂರಿನ ಲಲಿತಾದ್ರಿಪುರ ಜೆಎಸ್‌ಎಸ್ ಆಯುರ್ವೇದ ಕಾಲೇಜಿನ ಪಕ್ಕದಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಮೇ 6ರಂದು ಸಂಜೆ 5 ಗಂಟೆಗೆ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ಆಯೋಜಿಸಲಾಗಿದೆ ಎಂದು ಆಶ್ರಮದ ಅಪೆಕ್ಸ್ ಸದಸ್ಯ ಆರ್.ಎ.ರವಿಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಮನಾಥ ಜ್ಯೋತಿರ್ಲಿಂಗ ಸುಮಾರು ಒಂದು ಸಾವಿರ ವರ್ಷ ಹಿಂದಿನದು ಎಂದು ಹೇಳಲಾಗುತ್ತದೆ.

ಈಗಾಗಲೇ ತಮಿಳುನಾಡು, ಕೇರಳ, ಬೆಂಗಳೂರು ಸೇರಿದಂತೆ ವಿವಿಧ ಕಡೆಗಳಲ್ಲಿ ಸಾರ್ವಜನಿಕರಿಗೆ ನೋಡಲು ಅವಕಾಶ ಮಾಡಿಕೊಡಲಾಗಿದೆ. ಮೈಸೂರಿನಲ್ಲಿ ಸಂಜೆ 5ರಿಂದ 8ರವರೆಗೆ ಮಾತ್ರ ದರ್ಶನಕ್ಕೆ ಇಡಲಾಗುವುದು. ಶ್ರೀ ವಿಷ್ಣು ಸ್ವಾಮೀಜಿ ಲಿಂಗವನ್ನು ಮೈಸೂರಿಗೆ ತರುತ್ತಿದ್ದು ನಂತರ ಬೇರೆ ಕಡೆಗೆ ಕೊಂಡೊಯ್ಯಲಾಗುವುದು ಎಂದು ಮಾಹಿತಿ ನೀಡಿದರು.

ದೇಶದ ಎಲ್ಲಾ ಕಡೆಗಳಲ್ಲಿರುವ ಸಾರ್ವಜನಿಕರಿಗೆ ನೋಡಲು ಅವಕಾಶ ಮಾಡಿಕೊಟ್ಟ ಬಳಿಕ ಸೋಮ ನಾಥ ದೇವಾಲಯದಲ್ಲಿ ರವಿಶಂಕರ್ ಗುರೂಜಿ ಅವರು ಜ್ಯೋತಿರ್ಲಿಂಗವನ್ನು ಪ್ರತಿಷ್ಠಾಪನೆ ಮಾಡಲಿದ್ದಾರೆ. ಅದು ಯಾವಾಗ ಎನ್ನುವುದು ಇನ್ನೂ ನಿಗದಿಯಾಗಿಲ್ಲ. ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಆಶ್ರಮದ ಅಪೆಕ್ಸ್ ಸದಸ್ಯರಾದ ಸುರೇಶ್, ಅವಿನಾಶ್ ಆಸರಾನಿ, ಸುಬ್ಬುಶ್ರೇಷ್ಠಿ, ಶಿಕ್ಷಕರಾದ ರೂಪ, ವಿದ್ಯಾ ಉಪಸ್ಥಿತರಿದ್ದರು.



ರವಿಶಂಕರ್ ಗುರೂಜಿ

ಜ್ಯೋತಿರ್ಲಿಂಗದ ಪಾವಿತ್ರ್ಯತೆ ಚರಿತೆ

ಸಹಸ್ರಾರು ವರ್ಷಗಳಿಂದ ಗುಜರಾತಿನ ಸೋಮನಾಥ ದೇವಾಲಯ ಭಾರತ ದೇಶದ ಪ್ರಪ್ರಥಮ ಜ್ಯೋತಿರ್ಲಿಂಗ ಮಂದಿರ ಎಂಬ ಖ್ಯಾತಿ ಗಳಿಸಿದೆ. ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದೆ ಅತ್ಯಂತ ಭವ್ಯ, ದಿವ್ಯ ಮತ್ತು ವಿಶ್ವದ ಶ್ರೀಮಂತ ಮಂದಿರ ಎಂಬ ಮನ್ನಣೆ ಪ್ರಾಪ್ತಿಯಾಗಿತ್ತು. ಅಚ್ಚರಿಯ, ಆದರೆ ಇತಿಹಾಸದಲ್ಲಿ ದಾಖಲಾಗಿರುವಂತೆ ಗಾಳಿಯಲ್ಲಿ ತೇಲುವ ಶಿವಲಿಂಗದ ಬಗ್ಗೆ ಸ್ಪಷ್ಟ ಪುರಾವೆ ಇಲ್ಲಿದೆ.

ಆಯಸ್ಕಾಂತೀಯ ಗುಣವುಳ್ಳ ಅಪರೂಪದ ಶಿಲೆಯಿಂದ ತಯಾರಿಸಲಾಗಿದ್ದ ಶಿವಲಿಂಗವನ್ನು ಘಜ್ನಿ ಮಹಮ್ಮದ್ 1026ರಲ್ಲಿ ಭಗ್ನಗೊಳಿಸಿರುವುದು ಇತಿಹಾಸ ಪುಟಗಳಲ್ಲಿ ದಾಖಲಾಗಿದೆ. 17 ಬಾರಿ ದಂಡೆತ್ತಿ ಬಂದು, ಸೋಮನಾಥ ದೇವಾಲಯವನ್ನು ಲೂಟಿ ಮಾಡಿರುವುದು ಐತಿಹ್ಯ. ತೇಲುವ ಶಿವಲಿಂಗವನ್ನು ಘಜ್ನಿ ಮಹಮ್ಮದ್ ಭಗ್ನಗೊಳಿಸಿದ ನಂತರ ಕೆಲವು ಅವಶೇಷಗಳನ್ನು ಅಂದಿನ ಅಗ್ನಿಹೋತ್ರಿ ಅರ್ಚಕರು ಸಂಗ್ರಹಿಸಿ ದಕ್ಷಿಣ ಭಾರತಕ್ಕೆ ಬಂದು ನೆಲಸಿದರೆಂದು ಮಾಹಿತಿ ಇದೆ. ಆಗಿನ ಅಗ್ನಿಹೋತ್ರಿಗಳು ಭಗ್ನ ಅವಶೇಷಗಳಿಗೆ ಲಿಂಗ ರೂಪ ನೀಡಿ ಪೂಜಿಸಲು ಪ್ರಾರಂಭಿಸುತ್ತಾರೆ.

ಈ ಪರಂಪರೆ ನಡೆದು ಬಂದು, ಅಂದಿನ ಸಂರಕ್ಷಕ ರಾದ ಅಗ್ನಿಹೋತ್ರಿಗಳು 1924ರಲ್ಲಿ ಕಂಚಿ ಪರಮಾಚಾರ್ಯ ರಾದ ಶ್ರೀ ಚಂದ್ರಶೇಖರ ಸರಸ್ವತಿ ಮಹಾಸ್ವಾಮಿಗಳನ್ನು ಸಂಪರ್ಕಿಸಿ ಜ್ಯೋತಿರ್ಲಿಂಗದ ಬಗ್ಗೆ ವಿಷಯ ತಿಳಿಸುತ್ತಾರೆ. ಬಹಳ ಆಶ್ಚರ್ಯವೆನಿಸುವ ಮತ್ತು ಸತ್ಯ ಮಾಹಿತಿ ಪ್ರಕಾರ ಮಹಾಸ್ವಾಮಿಗಳು ಜ್ಯೋತಿರ್ಲಿಂಗವನ್ನು ಮತ್ತೆ 100 ವರ್ಷಗಳ ಕಾಲ ಸಂರಕ್ಷಿಸಿ, ಅಯೋಧ್ಯಾ ರಾಮನ ಪುನರ್ ಪ್ರತಿಷ್ಠಾಪನೆ ಆದ ನಂತರ, ಇಂದಿನ ಪ್ರಸಿದ್ಧ ಜಾಗತಿಕ ಸಂತರಾದ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರಿಗೆ ಹಸ್ತಾಂತರಿಸಬೇಕು ಎಂದು ಅಂದೇ ಅನುಗ್ರಹಿಸಿ, ಆಶೀರ್ವದಿಸಿದರೆಂದು ತಿಳಿದು ಬಂದಿದೆ.

ಜ್ಯೋತಿರ್ಲಿಂಗ ಶಿಲೆ ಪರಿಶೀಲಿಸಿದ ವಿಜ್ಞಾನಿಗಳ ಪ್ರಕಾರ ಆಯಸ್ಕಾಂತೀಯ ಗುಣವಿರಬೇಕಾದರೆ ಕಬ್ಬಿಣದ ಅಂಶ ಇರಲೇಬೇಕು. ಆದರೆ ಶಿಲೆಯಲ್ಲಿ ಕೇವಲ 2% ಮಾತ್ರ ಕಬ್ಬಿಣದ ಅಂಶವಿದ್ದರೂ ಆಯಸ್ಕಾಂತೀಯ ಗುಣ ಇರುವುದು ವಿಜ್ಞಾನದ ವಿಸ್ಮಯ. ಇಂತಹ ಇತಿಹಾಸ ಪ್ರಸಿದ್ಧ ಜ್ಯೋತಿರ್ಲಿಂಗದ ದಿವ್ಯ ದರ್ಶನ ಯಾತ್ರೆಯನ್ನು ಭಾರತದಾದ್ಯಂತ ಆಯೋಜಿಸಲಾಗಿದೆ.

ಅತಿಥಿ ಶಿಕ್ಷಕರ ನೇಮಕಕ್ಕೆ ಆಗ್ರಹ

ಮೈಸೂರು, ಮೇ 4(ಎಸ್‌ಪಿಎನ್) – 2025–26ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭಗೊಳ್ಳಲಿದ್ದು, ರಾಜ್ಯಾದ್ಯಂತ ಮೇ29ರಿಂದ ಶಾಲೆಗಳು ಆರಂಭಗೊಳ್ಳಲಿವೆ. ಶಾಲೆ ಆರಂಭಕ್ಕೂ ಮುನ್ನವೇ 50 ಸಾವಿರ ಅತಿಥಿ ಶಿಕ್ಷಕರನ್ನು ಸರ್ಕಾರಿ ಶಾಲೆಗಳಿಗೆ ನೇಮಕ ಮಾಡಿಕೊಳ್ಳುವಂತೆ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕಳೆದ ಸಾಲಿನಂತೆ ಈ ವರ್ಷವೂ ಶಾಲಾ ಆರಂಭಕ್ಕೂ ಮುನ್ನವೇ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು ಅತಿಥಿ ಶಿಕ್ಷಕರನ್ನು ನೇಮಿಸಲು ಸೂಕ್ತ ಕ್ರಮವಹಿಸುವಂತೆ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ನಾಗೇಶ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ, ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ವಿ.ಮಹೇಶ್ ಅವರಲ್ಲಿ ಮನವಿ ಮಾಡಿದ್ದಾರೆ.

ಇಂದು ವಿಶೇಷ ಉಪನ್ಯಾಸ

ಮೈಸೂರು: ಮೇ 5ರಂದು ಸಂಜೆ 5 ಗಂಟೆಗೆ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಸರಸ್ವತಿ ಸಭಾಂಗಣ, ಹಿರಿಯ ನಾಗರಿಕ ಮಂಡಳಿಯಲ್ಲಿ (ಧರ್ಮಸ್ಥಳ ಕಲ್ಯಾಣ ಮಂಟಪ ರಸ್ತೆ) ಸಾರ್ವಜನಿಕ ಆರೋಗ್ಯ– ಕುರಿತು ಆರೋಗ್ಯ ಶಾಸ್ತ್ರ ಪ್ರಾಧ್ಯಾಪಕ ಡಾ.ಕೆ. ಕುಮಾರನ್ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಡಾ.ಹೆಚ್.ಎಂ.ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಭಗೀರಥರ ಆದರ್ಶಗಳ ಅಳವಡಿಸಿಕೊಂಡಾಗ ಮಾತ್ರ ಸಾಧನೆ ಸಾಧ್ಯ

ಭಗೀರಥ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಕೆ.ಹರೀಶ್‌ಗೌಡ ಅಭಿಮತ



ಮೈಸೂರಲ್ಲಿ ಆಯೋಜಿಸಲಾಗಿದ್ದ ಭಗೀರಥ ಮಹರ್ಷಿಗಳ ಭಾವಚಿತ್ರದ ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ಭಾರಿ ಜನಸ್ತೋಮವನ್ನು ಚಿತ್ರದಲ್ಲಿ ಕಾಣಬಹುದು.



ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಭಗೀರಥ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಮೇ 4(ಎಂಟಿವೈ)- ಭಗಿರಥ ಮಹರ್ಷಿಗಳ ಆದರ್ಶ ಹಾಗೂ ಗಂಗೆಯನ್ನು ಭೂಮಿಗೆ ತರಲು ನಡೆಸಿದ ಪ್ರಯತ್ನವನ್ನು ನಾವೆಲ್ಲಾ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಜಿಲ್ಲಾ ಶ್ರೀ ಭಗೀರಥ ಜಯಂತ್ಯುತ್ಸವ ಸಮಿತಿ ವತಿಯಿಂದ ಭಾನುವಾರ ಆಯೋಜಿಸಿದ್ದ ಶ್ರೀ ಭಗಿರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವೆಲ್ಲರೂ ಶುದ್ಧಿಯಾಗಿ, ಪರಿಶುದ್ಧ ಜೀವನ ನಡೆಸುವುದಕ್ಕಾಗಿ ಭಗಿರಥ ಮಹರ್ಷಿಗಳು ಸತತ ಪ್ರಯತ್ನ ಮಾಡಿ, ಗಂಗೆಯನ್ನು ಭೂಮಿಗೆ ಕರೆತಂದರು. ಭಗಿರಥರು ಅಂದು ಪ್ರಯತ್ನ ಮಾಡದಿದ್ದರೆ, ಇಂದು ನಾವೆಲ್ಲಾ ನೆಮ್ಮದಿಯಿಂದ ಬದುಕು ಸಾಗಿಸಲು ಸಾಧ್ಯವಾಗುತ್ತಿರಲಿಲ್ಲ. ನಾವು ಜೀವನದಲ್ಲಿ ಸೋತಾಗ ಹಿರಿಯರು ನಮಗೆ ಭಗೀರಥರಂತೆ ಪ್ರಯತ್ನ ಮಾಡು ಎಂದು ಹೇಳುತ್ತಾರೆ. ಭಗಿರಥರ ಸಾಧನೆ, ಪಟ್ಟ ಶ್ರಮ ಅಪಾರವಾದದ್ದು ಎಂದರು.

ಪುರಾಣದಲ್ಲಿ ವಿಶೇಷ ಸ್ಥಾನ ಹೊಂದಿರುವ ಭಗೀರಥರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಕೊಂಡು ಜೀವನವನ್ನು ಸಾಗಿಸಬೇಕು. ಪ್ರಯತ್ನವನ್ನು ಪದೇ ಪದೆ ಮಾಡುತ್ತಿದ್ದರೆ ತಕ್ಕ ಪ್ರತಿಫಲ ಸಿಗುತ್ತದೆ. ಅದಕ್ಕೆ ನಮಗೆಲ್ಲ ಸ್ಪಷ್ಟ ಉದಾಹರಣೆಯೇ ಭಗೀರಥರಾಗಿದ್ದಾರೆ ಎಂದು ಶಾಸಕರು ತಿಳಿಸಿದರು.

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಭಗೀರಥ ಎಂಬ ಹೆಸರೆ ಒಂದು ಶಕ್ತಿ. ಅವರು ಮಾಡಿದಂತಹ ಸಾಧನೆಗೆ ಅಷ್ಟೊಂದು ಶಕ್ತಿ. ಯಾವುದೇ ವ್ಯಕ್ತಿಯಾದರೂ ಒಂದು ಸಾಧನೆ ಮಾಡಬೇಕೆಂದರೆ ಶ್ರಮ ಮತ್ತು ಪರಿಶ್ರಮ ಎರಡು ಮುಖ್ಯ. ಶ್ರಮ ಮತ್ತು ಪರಿಶ್ರಮ ಭಗೀರಥನ ಪ್ರಯತ್ನ ಅಪಾರವಾದದ್ದು. ಭಗೀರಥರು ಗಂಗೆಯನ್ನು ಭೂಮಿಗೆ ಕರೆತರಲು ಪಟ್ಟ ಶ್ರಮ, ಭಕ್ತಿ, ಛಲ, ಸಾಹಸ, ಸಾಧನೆ ಎಷ್ಟು ಎಂಬುದನ್ನು ನಾವು ತಿಳಿಯಬೇಕು ಎಂದು ಹೇಳಿದರು.

ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಪರ ಆಯುಕ್ತ ಜಗನ್ನಾಥ್ ಸಾಗರ್ ಮಾತನಾಡಿ, ಭಗೀರಥ ಪ್ರಯತ್ನ, ದೇವಗಂಗೆಯನ್ನು ಭೂಮಿಗೆ ತಂದು, ಇಡಿ ಮನುಕುಲವನ್ನು ಉದ್ಧಾರ ಮಾಡಿದ ಮಹಾತ್ಮ ಭಗೀರಥ. ಉಪ್ಪು ಸಕ್ಕರೆಗಿಂತ ಮುಗಿಲಾದುದು ಎಂದು ಕರೆದವರು ಭಗೀರಥರು. ಇಂತಹ ಉಪ್ಪಾರರನ್ನು ಗುರುತಿಸಿ ಅವರಿಗೂ ಸಹ ಸಮಾಜದಲ್ಲಿ ಸಮಾನತೆ ದೊರೆಯುವಂತೆ ಸರ್ಕಾರ ಗಮನಹರಿಸಬೇಕು ಎಂದು ಹೇಳಿದರು.

ಮೆರವಣಿಗೆ: ಭಗಿರಥ ಜಯಂತಿ ಅಂಗವಾಗಿ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಭಗೀರಥ ಮಹರ್ಷಿಗಳ ಭಾವಚಿತ್ರವನ್ನು ಮೆರವಣಿಗೆ ನಡೆಸಲಾಯಿತು. ಉಪ್ಪಾರ ಸಮಾಜದ ಮೂಲ ಕಸುಬಾದ ಉಪ್ಪು ತಯಾರಿಕೆಯನ್ನು ಬಿಂಬಿಸುವ ಉಪ್ಪಿನ ರಾಶಿ, ಗಂಗಾ ಕಳಸ ಪೂಜೆ, ಪುಷ್ಪಾರ್ಚನೆಯೊಂದಿಗೆ ಶ್ರೀ ಭಗೀರಥ ಮಹರ್ಷಿ ಭಾವಚಿತ್ರವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಅಲ್ಲದೆ, ಸತ್ತಿಗೆ, ಸುರಪಾನಿ, ಮಾರಿ ಕುಣಿತ, ಬೀಸು ಕಂಸಾಳೆ, ಡೊಳ್ಳು ಕುಣಿತ, ಕತ್ತಿ ವರಸೆ ಸೇರಿದಂತೆ ವಿವಿಧ ಗ್ರಾಮೀಣ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಭಗೀರಥ ಪೀಠದ ಶ್ರೀ ಡಾ. ಪುರುಷೋತ್ತಮಾನಂದಾಪುರಿ ಸ್ವಾಮಿ ವಹಿಸಿದ್ದರು. ಕನ್ನಡ-ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಜಿ.ಪಂ. ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮೈಸೂರು ಜಿಲ್ಲಾ ಶ್ರೀ ಭಗೀರಥ ಜಯಂತ್ಯುತ್ಸವ ಸಮಿತಿ ಗೌರವ ಸಲಹೆಗಾರ ಕರಳಾಪುರ ನಾಗರಾಜು, ಭಗೀರಥ ಜಯಂತಿ ಸಮಿತಿಯ ಪ್ರಚಾರ ಸಮಿತಿ ಅಧ್ಯಕ್ಷ ಕೆ.ಟಿ. ಮೋಹನ್ ಕುಮಾರ್, ಸ್ವಾಗತ ಸಮಿತಿ ಅಧ್ಯಕ್ಷ ಎಂ.ಮರೀಶೆಟ್ಟಿ, ಆಹಾರ ಸಮಿತಿ ಅಧ್ಯಕ್ಷ ಡಾ.ನಾಗರಾಜ್, ಮೆರವಣಿಗೆ ಸಮಿತಿ ಸದಸ್ಯ ಯೋಗೇಶ್ ಉಪ್ಪಾರ್, ಪ್ರಚಾರ ಸಮಿತಿ ಸದಸ್ಯ ಡಾ.ಎಂ.ಗೋವಿಂದರಾಜು, ಆಹಾರ ಸಮಿತಿ ಸದಸ್ಯ ಟಿ.ಎನ್. ಶಿವಾಜ್, ಮಹದೇವ್, ಜಗನ್ನಾಥ ಇದ್ದರು.

ಹಾಸನ ಮಿತ್ರ

ಉಗ್ರಗಾಮಿಗಳ ಸಂಪೂರ್ಣ ನಾಶಕ್ಕೆ ಪ್ರಧಾನಿ ಮೋದಿ ಕ್ರಮ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ವಿಶ್ವಾಸ



ಹಾಸನ, ಮೇ 4-ಬಂದಂತಹ ಪ್ರವಾಸಿಗರನ್ನು ನಿಷ್ಕರುಣೆಯಿಂದ ಹತ್ಯೆ ಮಾಡಿದಂತಹ ಉಗ್ರಗಾಮಿಗಳನ್ನು ಸಂಪೂರ್ಣವಾಗಿ ನಾಶ ಮಾಡುವವರೆಗೂ ಪ್ರಧಾನಮಂತ್ರಿಗಳು ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಎಂದು ತಿಳಿಸಿದರು.

ತಾಲೂಕಿನ ದ್ಯಾಪಲಾಪುರದ ದೇವಾಲಯ ಉದ್ಘಾಟನೆಗೆ ಆಗಮಿಸಿದ ವೇಳೆ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಕಾಶ್ಮೀರದ ವಿಚಾರದಲ್ಲಿ ಪ್ರಧಾನಮಂತ್ರಿಗಳು ಬಹಳ ಬಿಗಿಯಾದಂತಹ ಕ್ರಮ ತೆಗೆದುಕೊಂಡಿದ್ದು, ಈ ವಿಷಯದಲ್ಲಿ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು ಐಕ್ಯತೆಯನ್ನು ತೋರಿಸಿದ್ದಾರೆ. ಈ ದೇಶದ 150 ಕೋಟಿ ಜನ, ಪ್ರಧಾನಮಂತ್ರಿಗಳ ತೀರ್ಮಾನಕ್ಕೆ ಬದ್ಧರಾಗಿದ್ದರೆ, ಆಗ ಇಂತಹ ದುರ್ಘಟನೆ ನಡೆಯುವುದಿಲ್ಲ. ಈ ವಿಷಯದಲ್ಲಿ ನನ್ನ ಅನುಭವದಿಂದ ಅಭಿಪ್ರಾಯವನ್ನು ತಿಳಿಸಿದ್ದೇನೆ. ಇದು ಸೂಕ್ಷ್ಮವಾದ ವಿಚಾರ. ಈ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೋ ನನ್ನದು, ನನ್ನ ಪಕ್ಷದ್ದು ಕೇಂದ್ರ ಮಂತ್ರಿಯಾಗಿರುವ ಕುಮಾರಸ್ವಾಮಿಯವರ ಪೂರ್ಣ ಬೆಂಬಲ ಇದೆ ಎಂದು ಈಗಾಗಲೇ ಹೇಳಿದ್ದೇನೆ. ಮುಂದೆ ಕೂಡ ಏನು ಕ್ರಮ ತೆಗೆದುಕೊಳ್ಳುತ್ತಾರೋ ಆ ಕ್ರಮಕ್ಕೆ ಇಡೀ ದೇಶ ಪಕ್ಷಭೇದ ಇಲ್ಲದೇ ಎಲ್ಲರೂ ಒಗ್ಗಟ್ಟಾಗಿ ಬೆಂಬಲ ನೀಡಬೇಕು. ಮುಂದೆ ಇಂತಹ ದುಷ್ಕೃತ್ಯ ನಡೆಯಬಾರದು. ಅವರಿಗೆ ಪಾಠ ಕಲಿಸಬೇಕು ಎಂದು ಪ್ರಧಾನಮಂತ್ರಿಗಳು ಪ್ರತಿಜ್ಞೆ ಮಾಡಿದ್ದಾರೆ. ಅವರ ಹಿಂದೆ ನಾವು ನಿಲ್ಲುತ್ತೇವೆ. ಮೊದಲು ಕಾಂಗ್ರೆಸ್ ನಾಯಕರು ಸಹಮತವನ್ನು ವ್ಯಕ್ತಪಡಿಸಿದ್ದರು. ಮಧ್ಯೆ ಸ್ವಲ್ಪ ಒಡಕು ಶಬ್ದ ಬಂದ ಮೇಲೆ ಪುನಃ ಅವರು ಈ ವಿಷಯದಲ್ಲಿ ಐಕ್ಯತೆ ಬಗ್ಗೆ ಪುನಃ ಪ್ರತಿಪಾದಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಭಗೀರಥ ಜಯಂತಿ ಮೆರವಣಿಗೆಗೆ ಚಾಲನೆ




ಹಾಸನ ಡಿಸಿ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ಭಗೀರಥ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಗೆ ಸಂಸದ ಶ್ರೇಯಸ್ ಎಂ.ಪಟೇಲ್ ಚಾಲನೆ ನೀಡಿದರು. ಈ ವೇಳೆ ನಗರಸಭೆ ಅಧ್ಯಕ್ಷ ಚಂದ್ರೇಗೌಡ, ಎಡಿಸಿ ಕೆ.ಟಿ.ಶಾಂತಲಾ, ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ.ತಾರಾನಾಥ್, ಉಪ್ಪಾರ ಜನಾಂಗದ ಮುಖಂಡ ನೀಲಪ್ಪ ಇನ್ನಿತರರಿದ್ದರು.

ಬೈಕ್‌ಗೆ ಲಾರಿ ಡಿಕ್ಕಿ: ಪೊಲೀಸ್ ಕಾನ್‌ಸ್ಟೇಬಲ್ ಸಾವು

ಹಾಸನ, ಮೇ 4- ಲೋಡ್ ತುಂಬಿದ ಲಾರಿಯೊಂದು ಏಕಮುಖ ರಸ್ತೆ ಸಂಚಾರ ವಿರುದ್ಧ ದಿಕ್ಕಿನಲ್ಲಿ ಚಲಿಸಿ ಎದುರು ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಪೊಲೀಸ್ ಕಾನ್‌ಸ್ಟೆಬಲ್ ಸಾವನ್ನಪ್ಪಿದ ಘಟನೆ ಭಾನುವಾರ ನಗರದ ಹೊರವಲಯ ಕೆಂಚಟ್ಟಹಳ್ಳಿ ಬಳಿ ನಡೆದಿದೆ. ಬೆಳಗ್ಗೆ 9.30ರ ಸಮಯದಲ್ಲಿ 11ನೇ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ ಪೊಲೀಸ್ ಕಾನ್‌ಸ್ಟೆಬಲ್ ಪ್ರಕಾಶ್ (39) ವರ್ಷ ನಗರದಿಂದ ತಮ್ಮ ಸರ್ಕಾರಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಬೆಂಗಳೂರು ರಸ್ತೆ ಕೆಂಚಟಹಳ್ಳಿ ಬಳಿ ಏಕಮುಖವಾಗಿ ಸಂಚಾರ ವಿರುದ್ಧವಾಗಿ ಬಂದ ಲಾರಿ ಬೈಕ್‌ಗೆ ಡಿಕ್ಕಿಯಾಗಿ ಸ್ಥಳದಲ್ಲೇ ಪ್ರಕಾಶ್ ಮೃತರಾಗಿದ್ದಾರೆ. ಚಿಕ್ಕಮಗಳೂರು ಮೂಲದ ಮೃತ ಪೊಲೀಸ್ ಕಾನ್ಸ್‌ಟೆಬಲ್ ಗಾಡೇನಹಳ್ಳಿಯಲ್ಲಿರುವ ಪೊಲೀಸ್ ವಸತಿಗೃಹದಲ್ಲಿ ಕುಟುಂಬ ಸಮೇತ ವಾಸವಾಗಿದ್ದರು. ಭಾನುವಾರವಾಗಿದ್ದರಿಂದ ಚಿಕನ್ ತೆಗೆದುಕೊಂಡು ಸಿಟಿಯಿಂದ ವಾಪಸ್ ಕ್ವಾಟ್ರಸ್‌ಗೆ ವಾಪಸ್ ಬರುವಾಗ ಈ ದುರ್ಘಟನೆ ನಡೆದಿದೆ. ಈ ಸಂಬಂಧ ಹಾಸನ ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳು ಆಗಮಿಸಿ, ಸ್ಥಳ ಪರಿಶೀಲಿಸಿ ಲಾರಿ ಮತ್ತು ಚಾಲಕನನ್ನು ಬಂಧಿಸಿದ್ದಾರೆ.



ರಾಜ್ಯಮಟ್ಟದ ಪುರುಷರ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿ ವಿಜೇತರು



ತಾಂಡವಪುರ ಎಂಐಟಿ ಕಾಲೇಜು ವತಿಯಿಂದ ವಿಟಿಯು ಸಹಯೋಗದೊಂದಿಗೆ ನಡೆದ 2025-26ನೇ ಸಾಲಿನ ರಾಜ್ಯ ಮಟ್ಟದ ಪುರುಷರ ವಿಭಾಗದ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿಯಲ್ಲಿ MSRIT ಬೆಂಗಳೂರು-ವಿನ್ನರ್ಸ್, RVCE ಬೆಂಗಳೂರು-ರನ್ನರ್ಸ್, BMSCE ಬೆಂಗಳೂರು-3ನೇ ಸ್ಥಾನ, SIT ತುಮಕೂರು-4ನೇ ಸ್ಥಾನ ಪಡೆದುಕೊಂಡಿದೆ. ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ VTUನ ಪ್ರಾದೇಶಿಕ ದೈಹಿಕ ಶಿಕ್ಷಣ ನಿರ್ದೇಶಕ ಎಚ್.ಸಿ.ಸುದೀನ, ಎಂಐಟಿ ಜಂಟಿ ಕಾರ್ಯದರ್ಶಿ ಡಾ.ಚೇತನ್, ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ, ಡಾ.ಶಂಕರ್ ಎನ್.ಉಪಾಧ್ಯಾಯ ಆರೋಗ್ಯ ಆಲ್ವಿನ್ ಮತ್ತಿತರರು ಉಪಸ್ಥಿತರಿದ್ದರು.

ಐಎಸ್‌ಐ ಜೊತೆ ನಂಟು: ಪಾಕಿಸ್ತಾನಕ್ಕೆ ಸೇನಾ ಮಾಹಿತಿ ಸೋರಿಕೆ, ಇಬ್ಬರ ಬಂಧನ

ಚಂಡೀಗಢ, ಮೇ 4- ಸೇನಾ ಕಂಟೋನ್ಮೆಂಟ್ ಪ್ರದೇಶಗಳು ಮತ್ತು ವಾಯುನೆಲೆಗಳ ಸೂಕ್ಷ್ಮ ಮಾಹಿತಿ ಹಾಗೂ ಛಾಯಾಚಿತ್ರಗಳನ್ನು ಸೋರಿಕೆ ಮಾಡಿದ ಆರೋಪದ ಮೇಲೆ ಪಂಜಾಬ್ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧನಕ್ಕೊಳಪಡಿಸಿದ್ದಾರೆ. ಆರೋಪಿಗಳನ್ನು ಶೇರ್ ಮಾಸಿಹ್ ಮತ್ತು ಸೂರಜ್ ಮಾಸಿಹ್ ಎಂದು ಗುರ್ತಿಸಲಾಗಿದ್ದು, ಇಬ್ಬರನ್ನೂ ಅಮೃತಸರ ಕೇಂದ್ರ ಜೈಲಿಗೆ ಕಳುಹಿಸಲಾಗಿದೆ. ಬಂಧನಕ್ಕೊಳಗಾಗಿರುವ ಇಬ್ಬರೂ ಅಮೃತಸರ ಕೇಂದ್ರ ಕಾರಾಗೃಹದಲ್ಲಿರುವ ಹರ್‌ಪ್ರೀತ್ ಸಿಂಗ್ ಅಲಿಯಾಸ್ ಪಿಟ್ಟು ಇಬ್ಬರಿಗೆ ನಿರ್ದೇಶನ ನೀಡುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಪ್ರಾಥಮಿಕ ತನಿಖೆಯ ವೇಳೆ ಪಾಕಿಸ್ತಾನದ ಗುಪ್ತಚರ ಸಂಸ್ಥೆಯ ಜೊತೆ ಇವರು ಸಂಪರ್ಕ ಹೊಂದಿದ್ದರು. ಅಧಿಕೃತ ರಹಸ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದಿನಿಂದ ಪರಿಶಿಷ್ಟ ಜಾತಿ ಸಮೀಕ್ಷೆ: ನಿಖರ ಮಾಹಿತಿ ನೀಡಿ

ಒಳ ಮೀಸಲಾತಿ ಜಾಗೃತಿ ಸಮಿತಿ ಸಂಚಾಲಕ ಲಿಂಗೇಶ್ ಮನವಿ



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಪರಿಶಿಷ್ಟ ಜಾತಿ ಹೊಲಯ, ಬಲಗೈ, ಛಲವಾದಿ ಒಳ ಮೀಸಲಾತಿ ಜಾಗೃತಿ ಸಮಿತಿ ಆಯೋಜಿಸಿದ್ದ ಒಳ ಮೀಸಲಾತಿ ಕುರಿತ ಜಾಗೃತಿ ಕಾರ್ಯಾಗಾರ ನಡೆಯಿತು.

ಮೈಸೂರು, ಮೇ 4(ಬಿಎಲ್‌ಯು)- ನಾಳೆ (ಮೇ 5)ಯಿಂದ ಆರಂಭವಾಗುವ ಪರಿಶಿಷ್ಟ ಜಾತಿ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಉಪ ಜಾತಿಗಳ ಬಗ್ಗೆ ಪ್ರತಿಯೊಬ್ಬರು ನಿಖರ ಮಾಹಿತಿ ನೀಡಬೇಕು. ಈ ಮೂಲಕ ಗಣತಿಯಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಬೇಕು ಎಂದು ಪರಿಶಿಷ್ಟ ಜಾತಿ ಹೊಲಯ, ಬಲಗೈ, ಛಲವಾದಿ ಒಳ ಮೀಸಲಾತಿ ಜಾಗೃತಿ ಸಮಿತಿಯ ಸಂಚಾಲಕ ಲಿಂಗೇಶ್ ಮನವಿ ಮಾಡಿದರು.

ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಇಂದು ಪರಿಶಿಷ್ಟ ಜಾತಿ ಹೊಲಯ, ಬಲಗೈ, ಛಲವಾದಿ ಒಳ ಮೀಸಲಾತಿ ಜಾಗೃತಿ ಸಮಿತಿ ಆಯೋಜಿಸಿದ್ದ ಒಳ ಮೀಸಲಾತಿ ಕುರಿತ ಜಾಗೃತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನಮ್ಮ ಜಾತಿ ಮತ್ತು ಉಪ ಜಾತಿ ಬಗ್ಗೆ ಮಾಹಿತಿ ನೀಡುವ ಅನಿವಾರ್ಯತೆ ಇದೆ. ಈ ಹಿನ್ನೆಲೆ ಪ್ರತಿಯೊಬ್ಬರು ಜಾತಿ ಸಮೀಕ್ಷೆ ವೇಳೆ ನಿಮ್ಮ ಮನೆಗೆ ಬರುವ ಗಣತಿದಾರರಿಗೆ ಸಮಗ್ರ ಮಾಹಿತಿ ನೀಡಿ ಎಂದು ಸಲಹೆ ನೀಡಿದರು.

ಜಾತಿ ಮತ್ತು ಉಪಜಾತಿ ಬಗ್ಗೆ ಮಾಹಿತಿ ನೀಡುವ ಬಗ್ಗೆ ಯಾವುದೇ ಗೊಂದಲಕ್ಕೆ ಒಳಗಾಗಬೇಡಿ. ಮೀಸಲಾತಿ ಪಡೆಯುವ ನಿಟ್ಟಿನಲ್ಲಿ ಈಗ ನಾವು ನೀಡುವ ಮಾಹಿತಿ ನಮ್ಮ ಮುಂದಿನ ಮಕ್ಕಳ ಭವಿಷ್ಯ ನಿರ್ಧರಿಸಲಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘದ ರಾಜ್ಯಾಧ್ಯಕ್ಷ ತುಂಬಲ ರಾಮಣ್ಣ ಅವರು, ಪರಿಶಿಷ್ಟ ಜಾತಿ ಸಮೀಕ್ಷೆಯಲ್ಲಿ ಮೂಲ ಜಾತಿಯ ಉಪ ಪಂಗಡ ನಮೂದಿಸಿದಾಗ ಮಾತ್ರ ಜಾತಿ ವರ್ಗೀಕರಣ ಮಾಡಲು ಸಾಧ್ಯವಾಗುತ್ತದೆ. ಈ ಹಿನ್ನೆಲೆ ಗಣತಿ ವೇಳೆ ನಿಖರ ಮಾಹಿತಿ ನೀಡಿದರೆ ಯಾವುದೇ ಗೊಂದಲ ಇರುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಯಲ್ಲಿ ಒಟ್ಟು 101 ಉಪ ಜಾತಿಗಳಿದ್ದು, ಇದರಲ್ಲಿ ಬಲಗೈಗೆ ಸಂಬಂಧಿಸಿದಂತೆ 39 ಉಪಜಾತಿ, ಎಡಗೈಗೆ ಸಂಬಂಧಿಸಿದಂತೆ 42 ಉಪ ಜಾತಿ, 13 ಲಂಬಾಣಿ ಹಾಗೂ 11 ಅಲೆಮಾರಿ ಜಾತಿಗಳಿವೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಉಪಜಾತಿಗಳ ಬಗ್ಗೆ ಸಮಗ್ರ ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಜಾತಿಗಳ ಬಗ್ಗೆ ಗೊಂದಲವಿದೆ. ಈಗ ನಡೆಯುವ ಜಾತಿ ಸಮೀಕ್ಷೆ ಮುಕ್ತಾಯಗೊಂಡು ವರದಿ ಬಂದ ನಂತರ ಒಂದೇ ಜಾತಿಯಿಂದ ಗುರುತಿಸಿಕೊಳ್ಳಬೇಕು ಎಂದರು.

ದಲಿತ ಸಮುದಾಯದ ಕೆಲವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಆದರೆ ಕ್ರಿಶ್ಚಿಯನ್ ಧರ್ಮ ಪಾಲನೆ ಮಾಡಿ ದಲಿತ ಸಮುದಾಯಕ್ಕೆ ಸರ್ಕಾರ ನೀಡುವ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ ಎಂದು ತಿಳಿಸಿದರು.

ಸರ್ಕಾರದ ಮೀಸಲಾತಿ ಸೌಲಭ್ಯ ಪಡೆಯಲು ನಾಳೆಯಿಂದ ಆರಂಭವಾಗುವ ಜಾತಿ ಸಮೀಕ್ಷೆಯಲ್ಲಿ ನಿಖರವಾದ ಮಾಹಿತಿ ನೀಡಬೇಕು ಎಂದು ರಾಮಣ್ಣ ಸಲಹೆಯಿತ್ತರು. ಒಳ ಮೀಸಲಾತಿ ಬಗ್ಗೆ ಹಲವು ವಿಷಯ ತಜ್ಞರು ಮಾತನಾಡಿದರು. ತರುವಾಯ ಸಂವಾದ ನಡೆಯಿತು.

ಮೈಸೂರು, ಮಂಡ್ಯ, ಕೊಡುಗು ಜಿಲ್ಲೆಯ ಪರಿಶಿಷ್ಟ ಸಮುದಾಯದ ನೂರಾರು ಮಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆಯಾದ ನಾಗನವ ಕಲಾ ಸಾಹಿತ್ಯ ವೇದಿಕೆಯು ಪ್ರತಿ ವರ್ಷದಂತೆ ಈ ವರ್ಷವೂ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024-25ನೇ ಸಾಲಿನಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಅಂದರೆ ಶೇ.95ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು, ತಮ್ಮ ಅಂಕಪಟ್ಟಿ ನಕಲು ಹಾಗೂ ಎರಡು ಭಾವಚಿತ್ರಗಳನ್ನು, ಹೊಮ್ಮ ಮಂಜುನಾಥ್, ನಾಗನವ ಕಲಾ ಸಾಹಿತ್ಯ ವೇದಿಕೆ, 1115, ಜೆಎಲ್‌ಬಿ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು. ಇಲ್ಲಿಗೆ ಮೇ 25ರೊಳಗೆ ಕಳುಹಿಸಲು ಕೋರಲಾಗಿದೆ. ವಿವರಗಳಿಗೆ 9019076842 ಸಂಪರ್ಕಿಸಿ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು: ಮೇ 5 ಮತ್ತು 6ರಂದು ತುರ್ತು ಕಾರ್ಯ ನಿಮಿತ್ತ ಮುರುಡಗಳ್ಳಿ, ತಳೂರು, ದೊಡ್ಡಕಾಟೂರು, ದೂರ ಹಳ್ಳಿಕೆರೆ ಹುಂಡಿ, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗಾಳಿ-ಮಳೆಗೆ ಧರೆಗುರುಳಿದ ಮರಗಳ ಮತ್ತೆ ನೆಡುವ ಕಾರ್ಯ

ಮೈಸೂರು, ಮೇ 4(ಎಂಕೆ)- ಗಾಳಿ-ಮಳೆಗೆ ಬುಡಸಮೇತ ಧರೆಗುರುಳಿದ್ದ ಮರಗಳನ್ನು ಮತ್ತೆ ನೆಡುವ ಮೂಲಕ ಪರಿಸರ ಉಳಿವಿಗೆ ಮೈಸೂರಿನ ಪರಸರ ಪ್ರೇಮಿಗಳು ಮುಂದಾಗಿದ್ದಾರೆ.

ಇತ್ತೀಚೆಗಷ್ಟೇ ಮೈಸೂರಿನಲ್ಲಿ ಸುರಿದ ಭಾರಿ ಗಾಳಿ-ಮಳೆಗೆ ಕುಕ್ಕರಹಳ್ಳಿ ಕೆರೆ ರಸ್ತೆ ಬದಿಯಲ್ಲಿ(ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಎದುರು) ಬುಡಸಮೇತ ನೆಲಕ್ಕುರುಳಿದ್ದ ಮರಗಳನ್ನು ಮೈಸೂರಿನ ಕೆಲ ಪರಿಸರ ಪ್ರೇಮಿಗಳು ಸ್ವಂತ ಖರ್ಚಿನಲ್ಲಿ ಕ್ರೇನ್ ಹಾಗೂ ಜೆಸಿಬಿ ಮೂಲಕ ಮತ್ತೆ ನೆಡುವ ಮೂಲಕ ಮರಗಳನ್ನು ಉಳಿಸುವ ಪರ್ಯಾಯ ಮಾರ್ಗ ತೋರಿದ್ದಾರೆ.

ಬುಡಸಮೇತ ಧರೆಗುರುಳಿದ ಮರಗಳನ್ನು ತುಂಡರಿಸಿ, ಸ್ವಾರ್ಥಕ್ಕೆ ಬಳಸುವ ಬದಲು ಅವುಗಳನ್ನು ಮತ್ತೆ ನೆಡುವ ಮೂಲಕ ಮರಗಳನ್ನು ಉಳಿಸಿದಂತಾಗುತ್ತದೆ. ಈ ಪ್ರಯೋಗಕ್ಕೆ ಮೈಸೂರು ಜಿಲ್ಲಾಡಳಿತ ಮುಂದಾಗಬೇಕು. ಅಭಿವೃದ್ಧಿ ವಿಷಯದಲ್ಲಿ ಮರಗಳನ್ನು ಕಡಿಯುವ ಬದಲು ಬೇರೆ ಸ್ಥಳಕ್ಕೆ ಸ್ಥಳಾಂತರಿಸಿದರೆ ಪರಿಸರ ಉಳಿವಿನ ಜೊತೆಗೆ ಮರಗಳು ಉಳಿಯುತ್ತವೆ ಎಂದು ಪರಿಸರ ಬಳಗದ ಸಂಸ್ಥಾಪಕ ಸದಸ್ಯ, ಪರಶುರಾಮೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಕುಕ್ಕರಹಳ್ಳಿ ಕೆರೆ ರಸ್ತೆ (ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಎದುರು) ಬದಿಯಲ್ಲಿ ಧರೆಗುರುಳಿದ್ದ ಮರಗಳನ್ನು ಪರಿಸರ ಪ್ರೇಮಿಗಳು ಮತ್ತೆ ನೆಡುತ್ತಿರುವುದು.

ಪರಸರ ಪ್ರೇಮಿಗಳಿಂದ ಸ್ತುತ್ಯಾರ್ಹ ಚಿಂತನೆ

ರಸ್ತೆ ಅಗಲೀಕರಣ ನೆಪದಲ್ಲಿ ಹೈದರಾಲಿ ರಸ್ತೆಯಲ್ಲಿ 40ಕ್ಕೂ ಹೆಚ್ಚು ಮರಗಳನ್ನು ಹನನ ಮಾಡಿದ ಬಳಿಕ ಮೈಸೂರಿನಲ್ಲಿ ಪರಿಸರ ಹಾಗೂ ಮರಗಳ ಉಳಿವಿಗಾಗಿ ಕ್ರಿಯಾ ಸಮಿತಿಯೊಂದನ್ನು ಅಸ್ತಿತ್ವಕ್ಕೆ ತಂದಿದ್ದೇವೆ. ಇವತ್ತಿನ ಜಾಗತಿಕ ತಾಪಮಾನ ಏರಿಕೆಗೆ ಮರಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಮುಖ್ಯ ಕಾರಣವಾಗಿದೆ. ಆದ್ದರಿಂದ ಕಳೆದು ಎರಡು ದಿನ ಹಿಂದೆ ಭಾರಿ ಗಾಳಿಯೊಂದಿಗೆ ಸುರಿದ ಮಳೆಗೆ ಕುಕ್ಕರಹಳ್ಳಿ ರಸ್ತೆ ಬದಿಯಲ್ಲಿ ಬುಡಸಮೇತ ನೆಲಕ್ಕುರುಳಿದ್ದ ಸುಮಾರು ಐದು ಬೃಹತ್ ಮರಗಳನ್ನು ಮತ್ತೆ ನೆಡುತ್ತಿದ್ದೇವೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ನಿವೃತ್ತ ನಿರ್ದೇಶಕ ರಾಮಕೃಷ್ಣ, ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ಮುಜ್ಞಾವರ್ ಸಹಕಾರ ಮತ್ತು ಸಲಹೆಯೊಂದಿಗೆ ಸ್ವಂತ ಖರ್ಚಿನಲ್ಲಿ ಕ್ರೇನ್ ಹಾಗೂ ಜೆಸಿಬಿ ಮೂಲಕ ಬಿದ್ದಿದ್ದ ಮರಗಳನ್ನು ಮತ್ತೆ ನೆಡುತ್ತಿದ್ದೇವೆ. ವಿದೇಶಗಳಲ್ಲಿ ಮುಖ್ಯವಾಗಿ ಜಪಾನ್‌ನಲ್ಲಿ ಮರಗಳನ್ನು ಸ್ಥಳಾಂತರಿಸುವ ಕಾರ್ಯಕ್ರಮ ಇದೆ. ಅದೇ ರೀತಿ ನಾವು ಕೂಡ ಈ ಪ್ರಯೋಗ ನಡೆಸುತ್ತಿದ್ದು, ಯಶಸ್ವಿಯಾದರೆ ಸರ್ಕಾರಕ್ಕೆ ಮನವಿ ಮಾಡುತ್ತೇವೆ. 20-30 ವರ್ಷದ ಮರಗಳನ್ನು ಕಡಿಯದೇ ಬೇರೆ ಸ್ಥಳಕ್ಕೆ ಸ್ಥಳಾಂತರಗೊಳಿಸಿ. ಇದರಿಂದ ಅಭಿವೃದ್ಧಿ ಜೊತೆಗೆ ಪರಿಸರವನ್ನೂ ಉಳಿಸಿದಂತಾಗುತ್ತದೆ ಎಂದು ಮನವಿ ಮಾಡುತ್ತೇವೆ ಎಂದರು. ಈ ಸಂದರ್ಭದಲ್ಲಿ ಪರಿಸರ ಪ್ರೇಮಿಗಳಾದ ಗಂಟಯ್ಯ (ಕೃಷ್ಣಪ್ಪ), ಕಲಾ, ಭಾಗ್ಯ, ಕಸ್ತೂರಿ, ಶ್ರೀಲಕ್ಷ್ಮಿ, ವರ್ಷಿಣಿ, ಭಾನುಪ್ರಶಾಂತ್, ವಿಶ್ವನಾಥ್, ಕಮಲ್ ಗೋಪಿನಾಥ್, ಅರಣ್ ಕುಮಾರ್, ಜೈಶಂಕರ್ ಮತ್ತಿತರರಿದ್ದರು.

ಸಂಯಮ, ಸೃಜನಶೀಲ ವ್ಯಕ್ತಿತ್ವಕ್ಕೆ ಎಸ್.ಎಂ.ಕೃಷ್ಣ ಮಾದರಿ

ಎಸ್.ಎಂ.ಕೃಷ್ಣ ಸ್ಮರಣೆ, ಅಭಿನಂದನಾ ಸಮಾರಂಭದಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಗುಣಗಾನ

ಮದ್ದೂರು, ಮೇ 4– ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಸಂಯಮಶೀಲ, ಸೃಜನಶೀಲ, ಸರಳಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಒಬ್ಬ ಬರಹಗಾರನಾಗಿ ನಾನು ಅವರನ್ನು ಹೆಚ್ಚು ಗೌರವದಿಂದ ಕಾಣುವಂತಹ ಅಪರೂಪದ ವ್ಯಕ್ತಿತ್ವ ಹೊಂದಿದ್ದರು ಎಂದು ಖ್ಯಾತ ಚಲನಚಿತ್ರ ನಿರ್ದೇಶಕ, ನಾಗತಿಹಳ್ಳಿ ಚಂದ್ರಶೇಖರ್ ಗುಣಗಾನ ಮಾಡಿದರು.

ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಚುಂಚಶ್ರೀ ಗೆಳೆಯರ ಬಳಗ, ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘ ಸೇರಿದಂತೆ ಹಲವು ಸಂಸ್ಥೆಗಳ ಸಹಯೋಗದೊಂದಿಗೆ ನಡೆದ ಎಸ್.ಎಂ.ಕೃಷ್ಣ ಅವರ ಜನ್ಮ ದಿನಾಚರಣೆ ಹಾಗೂ ಎಸ್.ಎಂ.ಕೃಷ್ಣ ಸಮಷ್ಟಿ ಹಿತ ಚಿಂತನಾ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ನಾನು ಈ ಪ್ರಶಸ್ತಿಗೆ ಎಷ್ಟು ಅರ್ಹನೋ ಗೊತ್ತಿಲ್ಲ ಆದರೆ ಎಸ್.ಎಂ.ಕೃಷ್ಣ ಅಂತಹವರ ಹೆಸರಿನಲ್ಲಿ ಪ್ರಶಸ್ತಿಯನ್ನು ಚುಂಚಶ್ರೀ ಬಳಗದವರ ಒತ್ತಾಸೆಯ ಮೇರೆಗೆ ಪಡೆಯುತ್ತಿರುವುದು ಸಂತಸ ತಂದಿದೆ ಎಂದರು.

ಎಸ್.ಎಂ.ಕೆ ಅವರು ಅತ್ಯಂತ ಸಾಹಿತ್ಯಾಸಕ್ತರಾಗಿದ್ದರು, ಅವರು ಮುಖ್ಯಮಂತ್ರಿಗಳಾಗಿದ್ದಾಗ ಅವರನ್ನು ವಿರೋಧಿಸುತ್ತಿದ್ದವರನ್ನೂ ಕೂಡಾ ವಿನಯದಿಂದ ವಸ್ತುಸ್ಥಿತಿಯನ್ನು ಮನದಟ್ಟು ಮಾಡುವ ಶಕ್ತಿಯಿತ್ತು ಅಷ್ಟೇ ವಿದ್ವತ್ತಿನಿಂದ ವಿಚಾರಧಾರೆಗಳಿದ್ದವು ಅವರ ಒಡನಾಟಗಳನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದು ಸ್ಮರಿಸಿದರು.


ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಕೆಂಗೇರಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥಸ್ವಾಮಿ ಮಾತನಾಡಿ, ಎಸ್.ಎಂ.ಕೃಷ್ಣ ಅವರು ದಕ್ಷಿಣ ಭಾರತದವರು ಎನ್ನುವ ಕಾರಣಕ್ಕಾಗಿ ಪ್ರಧಾನಿ ಪಟ್ಟ ತಪ್ಪಿಸಿದರು ಎನ್ನುವ ನೋವು ನನ್ನನ್ನು ಕಾಡಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಅವರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ನಿರ್ಮಿಸುವಂತಾಗಬೇಕು ಆ ಮೂಲಕ ವಿಧಾನಸೌಧಕ್ಕೆ ಬರುವ ಯುವ ರಾಜಕಾರಣಿಗಳಿಗೆ ಒಂದು ಸ್ಫೂರ್ತಿ ಸಿಗಬೇಕು ಎಂದರು.

ಶಾಸಕ ಕೆ.ಎಂ.ಉದಯ್ ಮಾತನಾಡಿ, ಎಸ್.ಎಂ.ಕೃಷ್ಣ ರವರು ರಾಜ್ಯದ ಮುಖ್ಯಮಂತ್ರಿಯಾಗಿ, ಕೇಂದ್ರ ಸಚಿವರಾಗಿ, ರಾಜ್ಯಪಾಲರಾಗಿ ಸೇರಿದಂತೆ ಹಲವು ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿದ್ದವರು ಅಂತಹವರು ಪ್ರತಿನಿಧಿಸಿದ್ದ ಮದ್ದೂರು ಕ್ಷೇತ್ರದ ಶಾಸಕನಾಗಿರುವುದು ನನಗೆ ಹೆಮ್ಮೆಯ ಸಂಗತಿಯೆಂದರು. ಮುಂದಿನ ದಿನಗಳಲ್ಲಿ ಮದ್ದೂರು ಪಟ್ಟಣದ ಪ್ರಮುಖ ವೃತ್ತಕ್ಕೆ ಎಸ್.ಎಂ.ಕೃಷ್ಣ ಹೆಸರು ನಾಮಕರಣ ಮಾಡುವುದು ಹಾಗೂ ಪುತ್ಥಳಿಯನ್ನು ನಿರ್ಮಾಣ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕರ್ನಾಟಕ ಉಚ್ಚ ನ್ಯಾಯಲಯದ ನಿವೃತ್ತ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇ ಗೌಡ ಪ್ರಶಸ್ತಿ ಪ್ರಧಾನ ಮಾಡಿದರು. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್ ಅವರು ಎಸ್.ಎಂ.ಕೃಷ್ಣ ಕುರಿತು ವಿಶೇಷ ಉಪನ್ಯಾಸ ಮಾಡಿದರು. ನಿವೃತ್ತ ಪ್ರಾಂಶುಪಾಲ ಡಾ.ಎಸ್.ಬಿ.ಶಂಕರೇಗೌಡ ಅವರು ಪ್ರಶಸ್ತಿ ಪುರಸ್ಕೃತರನ್ನು ಕುರಿತು ಭಾಷಣ ಮಾಡಿದರು.

ಚುಂಚಶ್ರೀ ಗೆಳೆಯರ ಬಳಗದ ಅಧ್ಯಕ್ಷ ಡಾ.ಬಿ.ಕೃಷ್ಣ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಮನ್ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ಹಿರಿಯ ಸಾಹಿತಿ ತೈಲೂರು ವೆಂಕಟಕೃಷ್ಣ, ಪುರಸಭಾ ಅಧ್ಯಕ್ಷೆ ಕೋಕಿಲಾ ಅರುಣ್, ಪ್ರಾಂಶುಪಾಲ ಕೆ.ಬಿ.ನಾರಾಯಣ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ದೇಶಹಳ್ಳಿ ಮೋಹನ್ ಕುಮಾರ್, ಪುರಸಭಾ ಮಾಜಿ ಅಧ್ಯಕ್ಷ ಎಂ.ಕೆ.ಮರಿಗೌಡ, ಚುಂಚಶ್ರೀ ಗೆಳೆಯರ ಬಳಗ ಪ್ರಧಾನ ಕಾರ್ಯದರ್ಶಿ ವಿ.ಟಿ.ರವಿಕುಮಾರ್, ಉಪಾಧ್ಯಕ್ಷ ಸಿ.ಎಸ್.ಶಂಕರಯ್ಯ, ಶ್ರೀ ನಾಡಪ್ರಭು ಕೆಂಪೇಗೌಡ ಒಕ್ಕಲಿಗರ ಸಂಘದ ಅಧ್ಯಕ್ಷ ದೇಶಹಳ್ಳಿ ಪಿ.ಶಿವಪ್ಪ ಉಪಸ್ಥಿತರಿದ್ದರು.



ಸಾಹಿತಿ ಹಾಗೂ ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೆ ಎಸ್.ಎಂ.ಕೃಷ್ಣ ಸಮಷ್ಟಿ ಹಿತಚಿಂತನಾ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಕೆ.ಎಂ.ಉದಯ್, ದಿನೇಶ್ ಗೂಳಿಗೌಡ, ಟಿ.ಜಿ.ಶಿವಶಂಕರೇಗೌಡ, ಬಿ.ಎಲ್.ಶಂಕರ್, ಪ್ರೊ.ಜಯಪ್ರಕಾಶ್ ಗೌಡ್ರು, ಡಾ.ಬಿ.ಕೃಷ್ಣ, ಕದಲೂರು ರಾಮಕೃಷ್ಣ ಇದ್ದರು.

ರಾಷ್ಟ್ರ ಮಟ್ಟದ ಹ್ಯಾಂಡ್ ಬಾಲ್ ಕ್ರೀಡಾಕೂಟ

ಗುಜರಾತ್ ಪ್ರಥಮ, ಕರ್ನಾಟಕ ದ್ವಿತೀಯ, ಉತ್ತರ ಪ್ರದೇಶ ತೃತೀಯ



ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದ ಸಂದರ್ಭ.

ಶ್ರೀರಂಗಪಟ್ಟಣ,ಮೇ 4– ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಕಳೆದ ಐದು ದಿನಗಳ ಕಾಲ ನಡೆದ 39ನೇ ಬಾಲಕಿಯರ ರಾಷ್ಟ್ರ ಮಟ್ಟದ ಹ್ಯಾಂಡ್ ಬಾಲ್ ಕ್ರೀಡಾಕೂಟದಲ್ಲಿ ಗುಜರಾತ್ ಪ್ರಥಮ, ಕರ್ನಾಟಕ ದ್ವಿತೀಯ ಹಾಗೂ ಉತ್ತರಪ್ರದೇಶ ತೃತೀಯ ಸ್ಥಾನ ಪಡೆದುಕೊಂಡಿತು.

ರಾಷ್ಟ್ರೀಯ ಹ್ಯಾಂಡ್ ಬಾಲ್ ಕ್ರೀಡಾಕೂಟದಲ್ಲಿ ದೇಶದ ಒಟ್ಟು 24 ರಾಜ್ಯಗಳು ಭಾಗವಹಿಸಿದ್ದವು. ಭಾನುವಾರ ನಡೆದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಹ್ಯಾಂಡ್ ಬಾಲ್ ಅಸೋಸಿಯೇಷನ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಆನಂದೇಶ್ವರ ಪಾಂಡೆ, ಕರ್ನಾಟಕ ಹ್ಯಾಂಡ್ ಬಾಲ್ ಅಸೋಸಿಯನ್ ಡಾ.ಮನೋಜ್.ಪಿ ಸಾಹುಕಾರ್, ಪ್ರಧಾನ ಕಾರ್ಯದರ್ಶಿ ಬಿ.ಎಲ್.ಲೋಕೇಶ್, ಖಜಾಂಚಿ ಪ್ರಕಾಶ್ ನರಗಟ್ಟಿ ಸ್ಥಳೀಯರಾದ ಹಿರಿಯ ಗಾಂಧಿವಾದಿ ಡಾ.ಬಿ.ಸುಜಯ್ ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಶಿವಲಿಂಗ ದಳವಾಯಿ, ಮಂಡ್ಯ ಹ್ಯಾಂಡ್ ಬಾಲ್ ಅಸೋಸಿಯೇಷನ್ ಅಧ್ಯಕ್ಷವಂಜೂರಾಂ ಪುಟ್ಟೇಗೌಡ, ಪ್ರಧಾನ ಕಾರ್ಯದರ್ಶಿ ಹಾಗೂ ಕ್ರೀಡಾ ಸಂಘಟಕಾರ ಡಾ.ರಾಘವೇಂದ್ರ ಸೇರಿದಂತೆ ಇತರರು ಭಾಗವಹಿಸಿದ್ದರು.

ಈ ವೇಳೆ ರಾಜ್ಯ ಹಾಗೂ ಜಿಲ್ಲಾ ಹ್ಯಾಂಡ್ ಬಾಲ್ ಅಸೋಸಿಯೇಷನ್ ಪದಾಧಿಕಾರಿಗಳು, ಪರಿವರ್ತನ, ಶೇಷಾದ್ರಿ ಪುರಂ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಅಚಿವ ಅಕಾಡೆಮಿ ವಿದ್ಯಾರ್ಥಿಗಳು, ಚಂದ್ರನಾಗ್, ರಾಜೇಶ್ ದೀಪಕ್, ದೇವರಾಜ್ ರುಕ್ಮಾಂದ, ನಾಗೇಂದ್ರ, ಅನನ್ಯ, ಗುರುಪ್ರಸಾದ್ ಸೇರಿದಂತೆ ಇತರರು ಇದ್ದರು.

ಭಗೀರಥರ ಆದರ್ಶಗಳನ್ನು ಸಮಾಜ ಅನುಸರಿಸಬೇಕು

ಮಂಡ್ಯ,ಮೇ 4– ನಾಡು ಕಂಡ ಮಹನೀಯರಲ್ಲಿ ಒಬ್ಬರಾದ ಭಗೀರಥರ ತತ್ವ, ಸಿದ್ಧಾಂತ, ಮೌಲ್ಯ, ಆದರ್ಶಗಳನ್ನು ಸಮಾಜ ಅನುಸರಿಸಬೇಕು ಎಂದು ಮಂಡ್ಯ ತಹಸೀಲ್ದಾರ್ ಶಿವಕುಮಾರ್ ಬಿರಾದ್ ಹೇಳಿದರು.

ಮಂಡ್ಯ ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಭಗೀರಥ ಜಯಂತಿಯ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಏಕಾಗ್ರತೆ ಮತ್ತು ದೃಢತೆ ಭಗೀರಥ ಮಹರ್ಷಿಗಳಿಗೆ ಅಗಾಧವಾಗಿತ್ತು, ಅದರಿಂದಲೆ ಆಗಸದಿಂದ ಧರೆಗೆ ವರುಣನನ್ನು ತಂದರು ಎಂದರು.

ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯದ ಅಭಿವೃದ್ಧಿಗೆ ಶಾಲೆ, ವಿದ್ಯಾರ್ಥಿ ನಿಲಯ, ಸಮುದಾಯ ಭವನ ಸ್ಥಾಪನೆ ಮಾಡಲು ಸರ್ಕಾರ ಸದಾ ಚಿಂತಿಸುತ್ತದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖಾ ನಿವೃತ್ತ ಅಧಿಕಾರಿಗಳಾದ ಎನ್.ನರಸಿಂಹಮೂರ್ತಿ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು. ಸೂರ್ಯವಂಶದವರಾದ ಭಗೀರಥ ಮಹರ್ಷಿ ತನ್ನ ಪೂರ್ವಜರ ಆತ್ಮಗಳ ಸದ್ಗತಿಗಾಗಿ ಹಾಗೂ ಗುರುಗಳ ಸೂಚನೆಯ ಮೇರೆಗೆ ಬ್ರಹ್ಮ ದೇವರ ಕುರಿತು ತಪಸ್ಸಿಗೆ ಕುಳಿತುಕೊಳ್ಳುತ್ತಾರೆ, ಬ್ರಹ್ಮ ದೇವರು ಭಗೀರಥರ ತಪಸ್ಸಿಗೆ ಮಣಿದು ಪ್ರತ್ಯಕ್ಷರಾಗಿ ತನ್ನ ಕಮಂಡಲದಿಂದ ಧರೆಗೆ ಬೀಳುವ ಗಂಗೆಯ ರಭಸವನ್ನು ಭೂಮಿಯಿಂದ ತಡೆಯಲು ಸಾಧ್ಯವಿಲ್ಲ, ಆದರಿಂದ ನೀನು ಶಿವನನ್ನು ಪ್ರಾರ್ಥಿಸುವಂತೆ ಹಿರಿಯರು ಹೇಳುತ್ತಾರೆ ಎಂದು ತಿಳಿಸಿದರು.

ನಂತರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಿ.ವಿ.ನಂದೀಶ್, ಕೌಶಲ್ಯ ಅಭಿವೃದ್ಧಿ ಇಲಾಖೆಯ ಜಿಲ್ಲಾ ಅಧಿಕಾರಿ ಅದಾನಂದ, ಉಪ್ಪಾರ ಸಮುದಾಯದ ಜಿಲ್ಲಾಧ್ಯಕ್ಷೆ ನಾಗರತ್ನ ಉಪ್ಪಾರ್, ಡಿ ದೇವರಾಜ ಅರಸ್ ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಸಂದೇಶ್, ಹಾಗೂ ಮುಖಂಡರುಗಳಾದ ಡಾ.ವೆಂಕಟೇಶ್, ಟಿ.ಡಿ.ನಾಗರಾಜ್, ಅಮ್ಜದ್ ಪಾಷಾ, ಬಿ.ಟಿ.ಗುರುರಾಜ್, ಎಸ್.ನಾರಾಯಣ್, ಪೂರ್ಣಚಂದ್ರ, ನರಸಿಂಹಮೂರ್ತಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮೆರವಣಿಗೆ: ವರ್ಣರಂಜಿತ ರಥದ ಮೇಲೆ ಇರಿಸಲಾಗಿದ್ದ ಭಗೀರಥರ ಭಾವ ಚಿತ್ರಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ವಿ.ನಂದೀಶ್ ಅವರು ಪುಷ್ಪಾರ್ಚನೆ ನೆರವೇರಿಸಿ ಮೆರವಣಿಗೆ ಚಾಲನೆ ನೀಡಿದರು. ಜಿಲ್ಲಾಧಿಕಾರಿಗಳ ಕಚೇರಿಯಿಂದ ಡೊಳ್ಳುಕುಣಿತದ ಮೂಲಕ ಮೆರವಣಿಗೆ ಜಿಲ್ಲಾ ಪಂಚಾಯತ್ ಕಚೇರಿಯನ್ನು ಮೆರವಣಿಗೆ ತಲುಪಿತು.



ಭಗೀರಥ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಿರುವ ಗಣ್ಯರು.


ಬಸವಣ್ಣನವರ ಆದರ್ಶ ಪಾಲಿಸಲು ಕರೆ

ಕೆ.ಆರ್.ಪೇಟೆ: 12ನೇ ಶತಮಾನದಲ್ಲಿಯೇ ಸಾಮಾಜಿಕ ಅಸಮಾನತೆ ವಿರುದ್ಧ ಕ್ರಾಂತಿ ನಡೆಸಿ, ಸಮ ಸಮಾಜದ ನಿರ್ಮಾಣಕ್ಕೆ ಮುನ್ನುಡಿ ಬರೆದ ಅಣ್ಣ ಬಸವಣ್ಣ ಅವರ ಜೀವನದ ಆದರ್ಶಗಳನ್ನು ಯುವ ಜನರು ಪಾಲಿಸಬೇಕು ಎಂದು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಕರೆ ನೀಡಿದರು.

ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವೀರಶೈವ ಸಮಾಜದ ಗಣ್ಯರನ್ನು ಗೌರವಿಸಿ ಮಾತನಾಡಿದರು.

ಕಾಪನಹಳ್ಳಿ ಗವಿಮಠದ ಶ್ರೀ ಚನ್ನವೀರಯ್ಯ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಉದ್ಯಮಿ ಚಂದ್ರಪ್ರಕಾಶ್, ಮಹಿಳಾ ಸಾಧಕಿ ಸವಿತಾ, ಪ್ರಗತಿಪರ ಕೃಷಿಕ ನಾಗ ರಾಜು, ಕೆ.ಆರ್.ಪೇಟೆ ಕೃಷ್ಣ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಆರ್.ದಿನೇಶ್ ಹಾಗೂ ಸಮಾಜ ಸೇವಕರಾದ ಕೆ.ಎಸ್.ಸುರೇಶ್ ಕುಮಾರ್ ಹಾಗೂ ತಾಲೂಕು ಪಂಚಾಯತ್ ಮಾಜಿ ಸದಸ್ಯ ಮಾಧವ ಪ್ರಸಾದ್ ಅವರನ್ನು ಗೌರವಿಸಲಾಯಿತು.

ಹೇಮಗಿರಿ ಶಾಖಾ ಮಠದ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಾಜಸೇವಕರಾದ ಆರ್‌ಟಿಓ ಮಲ್ಲಿಕಾರ್ಜುನ್, ಟಿಎಪಿಸಿ ಎಂಎಸ್ ಮಾಜಿ ಅಧ್ಯಕ್ಷ ಬಿ.ನಂಜಪ್ಪ, ಸಾಹಿತಿ ಚಾಶಿ ಜಯಕುಮಾರ್, ಪ್ರಾಂಶುಪಾಲ ಪ್ರಸಾದೇಗೌಡ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಕೃಷಿ ಜನಜಾಗೃತಿ ಅಭಿಯಾನ

ಮಂಡ್ಯ: ಸಮಗ್ರ ಸಾವಯವ ಸುಸ್ಥಿರ ಕೃಷಿ ಟ್ರಸ್ಟ್ ಆಶ್ರಯದಲ್ಲಿ ಕೃಷಿ ಜನಜಾಗೃತಿ ಅಭಿಯಾನವನ್ನು ಮೇ 7ರ ಬೆಳಿಗ್ಗೆ 10.30ಕ್ಕೆ ಕೆರಗೋಡು ಹೋಬಳಿಯ ಕೆ.ಗೌಡಗೆರೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೂರನೇ ಪುಟದಿಂದ

ಮೈಸೂರಲ್ಲಿ ಮರಗಳಿಗಿಲ್ಲ ಉಳಿಗಾಲ

ಬದಿಯಲ್ಲೂ ನಾಲ್ಕೈದು ದಶಕದಿಂದ ಬೆಳೆದಿರುವ ಬೃಹತ್ ಮರಗಳಿಗೆ ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿಯೇ ಮರದ ಸುತ್ತಲೂ ಮೂರು–ನಾಲ್ಕು ಸುತ್ತು ಮೊಳೆ ಹೊಡೆದಿದ್ದಾರೆ. ಇದರಿಂದ ಆ ಮರಗಳು ಬೆಳವಣಿಗೆ ಕುಂಠಿತವಾಗುತ್ತದೆ. ಅಲ್ಲದೇ ನಿಧಾನವಾಗಿ ಮರ ಒಣಗಲಾರಂಭಿಸುತ್ತದೆ. ಉದ್ದೇಶಪೂರ್ವಕವಾಗಿಯೇ ಮೊಳೆ ಹೊಡೆದು ಹಿಂಸಿರುತ್ತಿರುವ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವೃಕ್ಷಪ್ರಿಯರು ಒತ್ತಾಯಿಸಿದ್ದಾರೆ.

ಅಗ್ರಹಾರದಲ್ಲಿ ಮರ ಕಡಿತ: ಅಗ್ರಹಾರದ ತ್ಯಾಗರಾಜ ರಸ್ತೆಯ 6ನೇ ಕ್ರಾಸ್‌ನಲ್ಲಿ ಬೆಳೆಸಲಾಗಿದ್ದ ಹಲವು ಮರಗಳಲ್ಲಿ ಒಂದು ಹೊಂಗೆ ಮರವನ್ನು ಕೆಲ ತಿಂಗಳ ಹಿಂದೆ ಕತ್ತರಿಸಿದ್ದಾರೆ. ಆ ಮರದಿಂದ ಯಾರಿಗೂ ತೊಂದರೆಯಾಗದೇ ಇದ್ದರೂ ಯಾವ ಕಾರಣಕ್ಕೆ ಕತ್ತರಿಸಿದ್ದಾರೆ ಎಂದು ತಿಳಿದುಬಂದಿಲ್ಲ. ಕತ್ತರಿಸಲ್ಪಟ್ಟ ಆ ಹೊಂಗೆ ಮರ ಚಿಗುರೊಡೆಯಲು ಆರಂಭಿಸಿದೆಯಾದರೂ, ಕೆಲ ಕಿಡಿಗೇಡಿಗಳು ಆ ಚಿಗುರನ್ನು ಚಿವುಟುತ್ತಿದ್ದಾರೆ. ವಾರಕ್ಕೊಮ್ಮೆ ಆ ಮರದಲ್ಲಿ ಬೆಳೆದ ಚಿಗುರನ್ನು ಚಿವುಟಿ ಕೀಳುತ್ತಿರುವುದರಿಂದ ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿಯೇ ಆ ಮರ ಕಡಿದಿದ್ದಾರೆಂದು ಮೇಲ್ನೋಟಕ್ಕೆ ಖಚಿತವಾಗಿದೆ. ಕೂಡಲೇ ಈ ಮರದ ಚಿಗುರನ್ನು ಕತ್ತರಿಸುತ್ತಿರುವವನ್ನು ಪತ್ತೆ ಹಚ್ಚಿ ಅವರಿಗೆ ದಂಡ ವಿಧಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸರ್ವೆ ಕಾರ್ಯ: ಕಳೆದ ವರ್ಷ ಅರಣ್ಯ ಇಲಾಖೆ ಪ್ರಕಟಣೆಯೊಂದನ್ನು ಹೊರಡಿಸಿ ಮೈಸೂರು ನಗರದಲ್ಲಿರುವ ಗಿಡ–ಮರಗಳಿಗೆ ಮೊಳೆ ಹೊಡೆಯುವ, ಜಾಹೀರಾತು ಫಲಕ ಅಳವಡಿಸುವ ಹಾಗೂ ವಿದ್ಯುತ್ ಲೈಟ್ ಬಳಸುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು ದಂಡ ವಿಧಿಸುವುದಾಗಿ ಎಚ್ಚರಿಕೆ ನೀಡಿತ್ತು. ಆದರೆ ಆ ನಿಯಮ ಕಾರ್ಯಗತಗೊಳಿಸದ ಕಾರಣ ಮೈಸೂರಲ್ಲಿ ಮರಗಳ ಮೇಲೆ ಎಗ್ಗಿಲ್ಲದೇ ದೌರ್ಜನ್ಯ ನಡೆಯುತ್ತಿದೆ.

ಈ ಹಿಂದೆ ತೆರವುಗೊಳಿಸಲಾಗಿತ್ತು: ಕಳೆದ 10 ವರ್ಷದ ಹಿಂದೆ ಅರಣ್ಯ ಇಲಾಖೆಯ ಜೊತೆಗೂಡಿ ಕೆಲ ಸ್ವಯಂ ಸೇವಕರು ಮರಗಳಿಗೆ ಹೊಡೆದಿದ್ದ ಮೊಳೆ, ಕಬ್ಬಿಣದ ರಾಡನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದ್ದರು. ಅದಕ್ಕೆ ಅರಣ್ಯ ಇಲಾಖೆ ಸಾಥ್ ನೀಡಿತ್ತು ಅದೇ ಮಾದರಿಯಲ್ಲಿ ಇದೀಗ ಮರಗಳ ಸಂರಕ್ಷಣೆಗೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿದೆ.

ನೆರಳು ಬೇಕು, ಮರ ಬೇಡ: ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ 20–30 ವರ್ಷದ ಹಿಂದೆ ಇದ್ದ ಹತ್ತಾರು ಮರಗಳಲ್ಲಿ ಈಗ ಕೇವಲ 3 ಮರವಷ್ಟೇ ಉಳಿದಿದೆ. ಅದರಲ್ಲಿ ಒಂದು ಅರಳೀಮರವಾಗಿದ್ದರೆ, ಇನ್ನೆರಡು ಗುಲ್‌ಮೊಹರ್ ಮರವಾಗಿದೆ. ಅರಣ್ಯ ಇಲಾಖೆ ಪ್ರತೀ ವರ್ಷ ವಿವಿಧ ರಸ್ತೆಗಳಲ್ಲಿ ಗಿಡ ನೆಡುವ ಅಭಿಯಾನವನ್ನು ನಡೆಸುತ್ತದೆಯಾದರೂ, ದೇವರಾಜ ಅರಸ್ ರಸ್ತೆಯಲ್ಲಿ ಗಿಡ ನೆಟ್ಟು ಪೋಷಿಸುವ ಧೈರ್ಯ ಮಾಡಿಲ್ಲ. ಇದೀಗ ಈ ರಸ್ತೆಯಲ್ಲಿ ಐದಾರು ಅಂಗಡಿಗಳ ಮುಂದೆ ಕಾಡುಬಾಳೆ ಗಿಡವನ್ನು ನೆಟ್ಟು ಪೋಷಿಸಲಾಗುತ್ತಿದೆ. ಅಲ್ಲಿನ ಅಂಗಡಿಗಳ ಮಾಲೀಕರು ಮತ್ತು ನೌಕರರು ಆ ಗಿಡಗಳಿಗೆ ನೀರುಣಿಸುತ್ತಿದ್ದಾರೆ. ಅದನ್ನು ಇತರೆ ಅಂಗಡಿ ಮಾಲೀಕರು ಮಾದರಿಯಾಗಿ ಸ್ವೀಕರಿಸಿ ತಮ್ಮ ಅಂಗಡಿಗಳ ಮುಂದೆಯೂ ಗಿಡ ನೆಟ್ಟು ಪೋಷಿಸುವುದಕ್ಕೆ ದೃಢ ಸಂಕಲ್ಪ ಮಾಡಬೇಕು. ಅಂಗಡಿಗಳಿಗೆ ಅಡ್ಡಿಯಾಗುತ್ತದೆ ಎಂದು ಗಿಡ–ಮರ ಬೆಳೆಸುವುದಕ್ಕೆ ಹಿಂದೇಟು ಹಾಕುವುದು ಸರಿಯಲ್ಲ. ಹೊಸದಾಗಿ ಬೆಳೆಯುತ್ತಿರುವ ಗಿಡಗಳ ನೆರಳಿನಲ್ಲಿ ದ್ವಿಚಕ್ರ ವಾಹನ ನಿಲುಗಡೆ ಮಾಡಲು ಕೆಲವರು ಪೈಪೋಟಿ ನಡೆಸುತ್ತಿದ್ದು, ಗಿಡಗಳ ರಕ್ಷಣೆಗೆ ಮಾತ್ರ ಮುಂದಾಗದೇ ಇರುವುದು ವಿಷಾದನೀಯ.

ಕೇವಲ 4 ದಿನಗಳವರೆಗೆ ಸೀಮಿತ

ಮದ್ದುಗುಂಡಗಳ ಕೊರತೆ ಬಗ್ಗೆ ತೀವ್ರ ಕಳವಳ: ಪಾಕಿಸ್ತಾನಿ ಮಿಲಿಟರಿ ಕೂಡಾ ನಿರ್ಣಾಯಕ ಮದ್ದುಗುಂಡುಗಳ ಕೊರತೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಮೇ.2ರಂದು ವಿಶೇಷ ಕಾರ್ಪ್ಸ್ ಕಮಾಂಡರ್‌ಗಳ ಸಮ್ಮೇಳನದಲ್ಲಿ ಇದನ್ನು ಚರ್ಚಿಸಲಾಗಿದೆ. ಮಾಜಿ ಸೇನಾ ಮುಖ್ಯಸ್ಥ ಜನರಲ್ ಕಮರ್ ಜಾವೇದ್ ಬಾಜ್ವಾ ಅವರು ಈ ಮಿತಿಗಳನ್ನು ಈ ಹಿಂದೆ ಒಪ್ಪಿಕೊಂಡಿದ್ದರು. ಭಾರತದೊಂದಿಗೆ ಸುದೀರ್ಘ ಸಂಘರ್ಷದಲ್ಲಿ ತೊಡಗಿಸಿಕೊಳ್ಳಲು ಪಾಕಿಸ್ತಾನಕ್ಕೆ ಯುದ್ಧಸಾಮಗ್ರಿ ಮತ್ತು ಆರ್ಥಿಕ ಶಕ್ತಿಯ ಕೊರತೆಯಿದೆ ಎಂದು ಹೇಳಿದ್ದಾರೆ.

ಗಡಿ ಬಳಿ ಯುದ್ಧ ಸಾಮಾಗ್ರಿ ಡಿಪೋ ನಿರ್ಮಾಣ: ಸಂಭಾವ್ಯ ಸಂಘರ್ಷದ ನಿರೀಕ್ಷೆಯಲ್ಲಿ ಪಾಕಿಸ್ತಾನವು ಭಾರತ–ಪಾಕಿಸ್ತಾನ ಗಡಿಯ ಬಳಿ ಯುದ್ಧಸಾಮಗ್ರಿ ಡಿಪೋಗಳನ್ನು ನಿರ್ಮಿಸಿದೆ ಎಂದು ಗುಪ್ತಚರ ವರದಿಗಳು ಸೂಚಿಸಿವೆ ಎಂದು ಮೂಲಗಳು ಎಎನ್‌ಐಗೆ ತಿಳಿಸಿವೆ. ಪಾಕಿಸ್ತಾನವು ತನ್ನ ಯುದ್ಧಸಾಮಗ್ರಿಗಳನ್ನು ದೂರದ ಯುದ್ಧಗಳಿಗೆ ಸಾಗಿಸಿ ಈಗ ಸಂಕಷ್ಟದಲ್ಲಿ ಸಿಲುಕಿದೆ. ಅದರ ಶಸ್ತ್ರಾಗಾರಗಳು ಖಾಲಿಯಾಗಿವೆ ಮತ್ತು ಅದರ ಸೇನಾ ವ್ಯವಸ್ಥೆ ಅಂಚಿನಲ್ಲಿ ತೇಲುತ್ತಿದೆ ಎಂದು ಹಿರಿಯ ರಕ್ಷಣಾ ವಿಶ್ಲೇಷಕರೊಬ್ಬರು ಎಎನ್‌ಐಗೆ ತಿಳಿಸಿದರು.

ಜವಾಬ್ದಾರಿ ಹೊರುವೆ

ಸಂವಾದಲ್ಲಿ ಅವರು ಹೀಗೆ ಹೇಳಿದ್ದಾರೆ. ಸಂವಾದದ ವೀಡಿಯೊವನ್ನು ಶನಿವಾರ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸಿಖ್ ಗಲಭೆಯನ್ನು ಉಲ್ಲೇಖಿಸಿ, ಸಿಖ್ ಸಮುದಾಯದೊಂದಿಗೆ ಸಂಬಂಧ ಪುನಃ ಸ್ಥಾಪಿಸಲು ಯಾವ ಪ್ರಯತ್ನಗಳನ್ನು ಮಾಡುತ್ತಿದ್ದೀರಿ ಎಂದು ಸಿಖ್ ವಿದ್ಯಾರ್ಥಿಯೊಬ್ಬರು ಪ್ರಶ್ನಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಇತಿಹಾಸದಲ್ಲಿ ಮಾಡಿದ ಎಲ್ಲದಕ್ಕೂ ಜವಾಬ್ದಾರಿಯನ್ನು ತೆಗೆದುಕೊಳ್ಳಲು ನಾನು ಹೆಚ್ಚು ಸಂತೋಷಪಡುತ್ತೇನೆ. 80ರ ದಶಕದಲ್ಲಿ ನಡೆದದ್ದು ತಪ್ಪು ಎಂದು ನಾನು ಸಾರ್ವಜನಿಕವಾಗಿ ಹೇಳಿದ್ದೇನೆ. ನಾನು ಹಲವಾರು ಬಾರಿ ಸ್ವರ್ಣ ಮಂದಿರಕ್ಕೆ ಭೇಟಿ ನೀಡಿದ್ದೇನೆ. ಸಿಖ್ ಸಮುದಾಯದೊಂದಿಗೆ ನನಗೆ ಅತ್ಯಂತ ಉತ್ತಮ ಸಂಬಂಧವಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ನೀಡಲು ತೀರ್ಮಾನ

ತ್ರೀ ಫೇಸ್ ವಿದ್ಯುತ್ ಪೂರೈಕೆಯನ್ನು 6 ಗಂಟೆಯಿಂದ 7 ಗಂಟೆಗೆ ಹೆಚ್ಚಳ ಮಾಡಲಾಯಿತು ಎಂದು ಹೇಳಿದರು. ರೈತರಿಗಾಗಿ ಹಾಲಿನ ಬೆಲೆ ಹೆಚ್ಚಳ ಮಾಡಿದ್ದೇವೆ. ಈ ಹಣವನ್ನು ಸರ್ಕಾರ ಏನಾದರೂ ತೆಗೆದುಕೊಂಡಿದೆಯೇ? ಇದನ್ನು ರೈತರಿಗೆ ನೀಡಿದ್ದೇವೆ. 30 ಸಾವಿರವಿದ್ದ 10 ಗ್ರಾಂ ಚಿನ್ನದ ಬೆಲೆ 1 ಲಕ್ಷಕ್ಕೆ ಏರಿದೆ. ದಿನಸಿ ವಸ್ತುಗಳು, ಕಬ್ಬಿಣ, ಸಿಮೆಂಟ್ ಸೇರಿದಂತೆ ಪ್ರತಿಯೊಂದು ವಸ್ತುಗಳ ಬೆಲೆ ಏರಿಕೆಯಾದಾಗ ಬಿಜೆಪಿಯವರು ಆಕ್ರೋಶ ವ್ಯಕ್ತಪಡಿಸಲಿಲ್ಲ. ಈಗ ಕಾಂಗ್ರೆಸ್ ಮೇಲೆ ಆಕ್ರೋಶವಂತೆ. ಅವರು ಯಾವಾಗ ನಮ್ಮ ಮೇಲೆ ಆಕ್ರೋಶ ವ್ಯಕ್ತಪಡಿಸಿದರೋ ಅದೇ ದಿನ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಹೆಚ್ಚಳ ಮಾಡಿತು. ಅಧಿಕಾರದಲ್ಲಿ ಇರುವ ನಾವು ನಿಮ್ಮ ನೆರವಿಗೆ ನಿಲ್ಲಬೇಕೆ ಹೊರತು ಪಿಕ್ ಪಾಕೆಟ್ ಮಾಡಲು ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಲಸು ಮೇಳಕ್ಕೆ ಯಶಸ್ವಿ ತೆರೆ

ಮೈಸೂರು, ಮೇ 4(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಕೃಷಿಕರ ಬಳಗ, ರೋಟರಿ ಮೈಸೂರು ಪಶ್ಚಿಮ ಸಹಯೋಗದೊಂದಿಗೆ ಎರಡು ದಿನಗಳ ಕಾಲ ನಡೆದ 'ಹಲಸು ಮೇಳ' ಯಶಸ್ವಿಯಾಯಿತು.

ಮೇಳಕ್ಕೆ 10 ಸಾವಿರಕ್ಕೂ ಹೆಚ್ಚಿನ ಜನರು ಭೇಟಿ ನೀಡಿದ್ದು, ಕೆಂಪಲಸು ತಳಿಗಳಾದ ಸಿದ್ದು ಮತ್ತು ಶಂಕರ ತಳಿಗಳ 2000 ಗಿಡಗಳು ಮಾರಾಟವಾದವು. ಕರ್ನಾಟಕದ ವಿವಿಧ ಭಾಗಗಳಿಂದ ಬಂದಿದ್ದ ಹಲಸು ಬೆಳೆಗಾರರು ತಂದಿದ್ದ ಹಲಸಿನ ಹಣ್ಣುಗಳು ಹಾಗೂ ವಿವಿಧ ಬಗೆಯ ಖಾದ್ಯಗಳು ಭರ್ಜರಿ ಮಾರಾಟವಾದವು.

ಎರಡನೇ ದಿನ ನಡೆದ 'ಹಲಸಿನ ಹಣ್ಣು ತಿನ್ನುವ ಸ್ಪರ್ಧೆ'ಯಲ್ಲಿ ಕೆ.ಸಿ.ಸೋಮೇಶ್(45 ಸೆಕೆಂಡಿನಲ್ಲಿ 15 ಹಲಸಿನ ತೊಳೆ) ಪ್ರಥಮ, ಎಸ್.ಡಿ.ಮೋಹನ್ ಕುಮಾರ್ ದ್ವಿತೀಯ ಬಹುಮಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಸಹನಾ(1.30 ನಿಮಿಷದಲ್ಲಿ 15 ಹಲಸಿನ ತೊಳೆ) ಪ್ರಥಮ, ಸುಷ್ಮಾ ದ್ವಿತೀಯ ಬಹುಮಾನ ಗಳಿಸಿದರು. ವಿಜೇತರಿಗೆ ಚಿತ್ರ ನಟಿ ಮತ್ತು ರಂಗಕರ್ಮಿ ಅಕ್ಷತಾ ಪಾಂಡವಪುರ ನಗದು ಬಹುಮಾನ ಹಾಗೂ ಹಲಸಿನ ಹಣ್ಣುಗಳನ್ನು ನೀಡಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಹಲಸು ಆಹಾರ ಸಂಸ್ಕೃತಿಯ ರಾಯಭಾರಿಯಾಗಿದೆ. ಔಷಧೀಯ ಗುಣಗಳಿಂದ ಸಮೃದ್ಧವಾದ ಹಲಸಿನ ನಿರಂತರ ಬಳಕೆಯಿಂದ ಆರೋಗ್ಯವನ್ನು ವೃದ್ಧಿಸಲಿದೆ. ಹಲಸನ್ನು ಆಹಾರದ ಭಾಗವಾಗಿ ಮಾಡಿಕೊಳ್ಳಬೇಕು. ಶಂಕರ ಮತ್ತು ಸಿದ್ದುವಿನಂತ ಹಲಸಿನ ತಳಿಗಳು ತಮ್ಮ ವಿಶಿಷ್ಟ ರುಚಿ ಮತ್ತು ಬಣ್ಣದಿಂದ ಹೆಸರು ಪಡೆದಿದ್ದು, ಅನೇಕ ಹಲಸಿನ ತಳಿಗಳು ಕರ್ನಾಟಕದಲ್ಲಿವೆ. ಇಂತಹ ಮೇಳಗಳನ್ನು ಆಯೋಜಿಸುವ ಮೂಲಕ, ಗ್ರಾಹಕರಲ್ಲಿ ಹಲಸಿನ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಹಲಸಿನ ಹಣ್ಣು ತಿನ್ನುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಹಲಸಿನ ಹಣ್ಣುಗಳನ್ನು ನಟಿ ಅಕ್ಷತಾ ಪಾಂಡವಪುರ ವಿತರಿಸಿದರು. ಸಹಜ ಸಮೃದ್ಧ ಕೃಷಿಕರ ಬಳಗದ ಕೃಷ್ಣ ಪ್ರಸಾದ್ ಉಪಸ್ಥಿತರಿದ್ದರು.


ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ಮೇ 4– ಮೇ 2 ರಂದು ನಾಗನಹಳ್ಳಿ–ಪಾಂಡವಪುರ ರೈಲು ನಿಲ್ದಾಣಗಳ ನಡುವೆ ಸುಮಾರು 30 ರಿಂದ 35 ವರ್ಷದ ಗಂಡಸು ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿದ್ದು, ಮೃತನ ದೇಹವು ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರದಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಹರೆ: ಸುಮಾರು 30 ರಿಂದ 35 ವರ್ಷ ವಯಸ್ಸಾಗಿದ್ದು, 5.6 ಅಡಿ ಎತ್ತರ, ಗೋಧಿ ಮೈ ಬಣ್ಣ, ಸಾಧಾರಣ ಮೈ ಕಟ್ಟು, ದುಂಡು ಮುಖ, 2 ಇಂಚು ಕಪ್ಪು ಕೂದಲು ಹೊಂದಿದ್ದು, 1/2 ಇಂಚು ಮೀಸೆ ಬಿಟ್ಟಿರುತ್ತಾರೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ:0821–2516579 ನ್ನು ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ರಾಮಾನುಜಾಚಾರ್ಯರ 1008ನೇ ತಿರುನಕ್ಷತ್ರ ಆಚರಣೆ



ಮೈಸೂರಿನ ರಾಮಾನುಜ ಸಹಕಾರ ಸಂಘದ ಕಚೇರಿಯಲ್ಲಿ ಶ್ರೀ ರಾಮಾನುಜಾಚಾರ್ಯರ 1008ನೇ ತಿರುನಕ್ಷತ್ರದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ , ತಿರುನಕ್ಷತ್ರ ಆಚರಣೆ ಮಾಡಲಾಯಿತು. ಈ ವೇಳೆ ಶ್ರೀ ರಾಮಾನುಜ ಸಹಕಾರ ಸಂಘದ ಅಧ್ಯಕ್ಷ ಎಚ್.ಕೆ ರಾಜಗೋಪಾಲನ್, ನಿರ್ದೇಶಕರಾದ ಪುಟಸ್ವಾಮಿ, ಕೆ.ಆರ್.ಯೋಗ ನರಸಿಂಹ, ರಾಮಸ್ವಾಮಿ, ಟಿ.ಎಸ್.ಅರುಣ್, ಚಕ್ರಪಾಣಿ, ಅನಂತ್ ಕೃಷ್ಣ, ಕೇಶವ ಆಂಡಾಳ್, ಅನುರಾಧ, ಲಕ್ಷ್ಮಿ ಉಪಸ್ಥಿತರಿದ್ದರು.

'ಎದೆಗೆ ಬಿದ್ದ ಅಕ್ಷರ' ರಂಗ ಪ್ರಯೋಗಕ್ಕೆ ರಂಗಾಸಕ್ತರ ಮೆಚ್ಚುಗೆ

ಮೈಸೂರು, ಮೇ 4(ಎಂಕೆ)– ಹಿರಿಯ ಸಾಹಿತಿ ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಲೇಖನಗಳ ಸಂಕಲನದ ರಂಗ ಪ್ರಯೋಗ ಅಪಾರ ಮೆಚ್ಚುಗೆಯೊಂದಿಗೆ ಯಶಸ್ವಿಯಾಯಿತು.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಎಸ್.ನಟರಾಜ್ ಬೂದಾಳ್ ಹಾಗೂ ಆರ್.ಸಂತೋಷ್ ನಾಯಕ್ ಅವರ ರಂಗರೂಪ, ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರ ಪರಿಕಲ್ಪನೆ, ಸಂಗೀತ ಮತ್ತು ನಿರ್ದೇಶನದಲ್ಲಿ ಪ್ರಸ್ತುತಗೊಂಡ 'ಎದೆಗೆ ಬಿದ್ದ ಅಕ್ಷರ' ರಂಗ ಪ್ರಯೋಗ ರಂಗಾಸ್ತಕರ ಗಮನ ಸೆಳೆಯಿತು.

'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ–ಇಂದಲ್ಲ ನಾಳೆ ಫಲ ಕೊಡುವುದು' ಎಂಬ ವಾಕ್ಯದೊಂದಿಗೆ ಭಾರತೀಯ ಸಮಾಜದ ಅಸಮಾನತೆ, ಜಾತಿ ವ್ಯವಸ್ಥೆ ಹಾಗೂ ಮಾನವೀಯತೆ ಕುರಿತು ಆಕರ್ಷಕ ಸಂಭಾಷಣೆ, ದೃಶ್ಯಾವಳಿಯ ಮೂಲಕ ಮನಮುಟ್ಟುವಂತೆ ತಿಳಿಸಲಾಯಿತು.

ಮೈಸೂರು ಕಾವಲುಮನೆ ಸಾಂಸ್ಕೃತಿಕ ಕೇಂದ್ರದ ಕಲಾವಿದರಾದ ಮಲ್ಲಿಕ್, ಜಯಶ್ರೀ ಹೆಗಡೆ, ಭೀಮರಾವ್, ಸುಮಾ ಪ್ರಶಾಂತ್, ಮಹದೇವ್, ಬಿ.ಶೋಭ ಶಿವರಾಜು, ಉಮಾ ಶಂಕರ್ ದೀಕ್ಷಿತ್, ರೂಪಶ್ರೀ, ಎಸ್.ಸುದೀರ್ ಕುಮಾರ್, ರೇಖಾ, ಸಂಜೀವ್ ಪಾಟೀಲ್, ಮಹಾದೇವಿ ಕೆಂಚಲಗೂಡು, ಚಂದ್ರು ಮತ್ತು ಸಹನಾಜ್ ರಹಮಾನ್ ತಮ್ಮ ಅಚ್ಚುಕಟ್ಟು ಅಭಿಮನಯದ ಮೂಲಕ ಪ್ರೇಕ್ಷಕರಿಂದ ಚಪ್ಪಾಳೆ ಪಡೆದರು. ಮೇ 9, 23, 24, 25 ರಂದು ಪ್ರಾಯೋಜಿತ ಪ್ರದರ್ಶನ, ಮೇ 17 ರಂದು ಕಿರುರಂಗಮಂದಿರ, ಮೇ 15 ರಂದು ಮೈಸೂರು ವಿವಿ ಬಿಎಂಶ್ರೀ ಸಭಾಂಗಣ ಹಾಗೂ ಮೇ 20 ರಂದು ಬೆಂಗಳೂರಿನ ಕಲಾಗ್ರಾಮದಲ್ಲಿ 'ಎದೆಗೆ ಬಿದ್ದ ಅಕ್ಷರ' ರಂಗ ಪ್ರಯೋಗ ಪ್ರದರ್ಶನ ನಡೆಯಲಿದೆ.



'ಎದೆಗೆ ಬಿದ್ದ ಅಕ್ಷರ' ರಂಗಪ್ರಯೋಗದ ದೃಶ್ಯ.

ತಂದೆಯ ಅಂತ್ಯಸಂಸ್ಕಾರದಲ್ಲಿ ಭೂಗತ ಪಾತಕಿ ಬನ್ನಂಜೆ ರಾಜ ಭಾಗಿ

ಉಡುಪಿ, ಮೇ 4– ತಂದೆಯ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಹೈಕೋರ್ಟ್ ಅನುಮತಿ ನೀಡಿರುವ ಕಾರಣ ಭೂಗತ ಪಾತಕಿ ಬನ್ನಂಜೆ ರಾಜನನ್ನು ಉಡುಪಿಗೆ ಭಾನುವಾರ ಕರೆ ತರಲಾಯಿತು.

ಬೆಳಗಾವಿಯ ಜೈಲಿನಲ್ಲಿರುವ ಬನ್ನಂಜೆ ರಾಜನನ್ನು ಪೊಲೀಸರು ಬಿಗಿ ಭದ್ರತೆಯಲ್ಲಿ ಮಲ್ಪೆಯ ಕಲ್ಮಾಡಿಯ ಸಸಿತೋಟ ಎಂಬಲ್ಲಿರುವ ಆತನ ಮನೆಗೆ ಕರೆದುಕೊಂಡು ಬಂದಿದ್ದಾರೆ.

ಅಲ್ಲಿ ಆತ ತಂದೆಯ ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಿದ್ದಾನೆ. ಬಳಿಕ ಮಲ್ಪೆ ಹಿಂದೂ ರುದ್ರಭೂಮಿಯಲ್ಲಿ ಆತನ ತಂದೆಯ ಅಂತ್ಯ ಸಂಸ್ಕಾರ ನೆರವೇರಿತು. ಏ.27 ರಂದು ನಿಧನರಾದ ತಂದೆ ಎಂ.ಸುಂದರ್(88) ಅವರ ಅಂತಿಮ ಸಂಸ್ಕಾರ ಹಾಗೂ ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ತುರ್ತು ಪೆರೋಲ್ ನೀಡುವಂತೆ ಬನ್ನಂಜೆ ರಾಜ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದ. ಹೈಕೋರ್ಟ್ ಆತನಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಮೇ 3ರಿಂದ ಮೇ 14ರವರೆಗೆ ಪೆರೋಲ್ ನೀಡಿತ್ತು.

ತಂದೆಯ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡ ಬಳಿಕ ಬನ್ನಂಜೆ ರಾಜ ಮನೆಯಿಂದ ಹೊರಗೆ ಬರಬಾರದು ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಲಾಗಿದೆ. ಇದೇ 14ರಂದು ಆತನನ್ನು ಮತ್ತೆ ಬೆಳಗಾವಿಯ ಜೈಲಿಗೆ ಕರೆದೊಯ್ಯಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ.ತಿಳಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 5 ಮೇ 2025

ಹಿಂದೂ ಧರ್ಮದ ಪುನರುತ್ಥಾನಕ್ಕೆ ಶ್ರೇಷ್ಠ ಆಚಾರ್ಯರ ಕೊಡುಗೆ

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಸ್ಮರಣೆ



ಮೈಸೂರಿನ ಕಂಚಿ ಮಠದ ರಾಮಮಂದಿರದಲ್ಲಿ ಮೈಸೂರು ಯುವ ಬಳಗದಿಂದ ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಆಚಾರ್ಯತ್ರಯರ ಭಾವಚಿತ್ರಕ್ಕೆ ಶಾಸಕ ಕೆ.ಹರೀಶ್‌ಗೌಡ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಮೇ 4– ಮೈಸೂರಿನ ರಮಾವಿಲಾಸ ರಸ್ತೆಯಲ್ಲಿರುವ ಕಂಚಿ ಮಠದ ರಾಮಮಂದಿರದಲ್ಲಿ ಮೈಸೂರು ಯುವ ಬಳಗದ ವತಿಯಿಂದ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಆಚಾರ್ಯತ್ರಯರ ಭಾವಚಿತ್ರಕ್ಕೆ ಶಾಸಕ ಕೆ.ಹರೀಶ್‌ಗೌಡ ಪುಷ್ಪಾರ್ಚನೆ ಮಾಡಿ, ಭಕ್ತಿಯಿಂದ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಹಿಂದೂ ಧರ್ಮದ ಪುನರುತ್ಥಾನಕ್ಕೆ ಅಭೂತಪೂರ್ವ ಕೊಡುಗೆ ನೀಡಿದ ಇಬ್ಬರು ಶ್ರೇಷ್ಠ ಆಚಾರ್ಯರ ಜಯಂತಿಯ ದಿನವಾದ ಇಂದು ಅತ್ಯಂತ ಶ್ರೇಷ್ಠ ದಿನ. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಶ್ರೀ ಶಂಕರಾಚಾರ್ಯ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಶ್ರೀ ರಾಮಾನುಜಾಚಾರ್ಯರ ಜಯಂತಿಗಳು ಒಂದೇ ದಿನ ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಪುಣ್ಯದ ದಿನವೂ ಹೌದು ಎಂದರು.

ಅರ್ಚಕರಾದ ರಾಮಾನುಜಂ, ವೆಂಕಟೇಶ್, ನಾರಾಯಣಾಚಾರ್ಯ, ಗುರು, ನರಸಿಂಹ, ಧ್ಯಾನ್, ಸಂದೀಪ್, ರವಿಚಂದ್ರ ನವೀನ್, ರೇಖಾ ಶ್ರೀನಿವಾಸ್, ಹೊಯ್ಸಳ ಕರ್ನಾಟಕ ಸಂಘದ ರಂಗನಾಥ್, ಪ್ರಶಾಂತ್, ಚಕ್ರಪಾಣಿ ಇನ್ನಿತರರು ಹಾಜರಿದ್ದರು.

ಇಂದು ವ್ಯಂಗ್ಯಚಿತ್ರಕಾರರ ಕಲಾ ಪ್ರದರ್ಶನ

'ಆ್ಯಂಫಿ ಮ್ಯಾನ್' ಕಾರ್ಟೂನ್ ಸೂಪರ್ ಹೀರೋ ಚಿತ್ರ ಲೋಕಾರ್ಪಣೆ



ನಾಗೇಂದ್ರಬಾಬು

ಮೈಸೂರು, ಮೇ4–ಮೈಸೂರಿನ ಬ್ಯಾಂಟರ್ ಬಾಬು ಪಬ್ಲಿಕೇಷನ್ ವತಿಯಿಂದ ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಮೇ 5ರಂದು ಬೆಳಗ್ಗೆ 10.30ಕ್ಕೆ ವಿಜಯನಗರ 2ನೇ ಹಂತದ ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿಯಲ್ಲಿ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟರ್ ಎಂ.ವಿ.ನಾಗೇಂದ್ರಬಾಬು ಅವರ ವ್ಯಂಗ್ಯಚಿತ್ರ ಕಲಾ ಪ್ರದರ್ಶನ ಮತ್ತು 'ಆ್ಯಂಫಿ ಮ್ಯಾನ್' ಕಾರ್ಟೂನ್ ಸೂಪರ್ ಹೀರೋ ಚಿತ್ರ ಲೋಕಾರ್ಪಣೆ ಸಮಾರಂಭ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸುವರು. ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಹಿರಿಯ ಚಿತ್ರಕಲಾವಿದರು, ಭರಣಿ ಆರ್ಟ್ ಗ್ಯಾಲರಿ ಸಂಸ್ಥಾಪಕ ಎನ್.ಬಿ.ಕಾವೇರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಮತ್ತು ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಪ್ರಿನ್ಸಿಪಾಲ್ ಕೆ.ಸಿ.ಮಹದೇವಶೆಟ್ಟಿ ಭಾಗವಹಿಸುವರು. ವ್ಯಂಗ್ಯ ಚಿತ್ರಗಳ ಪ್ರದರ್ಶನ ಅಂದು ಬೆಳಗ್ಗೆ 11ರಿಂದ ಸಂಜೆ 6ರವರೆಗೆ ಇರುತ್ತದೆ.

ಅಭಿನಂದನೆ...



ಬಿಜೆಪಿ–ಜೆಡಿಎಸ್ ಮೈತ್ರಿ ಬಲದಿಂದ ಹುಣಸೂರು ನಗರಸಭೆ ಅಧ್ಯಕ್ಷರಾಗಿ ಗಣೇಶ್ ಕುಮಾರ್ ಆಯ್ಕೆಯಾದ ಹಿನ್ನೆಲೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್ ಜೈರಾಮ್ ಗೌಡ, ಮಂಡಲ ಅಧ್ಯಕ್ಷರಾದ ಕಾಂತರಾಜು, ಪಾಪಣ್ಣ, ಪ್ರಸನ್ನ, ರಾಮಚಂದ್ರ, ವೆಂಕಟಮ್ಮ, ಕಮಲಮ್ಮ, ಯಶೋದಮ್ಮ, ಮಹದೇವಮ್ಮ ಮತ್ತಿತರರಿದ್ದರು.

ಕಿಟಕಿ ಚೌಕಟ್ಟು ಬಿದ್ದು ಬಾಲಕ ಸಾವು



ಆರ್ಯನ್ ಎಸ್.ಗೌಡ

ಮೈಸೂರು, ಮೇ 4– ಮೈಸೂರಿನ ಆರು ವರ್ಷದ ಬಾಲಕ, ಉತ್ತರ ಕನ್ನಡದ ಶಿರಸಿಯಲ್ಲಿರುವ ತಾತನ ಮನೆಗೆ ಹೋಗಿದ್ದಾಗ ಆತನ ಮೇಲೆ ಸಿಮೆಂಟ್ ಕಿಟಕಿ ಚೌಕಟ್ಟು ಬಿದ್ದು, ಮೃತಪಟ್ಟಿದ್ದಾನೆ.

ಮೈಸೂರಿನ ಹಿನಕಲ್ ನಿವಾಸಿ ಶ್ರೀಕಾಂತಗೌಡ ಹಾಗೂ ಶ್ರೀಮತಿ ಕಾವ್ಯ ದಂಪತಿಯ ಕಿರಿಯ ಪುತ್ರ ಆರ್ಯನ್ ಎಸ್.ಗೌಡ(6) ದುರಂತ ಸಾವಿಗೀಡಾದ ಬಾಲಕ.

ಶ್ರೀಕಾಂತಗೌಡ ಅವರ ತಂದೆ–ತಾಯಿ ಶಿರಸಿಯಲ್ಲಿ ನೆಲೆಸಿದ್ದು, ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾರೆ. ಬೇಸಿಗೆ ರಜೆ ಹಿನ್ನೆಲೆಯಲ್ಲಿ ಶ್ರೀಕಾಂತಗೌಡ, ಪತ್ನಿ ಹಾಗೂ ಇಬ್ಬರು ಪುತ್ರರೊಂದಿಗೆ ಶಿರಸಿಗೆ ಹೋಗಿದ್ದರು. ಕಳೆದ ಶುಕ್ರವಾರ ಮಧ್ಯಾಹ್ನ ಆಟವಾಡುತ್ತಿದ್ದ ಆರ್ಯನ್ ಮೇಲೆ ಸಿಮೆಂಟ್ ಕಿಟಕಿ ಚೌಕಟ್ಟು ಬಿದ್ದಿದೆ. ಕ್ಷಣಾರ್ಧದಲ್ಲಿ ಮನೆಯವರು ಓಡಿಬಂದು ಚೌಕಟ್ಟನ್ನು ಮೇಲೆತ್ತಿದರಾದರೂ ಆರ್ಯನ್ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾನೆ ಎಂದು ತಿಳಿದುಬಂದಿದೆ. ಕಣ್ಣೆದುರೇ ಮಗನನ್ನು ಕಳೆದುಕೊಂಡ ತಂದೆ–ತಾಯಿ, ತಾತ–ಅಜ್ಜಿ ಆಘಾತಕ್ಕೊಳಗಾಗಿದ್ದಾರೆ. ಶ್ರೀಕಾಂತ್‌ಗೌಡ ಅವರ ಮೊದಲ ಪುತ್ರ, ಒಡಹುಟ್ಟಿದವನ ಸಾವಿನಿಂದ ಕಂಗಾಲಾಗಿದ್ದಾನೆ. ಸದಾ ಲವಲವಿಕೆಯಿಂದ ಇರುತ್ತಿದ್ದ ಮನೆಯಲ್ಲಿ ದುಃಖ ಮಡುಗಟ್ಟಿದೆ. ಶ್ರೀಕಾಂತಗೌಡರ ಸ್ವಗ್ರಾಮವಾದ ಪಾಂಡವಪುರ ತಾಲೂಕು ರಾಗಿಮುದ್ದನಹಳ್ಳಿಯಲ್ಲಿ ಶನಿವಾರ ಆರ್ಯನ್ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಂದಿನ ಪೀಳಿಗೆಯ ಶಿಕ್ಷಣ, ಉದ್ಯೋಗ, ಉತ್ತಮ ಭವಿಷ್ಯಕ್ಕಾಗಿ ಒಳ ಮೀಸಲಾತಿ ಅಗತ್ಯ

ಒಳ ಮೀಸಲಾತಿ ಸಮೀಕ್ಷೆ ವೇಳೆ ಜಾತಿ ಕಾಲಂನಲ್ಲಿ ಮಾದಿಗ ಎಂದು ಬರೆಸಲು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಮನವಿ



ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ಒಳ ಮೀಸಲಾತಿ ಸಮೀಕ್ಷೆ ಕುರಿತು ಭಾನುವಾರ ನಡೆದ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿದರು.

ಮೈಸೂರು, ಮೇ 4(ಜಿಎ)–ನಮ್ಮ ಮುಂದಿನ ಪೀಳಿಗೆಯ ಶಿಕ್ಷಣ, ಉದ್ಯೋಗ ಹಾಗೂ ಉತ್ತಮ ಭವಿಷ್ಯ ರೂಪಿಸಲು ಒಳ ಮೀಸಲಾತಿ ಅಗತ್ಯವಾಗಿದ್ದು, ಜಾತಿ ಮುಚ್ಚಿಟ್ಟುಕೊಳ್ಳದೆ ಒಳ ಮೀಸಲಾತಿ ಸಮೀಕ್ಷೆಯಲ್ಲಿ ಜಾತಿಯ ಕಾಲಂನಲ್ಲಿ ಮಾದಿಗ ಎಂದು ನಮೂದಿಸುವಂತೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಇಂದಿಲ್ಲಿ ಕರೆ ನೀಡಿದರು.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ಒಳ ಮೀಸಲಾತಿ ಸಮೀಕ್ಷೆ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮುಂದಿನ ಭವಿಷ್ಯಕ್ಕಾಗಿ ಒಳ ಮೀಸಲಾತಿ ಅಗತ್ಯವಿದೆ. ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿದ್ದರಿಂದ ಮಾದಿಗ ಸಮುದಾಯದ ಕಣ್ತೆರೆಸುವಂತೆ ಮಾಡಿದೆ. ಒಂದು ಮನೆಯನ್ನು ಬಿಡದೆ ಸಮೀಕ್ಷೆಯ ವೇಳೆ ಎಲ್ಲರೂ ಹಾಜರಿದ್ದು ಬರೆಸಬೇಕು. ಮಾದಿಗ ಸಮುದಾಯದ ಜನಸಂಖ್ಯೆ ಹೆಚ್ಚಾದರೆ ಮೀಸಲಾತಿ ಪ್ರಮಾಣ ಜಾಸ್ತಿಯಾಗಲಿದೆ ಎಂದರು.

ಡಿ.ದೇವರಾಜ ಅರಸು ಅವರು ಸಿಎಂ ಆಗಿದ್ದಾಗ ನೇರ ನೇಮಕಾತಿ ಮಾಡಿದ ಸಂದರ್ಭದಲ್ಲಿ ಮಾದಿಗ ಸಮುದಾಯಕ್ಕೆ ಸೇರಿದ ನಾನು ನೇಮಕಾತಿಗೊಂಡಿದ್ದೆ. ಅಂದು ನಾನೇ ಮೊದಲು ಮತ್ತು ನಾನೇ ಕೊನೆಯಾಗಿದ್ದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಅವಕಾಶ ಒದಗಿತು. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನವನ್ನು ಒದಗಿಸಿದ್ದರೆ, ಪರಿಶಿಷ್ಟಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡಿದ ಕೀರ್ತಿ ಹೊಂದಲಿದ್ದಾರೆ. ಸಿದ್ದರಾಮಯ್ಯ ಅವರು ಒಳ ಮೀಸಲಾತಿ ಕಲ್ಪಿಸುವುದರಲ್ಲಿ ಹಿಂದೆ ಸರಿಯಲ್ಲ ಎಂದು ತಿಳಿಸಿದರು.

ಮಾಜಿ ಮೇಯರ್ ನಾರಾಯಣ ಮಾತನಾಡಿ, ಆದಿದ್ರಾವಿಡ, ಆದಿ ಆಂಧ್ರದವರು ಕರ್ನಾಟಕದ ಮೂಲವಲ್ಲ. ಆದಿ ಕರ್ನಾಟಕದವರು ಕರ್ನಾಟಕದ ನೆಲೆಯವರು. ಪರಿಶಿಷ್ಟಜಾತಿ ಸಮುದಾಯದಲ್ಲಿ ಈಗ ಹೊಲೆಯರು ಅಂತ ಹಾಗೂ ಮಾದಿಗರು ಎನ್ನುವುದು ಮುಖ್ಯ. ಹೆಚ್.ಎನ್.ನಾಗಮೋಹನ್‌ದಾಸ್ ಒಳ ಮೀಸಲಾತಿ ಕಲ್ಪಿಸಲು ಕೆಲವು ಗೊಂದಲ ಇರುವುದು, ಆದಿ ಆಂಧ್ರ,ಆದಿ ದ್ರಾವಿಡದಲ್ಲೂ ಮಾದಿಗ ಸೇರಿಕೊಂಡಿರುವ ಕಾರಣ ಮತ್ತೊಮ್ಮೆ ದತ್ತಾಂಶ ಸಂಗ್ರಹಣೆ ಮಾಡುವುದಕ್ಕೆ ಸಮಯ ಕೇಳಿಕೊಂಡಿದ್ದರು. ಅದರಂತೆ, ದತ್ತಾಂಶ ಸಂಗ್ರಹಣೆಗೆ ಸಮೀಕ್ಷೆ ನಡೆಯುತ್ತಿದೆ. ಇದರಿಂದಾಗಿ ಜಾತಿ ವರ್ಗೀಕರಣ ಮಾಡಲು ಸುಲಭವಾಗಲಿದೆ ಎಂದರು.

ಪೌರಕಾರ್ಮಿಕರದ್ದು ವೃತ್ತಿ ಹೊರತು ಜಾತಿಯಲ್ಲ. ನಾವು–ನೀವು ಅಣ್ಣ ತಮ್ಮಂದರು ಆಗಿದ್ದೇವೆ. ಸಿಗುವ ಮೀಸಲಾತಿಯಲ್ಲಿ ನಾವು ಹಂಚಿಕೊಳ್ಳೋಣ.ಆದರೆ, ನಾವು ಬಲಗೈನವರೊಂದಿಗೆ ಸೇರಿಕೊಂಡು ಪೈಪೋಟಿ ನೀಡಲು ಸಾಧ್ಯವಿಲ್ಲ. ಅವರು ನಮ್ಮನ್ನು ಅಪ್ಪಿಕೊಳ್ಳುವುದಿಲ್ಲ. ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಮುಂದುವರಿದಿದ್ದಾರೆ. ಮತ್ತೆ ನಾವು ಅವರೊಂದಿಗೆ ಸೇರಿಕೊಂಡರೆ ಕಷ್ಟವಾಗಲಿದೆ. ಆದ್ದರಿಂದ ನಾವೆಲ್ಲರೂ ಹಳೆಯದನ್ನು ಮರೆತು ಮಾದಿಗ ಅಂತ ಬರೆಸೋಣ ಎಂದು ಕರೆ ನೀಡಿ ದರು. ಜನಸಂಖ್ಯೆಯಲ್ಲಿ ಬಲಗೈನವರಿಗಿಂತ ಮಾದಿಗ ಸಮುದಾಯ ಹೆಚ್ಚಾಗಿದೆ. ಆದರೆ, ಸೌಲಭ್ಯ, ಅಭಿವೃದ್ಧಿಯಲ್ಲಿ ನಾವು ತೀರಾ ಹಿಂದುಳಿದಿದ್ದೇವೆ. ಇದನ್ನು ತಪ್ಪಿಸಬೇಕಾದರೆ ನಮ್ಮ ಜನಸಂಖ್ಯೆ ಪ್ರಮಾಣವನ್ನು ಸರ್ಕಾರ ಅರಿಯಬೇಕಿದೆ ಎಂದರು.

ಸಭೆಯಲ್ಲಿ ವಿಚಾರವಾದಿ ಪ್ರೊ.ಎಚ್.ಗೋವಿಂದಯ್ಯ, ಮುಖಂಡರಾದ ಎಡತೊರೆ ನಿಂಗರಾಜು, ಆರ್.ನಾಗರಾಜು, ಮಣಿ, ಹನುಮೇಶ್, ಶ್ರೀನಿವಾಸ್, ಮಾರಯ್ಯ, ಚಿನ್ನಣ್ಣ, ಶ್ರೀನಿವಾಸಮೂರ್ತಿ, ವಕೀಲ ಶಿವಪ್ರಸಾದ್, ನಂಜಪ್ಪ ಮತ್ತಿತರರಿದ್ದರು.

> "ಪೌರಕಾರ್ಮಿಕ ಎಂಬುದು ಜಾತಿಯಲ್ಲ. ಅದೊಂದು ವೃತ್ತಿಯಾಗಿರುವ ಕಾರಣ ಕಮ್ಮಾರರು, ಸಫಾಯಿ ಕರ್ಮಚಾರಿಗಳು, ಪೌರಕಾರ್ಮಿಕರು ಮಾದಿಗರೇ ಆಗಿರುವ ಕಾರಣ ಸಮೀಕ್ಷೆಯ ವೇಳೆ ಮಾದಿಗ ಎನ್ನುವುದನ್ನು ಬರೆಸಬೇಕು. ಒಂದು ವೇಳೆ ಸಮೀಕ್ಷೆಯಲ್ಲಿ ವ್ಯತ್ಯಾಸವಾದರೆ ಒಳ ಮೀಸಲಾತಿ ಪ್ರಮಾಣ ಕಡಿಮೆಯಾಗಲಿದೆ. ಈ ಹಿನ್ನೆಲೆಯಲ್ಲಿ ಸಮೀಕ್ಷೆ ಸಂದರ್ಭದಲ್ಲಿ ಜವಾಬ್ದಾರಿಯನ್ನು ಅರಿತು ನಮೂದಿಸಬೇಕು.
> –ಸಮುದಾಯದ ಮುಖಂಡರು

ರಾಮಾನುಜಾಚಾರ್ಯರು ಪರಮಾತ್ಮನ ಅವತಾರ

ಶ್ರೀ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅಭಿಮತ



ಮೈಸೂರಿನ ಶ್ರೀ ವೈಷ್ಣವ ಸಂಘದ ವತಿಯಿಂದ ಶ್ರೀ ರಾಮಾನುಜಾಚಾರ್ಯರ 1008ನೇ ತಿರುನಕ್ಷತ್ರ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮೈಸೂರು, ಮೇ 4– ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘದ ವತಿಯಿಂದ ಭಗವದ್ ಶ್ರೀ ರಾಮಾನುಜಾಚಾರ್ಯರ 1008ನೇ ತಿರುನಕ್ಷತ್ರ ಹಾಗೂ 16ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಮ್ಮಿಕೊಳ್ಳಲಾಯಿತು.

ಸರಸ್ವತಿಪುರಂ ರೋಟರಿ ಪಶ್ಚಿಮ ವಿದ್ಯಾ ಸಂಸ್ಥೆ ಸಭಾಂಗಣದಲ್ಲಿ ನಡೆದ ಈ ಮಹಾಸಭೆಯಲ್ಲಿ ಯದುಗಿರಿ ಯತಿರಾಜ ಮಠದ ಪೂಜ್ಯ ಶ್ರೀ ಯದುಗಿರಿ ಯತಿರಾಜ ನಾರಾ ಯಣ ರಾಮಾನುಜ ಜೀಯರ್ ಸ್ವಾಮೀಜಿಯವರು ಶ್ರೀ ರಾಮಾನುಜಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸಭೆಯನ್ನು ಉದ್ಘಾಟಿಸಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ನಂತರ ಆಶೀರ್ವಚನ ನೀಡಿದ ಯದುಗಿರಿ ಯತಿರಾಜ ಮಠದ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿಯವರು, ರಾಮಾನುಜಾಚಾರ್ಯರು ಸಾಮಾನ್ಯರಲ್ಲ. ಅವರು ಕೃಷ್ಣನ ಅವತಾರ, ಆದಿಶೇಷನ ಅವತಾರ, ಲಕ್ಷ್ಮಣನ ಅವತಾರ, ಪರಮಾತ್ಮನ ಅವತಾರ. ಹೀಗೆ ಎಲ್ಲ ಅವತಾರಗಳ ಸಂಗಮ ರಾಮಾನುಜರು. ಹಾಗಾಗಿ ಅವರಿಗೆ ಮಹಾನ್ ಶಕ್ತಿ ಇತ್ತು ಎಂದು ಬಣ್ಣಿಸಿದರು.

ಇದೇ ವೇಳೆ ಇಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರದ ಪ್ರಯೋಜನವನ್ನು ನೂರಕ್ಕೂ ಹೆಚ್ಚು ಸಮಾಜದ ಬಂಧುಗಳು ಸದುಪಯೋಗ ಪಡಿಸಿಕೊಂಡರು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಆರ್.ಲೋಕೇಶ್, ಉಪಾಧ್ಯಕ್ಷ ಪ್ರೇಮ್‌ಕುಮಾರ್, ಸ್ವಾಮಿ, ಕಾರ್ಯದರ್ಶಿ ಪುಟ್ಟಸ್ವಾಮಿ, ಪಾಲಾಕ್ಷ, ನಾರಾಯಣ ಜೆಯರ್, ರಾಘು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಲಕ್ಷ್ಮೀದೇವಿ, ಪುಷ್ಪ ಅಯ್ಯಂಗಾರ್, ಯೋಗ ನರ ಸಿಂಹ, ಚಕ್ರಪಾಣಿ ಇತರರು ಪಾಲ್ಗೊಂಡಿದ್ದರು.

ಪಠ್ಯಪುಸ್ತಕ, ಸಾಹಿತ್ಯ ಕೃತಿಗಳ ರವಾನೆಗೆ 'ಜ್ಞಾನ ಅಂಚೆ' ಸೇವೆ

ಮೈಸೂರು, ಮೇ 4(ಎಸ್‌ಪಿಎನ್)– ಪಠ್ಯ ಪುಸ್ತಕ, ಸಾಹಿತ್ಯ ಕೃತಿಗಳು ಹಾಗೂ ಇತರೆ ಮುದ್ರಿತ ಪುಸ್ತಕಗಳ ರವಾನೆಗಾಗಿ ನೂತನವಾಗಿ ಜ್ಞಾನ ಅಂಚೆ (ಗ್ಯಾನ್ ಪೋಸ್ಟ್) ಸೇವೆಯನ್ನು ಆರಂಭಿಸಲಾಗಿದೆ ಎಂದು ಭಾರತೀಯ ಅಂಚೆ ಇಲಾಖೆಯ ಮೈಸೂರು ವಿಭಾಗ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿರುವ ಅಂಚೆ ಇಲಾಖೆ, ಮೇ 1 ರಿಂದ ಆರಂಭವಾಗಿರುವ ಈ ಸೇವೆಯ ಅಡಿಯಲ್ಲಿ ಪ್ರಕಾಶಕರು, ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು, ಸರ್ಕಾರದ ಸ್ವಾಯತ್ತ ಸಂಸ್ಥೆಗಳು, ಓದುಗರಿಗೆ ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ರವಾನಿಸಬಹುದು.

ಈ ಸೇವೆಯ ಅಡಿಯಲ್ಲಿ ಪುಸ್ತಕಗಳನ್ನು ಕಳುಹಿಸುವವರು ಪಾರ್ಸಲ್ ಮೇಲೆ 'ಜ್ಞಾನ ಅಂಚೆ' ಎಂದು ಬರೆದಿರಬೇಕು. ಯಾವುದೇ ವಾಣಿಜ್ಯ ಉದ್ದೇಶದ ಕರಪತ್ರ ಅಥವಾ ಬರಹದ ಸಂದೇಶ ಪತ್ರಗಳನ್ನು, ಬಿಲ್ ಬುಕ್ಸ್, ಆಹ್ವಾನ ಪತ್ರಿಕೆ, ನಿಯತಕಾಲಿಕೆಗಳನ್ನು ಈ ಸೇವೆಯಲ್ಲಿ ಕಳುಹಿಸಲು ಅವಕಾಶವಿರುವುದಿಲ್ಲ. ಕನಿಷ್ಠ 300 ಗ್ರಾಂನಿಂದ ಗರಿಷ್ಠ 5 ಕೆ.ಜಿವರೆಗೂ ಈ ವ್ಯವಸ್ಥೆಯಲ್ಲಿ ಪುಸಕ್ತಗಳನ್ನು ಕಳುಹಿಸಬಹುದು. ಪುಸ್ತಕಗಳನ್ನು ಕಳುಹಿಸುವವರ ಮತ್ತು ವಿಳಾಸದಾರರ ಸಂಪೂರ್ಣ ಅಂಚೆ ವಿಳಾಸವನ್ನು ದೂರವಾಣಿ ಸಂಖ್ಯೆಯೊಂದಿಗೆ ಕಡ್ಡಾಯವಾಗಿ ನಮೂದಿಸಬೇಕು.

ಶುಲ್ಕದ ವಿವರ: ಶೂನ್ಯದಿಂದ 300 ಗ್ರಾಂವರೆಗೆ 20ರೂ., 301–500 ಗ್ರಾಂವರೆಗೆ 25 ರೂ., 501–1000 ಗ್ರಾಂವರೆಗೆ 35 ರೂ., 1001–2000 ಗ್ರಾಂವರೆಗೆ 50 ರೂ, 2001–3000 ಗ್ರಾಂವರೆಗೆ 65 ರೂ, 3001–4000 ಗ್ರಾಂವರೆಗೆ 80 ತೂ., 4001–5000 ಗ್ರಾಂವರೆಗೆ 100 ರೂ. ಶುಲ್ಕ ವಿಧಿಸಲಾಗಿದೆ.

ಅಂಚೆ ಇಲಾಖೆ ಕಳೆದ ವರ್ಷ 'ಪ್ರಿಂಟೆಡ್ ಬುಕ್' ವ್ಯವಸ್ಥೆಯನ್ನು ರದ್ದುಗೊಳಿಸಿದ ನಂತರ ಪ್ರಕಾಶಕರಿಗೆ ಪುಸ್ತಕಗಳನ್ನು ರವಾನಿಸಲು ತೊಂದರೆಯಾಗಿತ್ತು. ಇದಕ್ಕಾಗಿ ಅನೇಕ ಪ್ರಕಾಶಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಸೇವೆಯಲ್ಲಿ 'ಜ್ಞಾನ ಅಂಚೆ' ಎಂಬ ಶೀರ್ಷಿಕೆಯಡಿ ಹೊಸ ಸೇವೆ ಆರಂಭಿಸಲಾಗಿದೆ.

ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಹೋರಾಟ ಮಾಡಿದವರು ಬಸವಣ್ಣ

ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಪಿ.ದೇವರಾಜು ಚಿಕ್ಕಹಳ್ಳಿ ಅಭಿಮತ



ಹೆಬ್ಬಾಳಿನ ಬಸವ ಮಾರ್ಗ ಫೌಂಡೇಶನ್‌ನಲ್ಲಿ ಶನಿವಾರ ನಡೆದ ಬಸವ ಜಯಂತಿ ಕಾರ್ಯಕ್ರಮವನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಶರಣ ಪಿ.ದೇವರಾಜು ಚಿಕ್ಕಹಳ್ಳಿ ಉದ್ಘಾಟಿಸಿದರು.

ಮೈಸೂರು, ಮೇ 4(ಎಂಟಿವೈ)– ಕುಡಿತದ ಚಟಕ್ಕೆ ದಾಸರಾಗಿರುವ ವ್ಯಸನಿಗಳು ಶರಣರ ಆಶಯದಂತೆ ವ್ಯಸನದಿಂದ ಹೊರಬಂದು ಸಮಾಜ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಪಿ.ದೇವರಾಜು ಚಿಕ್ಕಹಳ್ಳಿ ಸಲಹೆ ನೀಡಿದ್ದಾರೆ.

ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿರುವ ಬಸವಮಾರ್ಗ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವ್ಯಸನಕ್ಕೆ ದಾಸನಾದ ವ್ಯಕ್ತಿಯು ಜೀವನದಲ್ಲಿ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಚಟಕ್ಕೆ ಬಲಿಯಾದವರು ವಿವಿಧ ಸಮಸ್ಯೆಗೆ ಸಿಲುಕಿಕೊಳ್ಳುತ್ತಾರೆ. ಮೌಢ್ಯಕ್ಕೆ ಬಲಿಯಾಗುತ್ತಾರೆ. ಇದರಿಂದ ಹೊರಬರಬೇಕು. ಆ ಮೂಲಕ ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ತಾವೆಲ್ಲರೂ ಕೈ ಜೋಡಿಸಬೇಕು ಎಂದರು.


12ನೇ ಶತಮಾನದಲ್ಲಿ ಕ್ರಾಂತಿಕಾರಿ ಬಸವಣ್ಣ ಅವರು ಹಲವಾರು ಕ್ರಾಂತಿಕಾರಿ ಬದಲಾವಣೆಯನ್ನು ಸಮಾಜದಲ್ಲಿ ಜಾರಿಗೆ ತಂದರು. ಅದರಲ್ಲಿ ವ್ಯಸನಮುಕ್ತ ಕಾರ್ಯಕ್ರಮವೂ ಕೂಡ ಒಂದು. ಆ ಸಮಯದಲ್ಲಿ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ದೊಡ್ಡ ಹೋರಾಟವನ್ನೇ ಮಾಡಿದರು. ಈಗ ಅದೇ ಮಾರ್ಗದಲ್ಲಿ 21ನೇ ಶತಮಾನದಲ್ಲಿ ಎಸ್. ಬಸವಣ್ಣ ಅವರು ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದಾರೆ. ಮೌಢ್ಯದಿಂದ ನಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದೇವೆ. ಇದರಿಂದ ಮನೆಯಲ್ಲಾಗಲಿ, ಸಮಾಜದಲ್ಲಾಗಲಿ ವ್ಯಸನಿಗಳಿಗೆ ಯಾವುದೇ ಬೆಲೆ ಇರುವುದಿಲ್ಲ. ಈ ನಿಟ್ಟಿನಲ್ಲಿ ಮೌಢ್ಯವನ್ನು ತೊರೆದು ಶರಣರ ಆಸ್ಥೆಯಂತೆ ನಾವೆಲ್ಲರು ಸಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು. ಈ ನಿಟ್ಟಿನಲ್ಲಿ ಶರಣರ ವಚನಗಳ ಅಧ್ಯಯನ ಅತಿ ತುರ್ತಾಗಿ ನಡೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಬಸವ ಮಾರ್ಗ ಸಂಸ್ಥೆಯ ಅಧ್ಯಕ್ಷ ಬಸವಣ್ಣ ಮಾತನಾಡಿ, ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರ ಜಗಜ್ಯೋತಿ ಬಸವಣ್ಣ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುತ್ತಿದೆ. ಇದುವರೆಗೂ 10 ಸಾವಿರಕ್ಕೂ ಹೆಚ್ಚು ವ್ಯಸನಿಗಳು ನಮ್ಮ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದು ಹೊರ ಹೋಗಿದ್ದಾರೆ. ಅವರೆಲ್ಲ ಉತ್ತಮ ಜೀವನ ಸಾಗಿಸುತ್ತಿದ್ದಾರೆ. ಸಂಸ್ಥೆಯ ಈ ಯಶಸ್ಸಿನ ಹಿಂದೆ ಇರುವುದು ಶರಣ ಚಿಂತನೆಗಳು. ಅವರ ಆಶಯದ ಅನುಸಾರವಾಗಿ ಇಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಆ ಮೂಲಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಿದೆ ಎಂದರು.

ಬಸವಮಾರ್ಗ ಕೇಂದ್ರದಲ್ಲಿ ಜಾತಿ, ಮತ, ಭೇದವಿಲ್ಲ. ಇಲ್ಲಿಗೆ ಬಂದವರಿಗೆ ನೀವು ಯಾವ ಜಾತಿ, ಧರ್ಮದವರು ಎಂದು ಕೇಳುವುದಿಲ್ಲ. ಜಾತಿ, ಧರ್ಮ ರಹಿತವಾಗಿ ಇಲ್ಲಿ ಸೇವೆ ನೀಡಲಾಗುತ್ತದೆ. 12ನೇ ಶತಮಾನದ ಅನುಭವ ಮಂಟಪದ ಮಾದರಿಯಲ್ಲಿ ಇಲ್ಲಿ ಕಾಯಕ, ದಾಸೋಹ ನಡೆಯುತ್ತದೆ. ವ್ಯಸನಿಗಳನ್ನು ಯಾರೇ ತಿರಸ್ಕರಿಸಿದರೂ ಬಸವಮಾರ್ಗ ತಿರಸ್ಕಾರ ಮಾಡುವುದಿಲ್ಲ. ಅವರಿಗೆಂದೆ ಸಂಸ್ಥೆ ಸದಾ ಬಾಗಿಲು ತೆರೆದಿದೆ. ವ್ಯಸನಿಗೆ ಹೊಸ ಜೀವನ ಕಲ್ಪಿಸಿಕೊಡಲು ನನ್ನ ಉಸಿರು ಇರುವವರೆವಿಗೂ ಸೇವೆ ಮಾಡುತ್ತೇನೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ವ್ಯವಸ್ಥಾಪಕರಾದ ಬಾಲಸುಬ್ರಹ್ಮಣ್ಯಂ, ಆನಂದ್, ಸಂಜಯ್, ಯೋಗ ಶಿಕ್ಷಕ ಎಚ್.ಪಿ.ನವೀನ್ ಕುಮಾರ್, ಸಿಬ್ಬಂದಿ ರಾಘವೇಂದ್ರ, ಮಹೇಶ್, ಪ್ರಶಾಂತ್ ಇತರರು ಇದ್ದರು.

ದೇಶ - ವಿದೇಶ

ಸಿಂಗಾಪುರ ಸಾರ್ವತ್ರಿಕ ಚುನಾವಣೆ: ಪೀಪಲ್ಸ್ ಆಕ್ಷನ್ ಪಾರ್ಟಿಗೆ ಮತ್ತೆ ಅಭೂತಪೂರ್ವ ಗೆಲುವು



ಸಿಂಗಾಪುರ: ಶನಿವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸಿಂಗಾಪುರದ ದೀರ್ಘಕಾಲ ಆಡಳಿತ ನಡೆಸುತ್ತಿದ್ದ ಪೀಪಲ್ಸ್ ಆಕ್ಷನ್ ಪಾರ್ಟಿ ಮತ್ತೊಂದು ಅಭೂತಪೂರ್ವ ಗೆಲುವು ಸಾಧಿಸಿದೆ. ಒಂದು ವರ್ಷದ ಹಿಂದೆ ಅಧಿಕಾರ ವಹಿಸಿಕೊಂಡ ಪ್ರಧಾನಿ ಲಾರೆನ್ಸ್ ವಾಂಗ್ ಅವರಿಗೆ ಬೆಂಬಲ ನೀಡುವ ಮೂಲಕ ತನ್ನ 66 ವರ್ಷಗಳ ಆಡಳಿತವನ್ನು ವಿಸ್ತರಿಸಿದೆ. ಮತ ಎಣಿಕೆ ಮುಗಿದ ನಂತರ ಪಿಎಪಿ 82 ಸಂಸದೀಯ ಸ್ಥಾನಗಳನ್ನು ಗೆದ್ದಿದೆ ಎಂದು ಚುನಾವಣಾ ಆಯೋಗ ಘೋಷಿಸಿತು. ಪಕ್ಷವು ಈ ಹಿಂದೆ ಐದು ಸ್ಥಾನಗಳನ್ನು ಅವಿರೋಧವಾಗಿ ಗೆದ್ದಿತ್ತು. ಒಟ್ಟು 97 ಸ್ಥಾನಗಳಲ್ಲಿ 87 ಸ್ಥಾನಗಳನ್ನು ಗಳಿಸಿತ್ತು. ವಿರೋಧ ಪಕ್ಷ ವರ್ಕರ್ಸ್ ಪಾರ್ಟಿ ತನ್ನ 10 ಸ್ಥಾನಗಳನ್ನು ಉಳಿಸಿಕೊಂಡಿದೆ.

ಪಿಎಪಿಯ ಜನಪ್ರಿಯ ಮತಗಳು ಶೇಕಡಾ 65.6ಕ್ಕೆ ಏರಿತು, ಇದು 2020ರ ಚುನಾವಣೆಯಲ್ಲಿ ದಾಖಲೆಯ ಕನಿಷ್ಠ ಶೇಕಡಾ 61ರಿಂದ ಹೆಚ್ಚಾಗಿದೆ. 1959ರಿಂದ ಸಿಂಗಾಪುರವನ್ನು ಆಳುತ್ತಿದ್ದ ಪಿಎಪಿಯ ಬೆಂಬಲಿಗರು ಕ್ರೀಡಾಂಗಣಗಳಲ್ಲಿ ಜಮಾಯಿಸಿ ಧ್ವಜಗಳನ್ನು ಬೀಸುತ್ತಾ ಸಂಭ್ರಮಿಸಿದರು.

ಕಂದಕಕ್ಕೆ ಉರುಳಿ ಬಿದ್ದ ಸೇನಾ ವಾಹನ; ಸ್ಥಳದಲ್ಲೇ ಮೂವರು ಸೈನಿಕರು ಸಾವು



ರಾಂಬನ್/ಜಮ್ಮು: ಜಮ್ಮು–ಕಾಶ್ಮೀರದ ರಾಂಬನ್ ಜಿಲ್ಲೆಯಲ್ಲಿ ಭಾನುವಾರ ಸೇನಾ ವಾಹನವೊಂದು 700 ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಮೂವರು ಸೇನಾ ಸಿಬ್ಬಂದಿ ಸಾವಿಗೀಡಾಗಿದ್ದಾರೆ ಎಂದು ಸೇನಾ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಜಮ್ಮುವಿನಿಂದ ಶ್ರೀನಗರಕ್ಕೆ ತೆರಳುತ್ತಿದ್ದ ಬೆಂಗಾವಲು ಪಡೆಯ ಭಾಗವಾಗಿದ್ದ ಸೇನಾ ಟ್ರಕ್, ಬ್ಯಾಟರಿ ಚಶ್ಮಾ ಬಳಿ ಬೆಳಗ್ಗೆ 11.30ರ ಸುಮಾರಿಗೆ ಕಂದಕಕ್ಕೆ ಉರುಳಿ ಬಿದ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸೇನೆ, ಪೊಲೀಸರು, ಎಸ್‌ಡಿಆರ್‌ಎಫ್ ಮತ್ತು ಸ್ಥಳೀಯರು ಜಂಟಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದು, ವಾಹನದಲ್ಲಿ ಪ್ರಯಾಣಿಸುತ್ತಿದ್ದ ಮೂವರು ಸೈನಿಕರು ಸ್ಥಳದಲ್ಲೇ ಮೃತಪಟ್ಟಿರುವುದು ಕಂಡುಬಂದಿದೆ ಎಂದರು. ಮೃತರನ್ನು ಅಮಿತ್ ಕುಮಾರ್, ಸುಜೀತ್ ಕುಮಾರ್ ಮತ್ತು ಮನ್ ಬಹದ್ದೂರ್ ಎಂದು ಗುರುತಿಸಲಾಗಿದ್ದು, ಅವರ ಮೃತದೇಹಗಳನ್ನು ಕಂದಕದಿಂದ ಹೊರತೆಗೆಯಲಾಗುತ್ತಿದೆ. ಅಪಘಾತದಿಂದಾಗಿ ವಾಹನವು ನಜ್ಜುಗುಜ್ಜಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಿಒಕೆಯಲ್ಲಿ ಸ್ಥಳೀಯರಿಗೆ ಪಾಕ್ ಸೇನೆಯಿಂದ ಶಸ್ತ್ರಾಸ್ತ್ರ ತರಬೇತಿ



ಇಸ್ಲಾಮಾಬಾದ್: ಪಹಲ್ಗಾಮ್ ದಾಳಿಯ ನಂತರ ಭಾರತೀಯ ಸೇನೆ ಪ್ರತೀಕಾರದ ಎಚ್ಚರಿಕೆ ನೀಡಿದೆ. ಹೀಗಾಗಿ, ಭಾರತ ಯಾವ ಸಮಯದಲ್ಲಿ ಬೇಕಾದರೂ ಯುದ್ಧ ಸಾರಬಹುದು ಎಂಬ ಭೀತಿಯಲ್ಲಿರುವ ಪಾಕಿಸ್ತಾನ ಯುದ್ಧಕ್ಕೆ ಸಜ್ಜಾಗಲು ಪಾಕಿಸ್ತಾನಿ ಸೇನೆ ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ)ದಲ್ಲಿ ಸ್ಥಳೀಯ ನಾಗರಿಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಿದೆ. ಇದರ ವಿಡಿಯೋ ವೈರಲ್ ಆಗಿದೆ. ಪಾಕಿಸ್ತಾನಿ ಸೇನೆಯು ಪಿಒಕೆಯಲ್ಲಿ ತರಬೇತಿ ಶಿಬಿರಗಳನ್ನು ಸ್ಥಾಪಿಸಿದ್ದು, ಅಲ್ಲಿ ಸ್ಥಳೀಯರಿಗೆ ಶಸ್ತ್ರಾಸ್ತ್ರಗಳನ್ನು ನಿರ್ವಹಿಸಲು ತರಬೇತಿ ನೀಡಲಾಗುತ್ತಿದೆ. ಪಾಕಿಸ್ತಾನಿ ಪಡೆಗಳು ಭಾರತದೊಂದಿಗಿನ ಯುದ್ಧದಲ್ಲಿ ಭಾಗವಹಿಸಲು ಹಿಂಜರಿಯುತ್ತಿವೆ ಮತ್ತು ಹಲವಾರು ಸೈನಿಕರು ಪಾಕಿಸ್ತಾನ ಸೇನೆ ತೊರೆದಿದ್ದಾರೆ ಎಂಬ ವರದಿಗಳ ಮಧ್ಯೆ ಈ ವೀಡಿಯೊ ಬಹಿರಂಗ ವಾಗಿದೆ. ಇದೇ ರೀತಿ 1990ರ ದಶಕದಲ್ಲಿ ಪಾಕಿಸ್ತಾನ ಪಿಒಕೆಯಲ್ಲಿ ಸ್ಥಳೀಯ ಯುವಕರನ್ನು ಶಸ್ತ್ರಸಜ್ಜಿತಗೊಳಿಸಿ ತರಬೇತಿ ನೀಡಿ, ಅವರನ್ನು ಭಯೋತ್ಪಾದಕ ಗುಂಪುಗಳಿಗೆ ಸೇರಿಸಿ ಕೊಂಡು ಭಾರತದ ಪ್ರದೇಶಕ್ಕೆ ಕಳುಹಿಸುವ ತಂತ್ರದ ಪುನರಾವರ್ತನೆ ಆಗಬಹುದು ಎಂಬ ಅನುಮಾನ ವ್ಯಕ್ತವಾಗಿದೆ.

ಅಕ್ರಮವಾಗಿ ನೆಲೆಸಿದ್ದ ಆರು ಮಹಿಳೆಯರು ಸೇರಿದಂತೆ 10 ಬಾಂಗ್ಲಾ ಪ್ರಜೆಗಳ ಬಂಧನ

ನವದೆಹಲಿ: ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ 6 ಮಹಿಳೆಯರು ಸೇರಿದಂತೆ ಒಟ್ಟಾರೇ 10 ಬಾಂಗ್ಲಾದೇಶದ ಪ್ರಜೆಗಳನ್ನು ಬಂಧಿಸಲಾಗಿದೆ. ಯಾವುದೇ ದಾಖಲೆಗಳಿಲ್ಲದೆ ದೆಹಲಿಯ ವಿವಿಧ ಭಾಗಗಳಲ್ಲಿ ವಾಸಿಸುತ್ತಿದ್ದ ಆರು ಬಾಂಗ್ಲಾದೇಶಿ ಮಹಿಳೆಯರನ್ನು ಬಂಧಿಸಲಾಗಿದೆ. ಮಂಡವಾಲಿ ಪೊಲೀಸ್ ಠಾಣೆಗೆ ದೊರೆತ ಸುಳಿವಿನ ಮೇರೆಗೆ ಕಾರ್ಯಾಚರಣೆ ನಡೆಸಿ, ಮೊದಲಿಗೆ ಬಾಂಗ್ಲಾದೇಶದ ಮಹಿಳೆಯೊಬ್ಬರನ್ನು ಬಂಧಿಸಲಾಯಿತು. ಆಕೆಯನ್ನು ವಿಚಾರಣೆಗೊಳಪಡಿಸಿದಾಗ ಪಹರ್‌ಗಂಜ್ ಪ್ರದೇಶದಲ್ಲಿ ಇನ್ನೂ 5 ಬಾಂಗ್ಲಾ ಮಹಿಳೆಯರು ಇರುವುದನ್ನು ಬಹಿರಂಗಪಡಿಸಿದರು. ತದನಂತರ ಉಳಿದ ಮಹಿಳೆಯರನ್ನು ವಶಕ್ಕೆ ಪಡೆಯಲಾಯಿತು ಎಂದು ಪೊಲೀಸ್ ಉಪ ಆಯುಕ್ತ (ಪೂರ್ವ) ಅಭಿಷೇಕ್ ಧನಿಯಾ ಮಾಹಿತಿ ನೀಡಿದ್ದಾರೆ. ಮತ್ತೊಂದೆಡೆ ವಾಯುವ್ಯ ದೆಹಲಿಯ ಆಜಾದ್‌ಪುರ ಸಬ್ಜಿ ಮಂಡಿ ಪ್ರದೇಶದಿಂದ ತೃತೀಯಲಿಂಗಿಗಳ ವೇಷದಲ್ಲಿದ್ದ ನಾಲ್ವರು ಅಕ್ರಮ ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ. ಆರೋಪಿಗಳನ್ನು ಬಾಂಗ್ಲಾದೇಶದ ನಾರಾಯಣಗಂಜ್ ನಿವಾಸಿಗಳಾದ ಮೊಹಮ್ಮದ್ ಅರ್ಮಾನ್ (21), ಮೊಹಮ್ಮದ್ ಆರಿಫ್ (26), ಮೊಹಮ್ಮದ್ ಜಾಹಿದ್ (21) ಮತ್ತು ಮೊಹಮ್ಮದ್ ಬಾಬುಲ್ (40) ಎಂದು ಗುರುತಿಸಲಾಗಿದೆ.

ಭಾರತದೊಂದಿಗೆ ಯುದ್ಧ ನಡೆದರೆ, ಇಂಗ್ಲೆಂಡ್‌ಗೆ ಓಡಿ ಹೋಗುತ್ತೇನೆ; ಪಾಕಿಸ್ತಾನಿ ಸಂಸದನ ಹೇಳಿಕೆ



ಕರಾಚಿ: ಪಹಲ್ಗಾಮ್‌ನಲ್ಲಿ ನಡೆದ ಇಸ್ಲಾಮಿಕ್ ಭಯೋತ್ಪಾದಕ ದಾಳಿ ನಂತರ ಭಾರತ–ಪಾಕಿಸ್ತಾನದ ಮಧ್ಯೆ ಯುದ್ಧದ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರತ–ಪಾಕಿಸ್ತಾನ ನಡುವೆ ನಡೆಯುತ್ತಿರುವ ಉದ್ವಿಗ್ನತೆಯ ನಡುವೆ ಪಾಕಿಸ್ತಾನಿ ಸಂಸದ ಶೇರ್ ಅಫ್ಜಲ್ ಖಾನ್ ಮಾರ್ವತ್ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಸಾಕಷ್ಟು ವೈರಲ್ ಆಗುತ್ತಿದೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆದರೆ ನೀವು ಏನು ಮಾಡುತ್ತೀರಿ ಎಂದು ಪತ್ರಕರ್ತರೊಬ್ಬರು ಅವರನ್ನು ಕೇಳಿದ್ದು, ಇದಕ್ಕೆ ಉತ್ತರಿಸಿದ ಪಾಕಿಸ್ತಾನಿ ಸಂಸದ ಶೇರ್ ಅಫ್ಜಲ್ ಖಾನ್ ಮಾರ್ವತ್ ಅವರು, ಯುದ್ಧ ನಡೆದರೆ ನಾನು ಇಂಗ್ಲೆಂಡಿಗೆ ಓಡಿಹೋಗುತ್ತೇನೆ ಎಂದು ಹೇಳಿದರು. ಮಾರ್ವತ್ ಒಂದು ಕಾಲದಲ್ಲಿ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷದ ಪ್ರಮುಖ ಸದಸ್ಯರಾಗಿದ್ದರು.

ಆದರೆ ಕಾಲಾನಂತರದಲ್ಲಿ ಅವರು ಪಕ್ಷವನ್ನು ಟೀಕಿಸಲು ಪ್ರಾರಂಭಿಸಿದರು. ಈ ಹೇಳಿಕೆಗಳಿಂದಾಗಿ ಇಮ್ರಾನ್ ಖಾನ್ ಮಾರ್ವತ್ ಅವರನ್ನು ಪಕ್ಷದ ಹುದ್ದೆಗಳಿಂದ ತೆಗೆದುಹಾಕಿದರು. ಪಾಕಿಸ್ತಾನದ ರಾಜಕೀಯದಲ್ಲಿ ಆಂತರಿಕ ಅಸ್ಥಿರತೆ ಮತ್ತು ದಿಕ್ಕಿಲ್ಲದಿರುವಿಕೆ ಎಷ್ಟರ ಮಟ್ಟಿಗೆ ಇದೆ ಎಂಬುದಕ್ಕೆ ಈ ಘಟನೆ ಒಂದು ಉದಾಹರಣೆಯಾಗಿದೆ.

ಜನಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ರಚಿಸಲು ಆಗ್ರಹ

ಮಡಿಕೇರಿ, ಮೇ 4– ರಾಷ್ಟ್ರೀಯ ಜನಗಣತಿಯ ಸಂದರ್ಭ ಬುಡಕಟ್ಟು ಜನಾಂಗ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದ್ದಾರೆ.



ಎನ್.ಯು.ನಾಚಪ್ಪ

ಕೊಡವ ಯೋಧ ಕುಲಕ್ಕಾಗಿ 'ಸೋಶಿಯಲ್ ಎಂಜಿನಿಯರಿಂಗ್' ಪ್ರಕ್ರಿಯೆಯ ಭಾಗವಾಗಿ ಪ್ರತ್ಯೇಕ 'ಕೋಡ್ ಮತ್ತು ಕಾಲಮ್' ಅನ್ನು ಸೇರಿಸಬೇಕೆಂದು ಒತ್ತಾಯಿಸಿ ಗೃಹಮಂತ್ರಿಗಳು ಹಾಗೂ ಅವರ ಅಧೀನದಲ್ಲಿ ಬರುವ ರಿಜಿಸ್ಟ್ರಾರ್ ಜನರಲ್ ಮತ್ತು ಸೆನ್ಸಸ್ ಕಮಿಷನರ್ ಆಫ್ ಇಂಡಿಯಾ ಇವರಿಗೆ ಸಿಎನ್‌ಸಿ ವತಿಯಿಂದ ಜ್ಞಾಪನಾ ಪತ್ರ ಸಲ್ಲಿಸಲಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಜನಗಣತಿ ಜೊತೆಗೆ ಜಾತಿವಾರು ಜನಗಣತಿ ನಡೆಸುವ ಬಗ್ಗೆ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಸ್ವಾಗತಾರ್ಹವಾಗಿದೆ. ಜನಗಣತಿಯಲ್ಲಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಕೊಡವ ಸಮುದಾಯದ ನಿಖರವಾದ ಪ್ರಾತಿನಿಧ್ಯವನ್ನು ಖಚಿತಪಡಿಸುತ್ತದೆ. 1941ರಿಂದ 2011ರವರೆಗೆ ಕೊಡವರನ್ನು ಆಡಳಿತಾತ್ಮಕ ಉದ್ದೇಶಗಳಿಗಾಗಿ ಸರ್ಕಾರ ಉದ್ದೇಶ ಪೂರ್ವಕವಾಗಿ ಇತರ ಸಮುದಾಯಗಳೊಂದಿಗೆ ವಿಲೀನಗೊಳಿಸಿತು. ಇದು ಕೊಡವ ಸಮುದಾಯದ ಗುರುತು ಮತ್ತು ಅಸ್ತಿತ್ವಕ್ಕೆ ಧಕ್ಕೆಯನ್ನುಂಟುಮಾಡಿತು. ಸರ್ಕಾರಿ ಆಡಳಿತ ಮತ್ತು ಕಲ್ಯಾಣ ರಾಜ್ಯ ಸಿದ್ಧಾಂತದ ಅಡಿಯಲ್ಲಿ ನಮ್ಮ ಭವಿಷ್ಯವು ಕತ್ತಲೆಯಾಯಿತು ಎಂದು ನಾಚಪ್ಪ ವಿಶ್ಲೇಷಿಸಿದ್ದಾರೆ.

ಅಂಬಲದ ಕಂಬ ಕಡಿದ ಅರಣ್ಯ ಇಲಾಖೆ ವಿರುದ್ಧ ಅಸಮಾಧಾನ



ಮಡಿಕೇರಿ,ಮೇ.4– ಪೊನ್ನಂಪೇಟೆ ತಾಲೂಕಿನ ಕೆ.ಬಾಡಗ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಾಳೆಕೊವು ಹಾಡಿಯಲ್ಲಿ ಬೆಟ್ಟಕುರುಬ ಹಾಗೂ ಜೇನು ಕುರುಬ ಸಮುದಾಯದ 25 ಕುಟುಂಬಗಳು ತಮ್ಮ ಸಮುದಾಯಕ್ಕೆ ಸಂಬಂಧಪಟ್ಟ ದೇವರ ಅಂಬಲ ನಿರ್ಮಿಸಿಕೊಳ್ಳುತ್ತಿದ್ದ ಸಂದರ್ಭ ಅರಣ್ಯ ಇಲಾಖೆಯ ಸಿಬ್ಬಂದಿಗಳು ಏಕಾಏಕಿ ದಾಳಿ ನಡೆಸಿ, ಅಂಬಲದ ಕಂಬಗಳನ್ನು ಕಡಿದು ಹಾಕಿದ್ದಾರೆ ಎಂದು ಹಾಡಿ ನಿವಾಸಿಗಳು ಆರೋಪಿಸಿದ್ದಾರೆ.

ನಾಗರಹೊಳೆ ಅದಿವಾಸಿ ಜಮ್ಮ ಪಾಳೆ ಹಕ್ಕು ಸ್ಥಾಪನ ಸಮಿತಿ ಕಾರ್ಯದರ್ಶಿ ಜೆ. ಶಿವು ಮಾತನಾಡಿ, ಜೇನು ಕುರುಬ ಸಮುದಾಯದವರು 12ನೇ ಶತಮಾನದಿಂದ ಕಾಡಿನ ಮೂಲ ನಿವಾಸಿಗಳಾಗಿ ಕಾಡಿನ ಪ್ರಾಣಿ ಪಕ್ಷಿಗಳು ಹಾಗೂ ಕಾಡನ್ನೇ ದೇವರೆಂದು ಪೂಜಿಸುತ್ತಾರೆ. ಪಾರಂಪರಿಕ ಜ್ಞಾನವನ್ನು ಉಳಿಸಿಕೊಳ್ಳಲು ಈ ಅಂಬಲ ಸಹಕಾರಿಯಾಗಿದೆ. ತಾತ್ಕಾಲಿಕವಾದ ಜೋಪಡಿಯನ್ನು ನಿರ್ಮಿಸುವಾಗ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಗಳು ಅರಣ್ಯ ಸಮುದಾಯಗಳ ಪೆಸಾ ಆಕ್ಟ್ ಜಾರಿಯಲ್ಲಿದ್ದರೂ ಸಹ ಜೋಪಡಿಯನ್ನು ನಾಶ ಗೊಳಿಸಿದ್ದಾರೆ ಎಂದು ಆರೋಪಿಸಿದರು. ಶಾಸಕ ಪೊನ್ನಣ್ಣ ಅವರು ಹಾಡಿಗೆ ಭೇಟಿ ನೀಡಿ, ಸಮಸ್ಯೆಯನ್ನು ಬಗೆಹರಿಸಬೇಕು ತಪ್ಪಿದ್ದಲ್ಲಿ ನಾಗರಹೊಳೆ ಗಡಿಭಾಗದಲ್ಲಿರುವ ಮುಖ್ಯ ತಪಾಸಣಾ ಕೇಂದ್ರದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ನಾಗರಹೊಳೆ ಅದಿವಾಸಿ ಜಮ್ಮ ಪಾಳೆ ಹಕ್ಕು ಸ್ಥಾಪನ ಸಮಿತಿ ಅಧ್ಯಕ್ಷ ತಿಮ್ಮ ಜೆ.ಕೆ ಮಾತನಾಡಿ, ಹಿಂದಿನ ಕಾಲದಿಂದಲೂ ಈ ಸಮುದಾಯದವರು ಅಂಬಲವನ್ನು ನಿರ್ಮಿಸುವುದು ನಡೆದುಕೊಂಡು ಬಂದಿರುವ ಪದ್ಧತಿ. ಇಲ್ಲಿ ಸಮುದಾಯ ಬಾಂಧವರ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ನೀಡಲಾಗುತ್ತದೆ. ಈ ರೀತಿಯಾಗಿ ನಿರ್ಮಿಸಿರುವ ಅಂಬಲವನ್ನು ಅರಣ್ಯಾ ಇಲಾಖೆಯ ಅಧಿಕಾರಿಗಳು ನಾಶಪಡಿಸಿ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದರು.

ಕೆ.ಬಾಡಗ ಬಾಳೆಕೊವು ಹಾಡಿ ಬೆಟ್ಟಕುರುಬ ಸಮುದಾಯದ ಅಧ್ಯಕ್ಷ ಕಾಳ ಬಿ.ಸಿ ಮಾತನಾಡಿ, ಅರಣ್ಯ ಇಲಾಖೆಯವರು ಏಕಾಏಕಿ ಯಾವುದೇ ಸೂಚನೆ ನೀಡದೆ, ನೆಟ್ಟಿರುವ ಕಂಬಗಳನ್ನು ಕಡಿದು ನಾಶಪಡಿಸಿದ್ದಾರೆ ಎಂದು ಅಳಲನ್ನು ತೋಡಿಕೊಂಡರು.

ಶ್ರದ್ಧಾಭಕ್ತಿಯಿಂದ ಮುಕ್ತಾಯಗೊಂಡ ಎಡಮ್ಯಾರು ವಾರ್ಷಿಕ ಉತ್ಸವ



ಬೇತು ಗ್ರಾಮದ ಮಕ್ಕಿ ಶ್ರೀ ಶಾಸ್ತಾವು ದೇವರ ವಾರ್ಷಿಕ ಎಡಮ್ಯಾರು ವಾರ್ಷಿಕ ಉತ್ಸವದಲ್ಲಿ ವಿಷ್ಣುಮೂರ್ತಿ ಕೋಲ ಮೇಲೇರಿ (ಕೆಂಡಸೇವೆ).

ನಾಪೋಕ್ಲು,ಮೇ.4–ಸಮೀಪದ ಬೇತು ಗ್ರಾಮದ ಮಕ್ಕಿ ಶ್ರೀ ಶಾಸ್ತಾವು ದೇವರ ವಾರ್ಷಿಕ ಎಡಮ್ಯಾರು ವಾರ್ಷಿಕ ಉತ್ಸವ ಎರಡು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ದೇವಾಲಯದ ಆವರಣದಲ್ಲಿ ನಡೆದ ಎರಡು ಪ್ರಮುಖ ಕೋಲಗಳೊಂದಿಗೆ ಉತ್ಸವ ಸಂಪನ್ನಗೊಂಡಿತು. ಮಕ್ಕಿ ಶಾಸ್ತಾವು ಸನ್ನಿಧಿಯಲ್ಲಿ ಬೆಳಗ್ಗಿನಿಂದಲೇ ವಿವಿಧ ಕೋಲಗಳು ಶಾಸ್ತಾವು ದೇವರಿಗೆ ಸೇವೆ ಸಲ್ಲಿಸಿದವು. ಬೆಳಿಗ್ಗೆ ಅಜ್ಜಪ್ಪ ಕೋಲ ಹಾಗೂ ಮಧ್ಯಾಹ್ನ ವಿಷ್ಣುಮೂರ್ತಿ ಕೋಲ ಮೇಲೇರಿ (ಕೆಂಡಸೇವೆ)ಗಳು ತಮ್ಮ ಸಾಂಪ್ರದಾಯಿಕ ವೇಷಭೂಷಣಗಳೊಂದಿಗೆ ಗಮನ ಸೆಳೆದವು.

ಈ ಸಂದರ್ಭ ಭಕ್ತರು ಅಧಿಕ ಸಂಖ್ಯೆಯಲ್ಲಿ ಉತ್ಸವದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ವೀಕ್ಷಿಸಿದ ಭಕ್ತರಿಂದ ದೇವರಿಗೆ ವಿವಿಧ ರೀತಿಯ ಹರಕೆ, ಕಾಣಿಕೆ ಸಮರ್ಪಿಸಿ ಪ್ರಸಾದ ಸ್ವೀಕರಿಸುವುದರೊಂದಿಗೆ ಕೃತಾರ್ಥಭಾವ ಹೊಂದಿದರು.

ಅಪರಾಹ್ನ ಜರುಗಿದ ವಿಷ್ಣುಮೂರ್ತಿ ಕೋಲವನ್ನು ಭಕ್ತರು ವೀಕ್ಷಿಸಿ ತನ್ಮಯರಾದರು. ಉತ್ಸವದ ಅಂಗವಾಗಿ ಎತ್ತೇರಾಟ ಹಾಗೂ ತಡರಾತ್ರಿಯವರೆಗೆ ದೇವಾಲಯದಲ್ಲಿ ಕೇರಳದ ಚಂಡೆವಾದ್ಯದೊಂದಿಗೆ ದೀಪಾರಾಧನೆ ನಡೆಯಿತು. ಈ ಸಂದರ್ಭ ದೇವಾಲಯದ ಆಡಳಿತ ಮಂಡಳಿ ಪದಾಧಿಕಾರಿಗಳು, ತಕ್ಕ ಮುಖ್ಯಸ್ಥರು ಭಾಗವಹಿಸಿದ್ದರು.

ಜಿಲ್ಲಾ ಉಸ್ತುವಾರಿ ಸಮಿತಿ ಸದಸ್ಯೆಯಾಗಿ ಮನೆಯಪಂಡ ಕಾಂತಿ ಸತೀಶ್



ಮಡಿಕೇರಿ,ಮೇ 4– ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸದಸ್ಯೆಯಾಗಿ ಬಿಜೆಪಿಯ ಹಿರಿಯ ಮುಖಂಡರಾದ ಮನೆಯಪಂಡ ಕಾಂತಿ ಸತೀಶ್ ಆಯ್ಕೆಯಾಗಿದ್ದಾರೆ.

ವೀರಾಜಪೇಟೆಯ ಕಾಂತಿ ಸತೀಶ್ ಕೊಡಗು ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ, ಜಿಲ್ಲಾ ಪಂಚಾಯತ್ ಆರೋಗ್ಯ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಹಾಗೂ ವೀರಾಜಪೇಟೆ ಪಟ್ಟಣ ಪಂಚಾಯತ್ ಅಧ್ಯಕ್ಷರಾಗಿ ಕೂಡ ಕಾಂತಿ ಸತೀಶ್ ಕಾರ್ಯ ನಿರ್ವಹಿಸಿದ್ದಾರೆ. ಇದೀಗ ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷರಾಗಿರುವ ಕೇಂದ್ರ ಸರ್ಕಾರಗಳ ಯೋಜನೆಗಳ ಅನುಷ್ಠಾನ ಸಂಬಂಧಿತ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಸದಸ್ಯೆಯಾಗಿ ನೇಮಕಗೊಂಡಿದ್ದಾರೆ.

ಅಮೃತ್‌ಸರದಲ್ಲಿ ಯೋಗಪಟು ಸಿಂಚನಾ ಪ್ರಶಸ್ತಿ ಸ್ವೀಕಾರ



ಪ್ರಶಸ್ತಿ ಪತ್ರ ಸ್ವೀಕರಿಸಿದ ಸಿಂಚನಾ.

ಮಡಿಕೇರಿ: ಜಿಲ್ಲೆಯ ಮದೆನಾಡಿನ ಯುವ ಯೋಗ ಪ್ರತಿಭೆ ಸಿಂಚನಾ ಯೋಗದಲ್ಲಿ 'ಇಂಟರ್ ನ್ಯಾಷನಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ಮಾಡಿ ಪಂಜಾಬ್‌ನ ಅಮೃತ್‌ಸರದಲ್ಲಿ ಪ್ರಶಸ್ತಿ ಪತ್ರ ಸ್ವೀಕರಿಸಿದರು.

ಅಮೃತ್‌ಸರದ ಗುರುನಾನಕ್ ದೇವ್ ವಿಶ್ವವಿದ್ಯಾನಿಲಯದ ಸಮಾರಂಭದಲ್ಲಿ ಹಿಂದಿ ಸಿನಿಮಾ ನಟಿ ಅನಿತಾ ರಾಜ್ ಹಾಜರಿದ್ದ ಕಾರ್ಯಕ್ರಮದಲ್ಲಿ ಇಂಟರ್ ನ್ಯಾಷನಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ವೆಂಕಟ್ ರಾಜ ಪ್ರಶಸ್ತಿ ಪ್ರದಾನ ಮಾಡಿದರು. ಯೋಗ ಪ್ರದರ್ಶನ ಮೂಲಕ ಸಿಂಚನಾ ಸರ್ವರ ಪ್ರಶಂಸೆಗೆ ಪಾತ್ರರಾದರು.

ಸಿಂಚನಾಳ ಪೋಷಕರಾದ ಕೀರ್ತಿ ಮತ್ತು ರೇಣುಕಾ, ಸೈನಿಕ, ಮಾಜಿ ಅಥ್ಲೆಟಿಕ್ ಆಟಗಾರ ಬಿ.ಸಿ. ತಿಲಕ್ ಹಾಜರಿದ್ದರು.

ಯುವನಿಧಿ ಸ್ವಯಂ ಘೋಷಣೆ ಪತ್ರ ಸಲ್ಲಿಸಲು ಅವಕಾಶ

ಮಡಿಕೇರಿ: ಯುವನಿಧಿ ಯೋಜನೆಯಡಿ ನೋಂದಣಿಯಾಗಿರುವ ಅರ್ಹ ಫಲಾನುಭವಿಗಳಿಗೆ 2024ರ ಜನವರಿಯಿಂದ ನೇರ ನಗದು ವರ್ಗಾವಣೆ ಮಾಡಲಾಗುತ್ತಿದೆ. ಮೇ1 ರಿಂದ 20 ಒಳಗೆ ಯುವನಿಧಿ ಸ್ವಯಂ ಘೋಷಣೆ ಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಈ ಅಭ್ಯರ್ಥಿಗಳು ಇದರ ಸೌಲಭ್ಯವನ್ನು ಪಡೆಯಲು ಮುಂದುವರಿಸಬೇಕಾದಲ್ಲಿ ತಾನು ನಿರುದ್ಯೋಗಿ ವ್ಯಾಸಂಗ ಮುಂದುವರೆಸುತ್ತಿಲ್ಲ ಹಾಗೂ ಸ್ವಯಂ ಉದ್ಯೋಗಿಯಲ್ಲ ಎಂದು ಸ್ವಯಂ ಘೋಷಣೆಯನ್ನು ಮಾಡಬೇಕಾಗಿದೆ. ಸ್ವಯಂ ಘೋಷಣೆ ಸಲ್ಲಿಸಲು ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in ಅಥವಾ ಹತ್ತಿರದ ಗ್ರಾಮ ಒನ್ ಕೇಂದ್ರಕ್ಕೆ ಭೇಟಿ ನೀಡುವಂತೆ ತಿಳಿಸಿದೆ. ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಕಚೇರಿಯನ್ನು ಖುದ್ದಾಗಿ ಅಥವಾ ದೂ.ಸಂ.9449692691 ನ್ನು ಸಂಪರ್ಕಿಸಬಹುದು ಎಂದು ಉದ್ಯೋಗಾಧಿಕಾರಿ ಮಂಜುನಾಥ್ ತಿಳಿಸಿದ್ದಾರೆ.

ಮೇ 9ರಿಂದ ವೀರಾಂಜನೇಯ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ



ವಿರಾಜಪೇಟೆ: ಚತ್ರಕೆರೆ ಬಳಿಯಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಬೆಳ್ಳಿ ಮಹೋತ್ಸವದ ಪ್ರಯುಕ್ತ ಪುನ; ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮೇ9,10 ರಂದು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷ ಮಾಳೇಟಿರ ಸನ್ನಿ ಕಾರ್ಯಪ್ಪ ತಿಳಿಸಿದ್ದಾರೆ.

ಬ್ರಹ್ಮಕಲಶೋತ್ಸವ ಅಂಗವಾಗಿ ಆಡಳಿತ ಮಂಡಳಿ ವತಿಯಿಂದ ದೇವಸ್ಥಾನ ಸಭಾಂಗಣದಲ್ಲಿ ಕರೆದಿದ್ದ ಮಾತನಾಡಿದ ಅವರು ಪುತ್ತೂರು ಮತ್ತು ಸುಬ್ರಮಣ್ಯದಿಂದ ಕಲ್ಪಡ ವೇದಮೂರ್ತಿ ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರವರ ನೇತೃ ತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ಜರುಗಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

9ರಂದು ತೋರಣ ಮುಹೂರ್ತ, ಸಾಮೂಹಿಕ ಪ್ರಾರ್ಥನೆ ಪುಣ್ಯಾಹ, ಋತ್ವೀಕರಣ ವಾಸ್ತು ಪೂಜೆ, ಹೋಮ, ಬಲಿ ರಾಕ್ಷೋಘ್ನ ಹೋಮ ಸುದರ್ಶನ ಹೋಮ, ಬಕುಳ ಶಾಂತಿ ಬಿಂಬ ಶಿದ್ಧಿ ಸೇವಾ ಪೂಜಾ ಕಾರ್ಯ ನಡೆಯಲಿದೆ ಎಂದ ಸನ್ನಿ ಕಾರ್ಯಪ್ಪ ಭಕ್ತರು ತಮ್ಮ ತನು ಮನ ಧನ ಸಹಕಾರ ನೀಡಿ ದೇವರ ಕೃಪೆಗೆ ಪಾತ್ರರಾಗುವಂತೆ ಕೋರಿದರು.

ದೇವಸ್ಥಾನ ಪ್ರಧಾನ ಅರ್ಚಕ ಯು. ಸುಬ್ರಹ್ಮಣ್ಯ ಭಟ್ ಮಾತನಾಡಿ ದೇವಸ್ಥಾನದಲ್ಲಿ ಮೊದಲಿಗೆ ಗಣಪತಿ ಹೋಮ ನಂತರ ಮೇ 10 ರಂದು ಶನಿವಾರ ಮುಂಜಾನೆ 6 ಗಂಟೆಗೆ ಪುಣ್ಯಾಹ ತೆಂಗಿನ ಕಾಯಿ ಗಣ ಹವನ, ನವಗ್ರಹ ಸಾಂತಿ ವಾಯುಸ್ತುತಿ ಹೋಮ, ವಿಷ್ಣು ಹೋಮ, ಪ್ರತಿಷ್ಠಾ ಹೋಮ, ಕಲಶ ಪ್ರತಿಷ್ಟೆ ಪೂಜೆ, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ ಬಳಿಕ ಪ್ರಸಾದ ವಿತರಣೆ ಹಾಗೂ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಆಡಳಿತ ಮಂಡಳಿಯ ಕೆ.ಎಂ.ಶಾಂತ ಕುಮಾರ್, ಕುಪ್ಪಣಮಾಡ ಜೆ.ಬಿದ್ದಪ್ಪ ಪಿ.ಆರ್.ಸುನೀಲ್ ಇತರರಿದ್ದರು.

ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಆದ್ಯತೆ ನೀಡಲಿ: ಎಆರ್‌ಕೆ



ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು.

ಯಳಂದೂರು, ಮೇ 4– ಉಪ್ಪಾರ ಸಮುದಾಯದ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಯತ್ನಿಸಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಕರೆ ನೀಡಿದ್ದಾರೆ.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಎಲ್ಲಿ ಹೋದರೂ ಸವಾಲುಗಳನ್ನು ಸ್ವೀಕರಿಸಲು ಸಿದ್ಧರಾಗಬೇಕಿದೆ. ಶಿಕ್ಷಣದಿಂದ ಎಲ್ಲವನ್ನೂ ಗೆಲ್ಲುವ ಛಲ ಬರುತ್ತದೆ. ಉಪ್ಪಾರ ಸಮುದಾಯ ಶ್ರಮದಾಯಕ ಸಮುದಾಯವಾಗಿದೆ. ಇವರು ಪ್ರಯತ್ನಪಟ್ಟರೆ ಏನು ಬೇಕಾದರೂ ಸಾಧಿಸುತ್ತಾರೆ ಎಂಬುದಕ್ಕೆ ದೊಡ್ಡ ನಿದರ್ಶನ ಭಗೀರಥ ಮಹರ್ಷಿಯಾಗಿದ್ದಾರೆ ಎಂದರು.

ಈ ಸಮುದಾಯದ ಮಕ್ಕಳು ಹೆಚ್ಚು ವಿದ್ಯಾವಂತರಾಗಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕು. ರಾಜಕೀಯವಾಗಿ ನಮ್ಮ ಜಿಲ್ಲೆಯಲ್ಲಿ ಈ ಸಮುದಾಯ ಅನೇಕರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಆರ್ಥಿಕವಾಗಿ ಇವರು ಸಬಲರಾಗಬೇಕು. ಮೌಢ್ಯಗಳಿಂದ ದೂರವಿರಬೇಕೆಂದು ತಿಳಿಸಿದರು.

ಸಂತೆಮರಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರಿಯಾಶಂಕರ್ ಭಗೀರಥರ ವೃತ್ತಾಂತ ಹಾಗೂ ಪೌರಾಣಿಕ ಹಿನ್ನೆಲೆ ಹಾಗೂ ತಮ್ಮ ಸಮುದಾಯದ ಬಗ್ಗೆ ಬೆಳಕು ಚೆಲ್ಲುವ ಮಾತನಾಡಿದರು.

ಅದ್ದೂರಿ ಮೆರವಣಿಗೆ: ಇದಕ್ಕೂ ಮುಂಚೆ ಪಟ್ಟಣದ ಷಡಕ್ಷರ ದೇವರ ಗದ್ದುಗೆಯ ಮುಂಭಾಗದಿಂದ ಸತ್ತಿಗೆ ಸೂರಿಪಾನಿ, ವಿವಿಧ ಕಲಾತಂಡಗಳು ಸೇರಿದಂತೆ ಬೆಳ್ಳಿರಥದಲ್ಲಿ ಮಹರ್ಷಿ ಭಗೀರಥರ ಭಾವಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ಮಾಡಲಾಯಿತು.

ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ಸಾವಿರಾರು ಮಂದಿ ಈ ಮೆರವಣಿಗೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಹೆಚ್ಚು ಕಳೆಕಟ್ಟಿತು. ಇದೇ ಸಂದರ್ಭದಲ್ಲಿ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಉಪ್ಪಾರ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪಪಂ ಅಧ್ಯಕ್ಷೆ ಲಕ್ಷ್ಮಮ್ಮಮಲ್ಲು ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು, ಸದಸ್ಯರಾದ ಸುಶೀಲಾಪ್ರಕಾಶ್, ಮಹೇಶ್, ವೈ.ಜಿ.ರಂಗನಾಥ ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಕಿನಕಹಳ್ಳಿ ಸಿದ್ದ ರಾಜು, ವೈ.ಎಸ್.ನಂಜಶೆಟ್ಟಿ, ಕಂದಹಳ್ಳಿ ನಂಜುಂಡ ಸ್ವಾಮಿ, ವೈ.ಕೆ.ಮೋಳೆ ನಾಗರಾಜು, ಕೆಸ್ತೂರು ನಾಗರಾಜು, ಸುರೇಶ್, ತಹಶೀಲ್ದಾರ್ ಬಸವರಾಜು, ಸಿಪಿಐ ಶ್ರೀಕಾಂತ್ ಮುಖ್ಯಾಧಿಕಾರಿ ಎಂ.ಪಿ. ಮಹೇಶ್‌ಕುಮಾರ್, ಸಿದ್ದಪ್ಪಸ್ವಾಮಿ, ರೇಚಣ್ಣ, ಗ್ರಾಮಗಳ ಯಜಮಾನರು ಹಾಜರಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ



ರೋಟರಿ ಭವನದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ಚಾಮರಾಜನಗರ, ಮೇ 4–ರೋಟರಿ ಸಂಸ್ಥೆ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 275 ಮಂದಿ ತಪಾಸಣೆ ಮಾಡಿಸಿಕೊಂಡರು.

170 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವಾಹನ ವ್ಯವಸ್ಥೆ ಮಾಡಲಾಯಿತು ಇವರೊಂದಿಗೆ 160 ಜನ ಹಳೆಯ ರೋಗಿಗಳನ್ನು ಪರೀಕ್ಷೆ ಮಾಡಲಾಯಿತು.

ಈ ಶಿಬಿರದ ಪ್ರಾಯೋಜಕತ್ವವನ್ನು ಸಂಸ್ಥಾಪಕ ಸದಸ್ಯ ರೊಟೇರಿಯನ್ ಜಿಆರ್ ಅಶ್ವತ್ ನಾರಾಯಣ್ ವಹಿಸಿಕೊಡಿದ್ದರು. ರೋಟರಿ ಸಂಸ್ಥೆಯ ಅಧ್ಯಕ್ಷ ರಾಮಸಮುದ್ರ ನಾಗರಾಜು ಕಾರ್ಯದರ್ಶಿ ಹೆಚ್.ಎಂ. ಗುರುಸ್ವಾಮಿ, ಜಿ.ರ್. ಅಶ್ವಥ್ ನಾರಾಯಣ್, ಕಾಗಲವಾಡಿ ಚಂದ್ರು, ಬಿ.ಕೆ. ಮೋಹನ್, ಶ್ರೀನಿವಾಸ್, ಆಸ್ಪತ್ರೆಯ ಪಿಆರ್‌ಓ ವಿಜಯಕಾಂತ್, ರೋಟರಿ ಪದಾಧಿಕಾರಿಗಳು ಇದ್ದರು.

ಸಮನ್ವಿತಗೆ 597 ಅಂಕ



ಕೊಳ್ಳೇಗಾಲ: ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಎಲ್.ಸಮನ್ವಿತ 597 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಕನ್ನಡ–120, ಇಂಗ್ಲಿಷ್–98, ಹಿಂದಿ–97, ಗಣಿತ–92, ವಿಜ್ಞಾನ–95, ಸಮಾಜ ವಿಜ್ಞಾನ–95 ಅಂಕ ಪಡೆದಿದ್ದಾರೆ. ಸಮನ್ವಿತ ಕೊಳ್ಳೇಗಾಲದ ತಾಲೂಕಿನ ಕುರುಬನಕಟ್ಟೆ ಸಮೀಪವಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ. ಈಕೆ ಸಿದ್ದಯ್ಯನಪುರ ಗ್ರಾಮದ ಲಿಂಗರಾಜು ಹಾಗೂ ನಂದಿನಿ ದಂಪತಿ ಪುತ್ರಿ.

ಪೀಳಿಗೆ ಉಳಿವಿಗಾಗಿ ಗಣತಿಯಲ್ಲಿ ಹೊಲಯ ನಮೂದಿಸಿ



ಒಳ ಮೀಸಲಾತಿ ಕುರಿತು ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು.

ಚಾಮರಾಜನಗರ: ಮುಂದಿನ ಪೀಳಿಗೆಯ ಉಳಿವಿಗಾಗಿ ಹಾಗೂ ನಮ್ಮ ಸಮುದಾಯದವರು ಹೆಮ್ಮೆಯಿಂದ ಹೊಲಯ ಎಂದು ಬರೆಸಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಕರೆ ನೀಡಿದ್ದಾರೆ.

ನಗರದ ಅಂಬೇಡ್ಕರ್ ಭವನದಲ್ಲಿ ಪರಿಶಿಷ್ಟ ಜಾತಿ ಬಲಗೈ ಹೊಲಯ ಛಲವಾದಿ ಒಳ ಮೀಸಲಾತಿ ಜಾಗೃತಿ ಸಮಿತಿಯಿಂದ ನಡೆದ ಒಳ ಮೀಸಲಾತಿ ಕುರಿತು ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾರಾಷ್ಟ್ರದಲ್ಲಿ ಮಹರ್ ಜನಾಂಗದವರಾದ ಅಂಬೇಡ್ಕರ್ ಮಹರ್ ಎಂದು ಬರೆಸಿಕೊಳ್ಳುವ ಮೂಲಕ ಮೀಸಲಾತಿ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಆದೇ ರೀತಿ ಕರ್ನಾಟಕದಲ್ಲಿ ನಾವೆಲ್ಲರು ಹೊಲಯ ಸಮುದಾಯಕ್ಕೆ ಸೇರಿದವರು. ಹೊಲಯ ಎಂದರೆ ಕೆಟ್ಟ ಪದವಲ್ಲ. ಹೊಲವನ್ನು ಹೂಳುವವನು ಹೊಲಯ ಎಂಬರ್ಥವಾಗಿದೆ. ನಾವು ಭೂಮಿ ಉಳುಮೆ ಮಾಡುವ ಮಂದಿಯಾಗಿದ್ದೇವೆ. ಹೀಗಾಗಿ ಈ ಭಾಗದಲ್ಲಿ ಏಕ ಮಾದರಿಯಲ್ಲಿ ಹೊಲಯ ಎಂದು ನಮೂದಿಸುವ ಮೂಲಕ ನಮ್ಮ ಜಾತಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳೋಣ ಎಂದರು.

ರಾಜ್ಯ ಯೋಜನಾ ಇಲಾಖೆಯ ನಿರ್ದೇಶಕ ಡಿ.ಚಂದ್ರಶೇಖರಯ್ಯ ಮಾತನಾಡಿ ಒಳ ಮೀಸಲಾತಿ ನೀಡುವ ಸಂಬಂಧ ಒಳ ಮೀಸಲಾತಿ ನೀಡುವುದಕ್ಕೆ ಸಮುದಾಯದ ವಿರೋಧವಿಲ್ಲ. ಒಳ ಮೀಸಲಾತಿ ನೀಡಲು ನಮ್ಮ ಸಂಪೂರ್ಣ ಬೆಂಬಲ ಇದೆ. ಆದರೆ, ಸದಾಶಿವ ಆಯೋಗದಂತೆ ಮೀಸಲಾತಿ ನೀಡುವುದಕ್ಕೆ ಮಾತ್ರ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು.

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಹೊಲಯ ಸಮುದಾಯಕ್ಕೆ ಸೇರಿರುವ ನಾವೆಲ್ಲರು ಒಗ್ಗಟ್ಟಿನಿಂದ ಹೊಲಯ ಎಂದು ಬರೆಸಿಕೊಳ್ಳೋಣ. ಅದಿ ಕರ್ನಾಟಕ, ಆದಿ ದ್ರಾವಿಡ, ಆದಿ ಅಂಧ್ರ ಇವೆಲ್ಲರೂ ಗುಂಪು ಸೂಚಿಸುವ ಪದವಾಗಿದೆ. ಜಾತಿಯನ್ನು ಸೂಚಿಸುವ ಪದಗಳಾದ ಬಲಗೈ, ಹೊಲಯ, ಛಲವಾದಿ ನಮ್ಮ ಆಯ್ಕೆಯಾಗಲಿ ಎಂದರು.

ದಲಿತ ಮಹಾಸಭಾದ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಸಭೆಯಲ್ಲಿ ಹೊಲಯ ಎಂದು ಬರೆಸುವ ನಿರ್ಣಯ ಮಂಡಿಸುವ ಜೊತೆಗೆ ನಮ್ಮ ಸಮುದಾಯದ ಸಚಿವರ ವಿರುದ್ಧ ಮಾತನಾಡುವ ಮಾದಿಗ ಸಮುದಾಯ ಮುಖಂಡರ ಹೇಳಿಕೆಗೆ ಸಭೆಯಲ್ಲಿ ಖಂಡನೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಮೈಸೂರಿನ ಉರಿಲಿಂಗಪೆದ್ದಿ ಮಠದ ಪೂಜ್ಯ ಜ್ಞಾನ ಪ್ರಕಾಶ್ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ಮಾಜಿ ಶಾಸಕರಾದ ಜಿ.ಎನ್.ನಂಜುಂಡಸ್ವಾಮಿ, ಎಸ್.ಬಾಲರಾಜ್, ಜಿ.ಪಂ. ಮಾಜಿ ಸದಸ್ಯರಾದ ಆರ್. ಬಾಲರಾಜು, ನಾಗರಾಜು ಕಮಾಲ್, ಸಮಿತಿಯ ಸಂಚಾಲಕ ಅಯ್ಯನಪುರ ಶಿವಕುಮಾರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಆರ್. ಮಹದೇವ್, ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ಸೋಮೇಶ್, ನಲ್ಲೂರು ನಾಗಯ್ಯ, ಮೂಡ್ಲಾಕೂಡು ಪ್ರಕಾಶ್, ಸಿದ್ದಯ್ಯನಪುರ ನಾಗರಾಜು, ಗೋವಿಂದರಾಜು, ನಾಗರಾಜು, ನಲ್ಲೂರು ಮಹದೇವಸ್ವಾಮಿ, ಗಡಿಕಟ್ಟೆ ಯಜಮಾನರು ಹಾಗೂ ಗ್ರಾಮದ ಮುಖಂಡರು ಭಾಗಹಿಸಿದ್ದರು.

ಸಮೀಕ್ಷೆ ಮಾಹಿತಿ ನೀಡಲು ಸಹಾಯವಾಣಿ ಕೇಂದ್ರ ಸ್ಥಾಪನೆ

ಚಾಮರಾಜನಗರ: ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆ ಕುರಿತಂತೆ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಅವರ ಏಕ ಸದಸ್ಯ ವಿಚಾರಣಾ ಆಯೋಗವನ್ನು ರಚಿಸಲಾಗಿದ್ದು, ಆಯೋಗದಿಂದ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಸಂಬಂಧ ದತ್ತಾಂಶಗಳನ್ನು ಸಂಗ್ರಹಿಸಲು ಜಿಲ್ಲೆಯಲ್ಲಿ ಸಮೀಕ್ಷೆ ಕಾರ್ಯವನ್ನು ಮೇ 17 ರವರೆಗೆ ನಡೆಸಲಿದ್ದು, ಈ ಸಂಬಂಧ ಅಗತ್ಯ ಮಾಹಿತಿ ನೀಡಲು ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದೆ.

ಶಿವಶರಣರು ಸಮಾಜದ ಒಳಿತಿಗಾಗಿ ಕೆಲಸ ಮಾಡಿದವರು

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬಸವಣ್ಣ ಜಯಂತಿ ಆಚರಣೆ



ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಪುಟ್ಟರಂಗ ಶೆಟ್ಟಿ ಪುಷ್ಪಾರ್ಚನೆ ಸಲ್ಲಿಸಿದರು.

ಚಾಮರಾಜನಗರ: ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಶ್ರಮಿಸಿದ ಮಹಾನ್ ಮಾನವತಾವಾದಿ ಬಸವಣ್ಣ ಎಂದು ಶಾಸಕ ಸಿ.ಪುಟ್ಟರಂಗ ಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಬಸವಣ್ಣನವರ ಕಾಯಕ ತತ್ವ ಇಡೀ ಮನುಕುಲಕ್ಕೆ ಮಾದರಿಯಾಗಿದ್ದು, ಬಸವಣ್ಣನವರ ಆದರ್ಶ, ತತ್ವಗಳನ್ನು ಪಾಲನೆ ಮಾಡಬೇಕು, ನುಡಿದಂತೆ ನಡೆಯಬೇಕೆಂಬ ಆದರ್ಶ ಮಾತು ಸಾರ್ವಕಾಲಿಕವಾದುದು ಎಂದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ ಬಸವಣ್ಣರಂತಹ ಮಹಾನ್ ಶಿವಶರಣರ ಜಯಂತಿ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ. ಶಿವಶರಣರು ಆಸೆಆಮಿಷಕ್ಕೆ ಒಳಗಾಗದೆ ಸಮಾಜದ ಒಳಿತಿಗಾಗಿ ಕೆಲಸ ಮಾಡಿದವರು, ಇಂದು ಮತ ಮಾನ್ಯಗಳಲ್ಲಿ ಅನ್ನ, ಆರೋಗ್ಯ, ಶಿಕ್ಷಣದಂತಹ ತ್ರಿವಿಧ ದಾಸೋಹ ನಡೆಯುತ್ತಿರುವುದು 12ನೇ ಶತಮಾನದಲ್ಲಿ ಬಸವಾದಿಶರಣರು ಹಾಕಿಕೊಟ್ಟ ದಾಸೋಹ ಪರಿಕಲ್ಪನೆಯೇ ಆಗಿದೆ ಎಂದರು.

ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಲತಾ ರಾಜಶೇಖರ ಜತ್ತಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವ್, ಚಿಕ್ಕಮಹಾದೇವ, ನಗರಸಭೆ ಸದಸ್ಯರಾದ ಚಿನ್ನಮ್ಮ, ಸ್ವಾಮಿ, ಚುಡಾ ಸದಸ್ಯರಾದ ಪುಟ್ಟಸ್ವಾಮಿ, ರಾಜು, ಬಿಸಲವಾಡಿ ರವಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ಸದಸ್ಯ ಆಲೂರು ಪ್ರದೀಪ್, ಕುಮಾರ್, ರಮೇಶ್, ಚಂಗುಮಣಿ, ಮಹದೇವಯ್ಯ, ಜಯಸಿಂಹ, ನಾಗಾರ್ಜುನ್, ಎಂ. ನಾಗಬಸವಣ್ಣ, ಪ್ರಸಾದ್, ನಾಗವಳ್ಳಿ ನಾಗಯ್ಯ, ಜಯರಾಜ್ ಹಾಜರಿದ್ದರು.

ಸೋನು ನಿಗಮ್ ದುರ್ವರ್ತನೆಗೆ ಚಲನಚಿತ್ರ ವಾಣಿಜ್ಯ ಮಂಡಳಿಯ ಸದಸ್ಯ ಸಿದ್ದೇಗೌಡ ಖಂಡನೆ


ಸೋನು ನಿಗಮ್


ಸಿದ್ದೇಗೌಡ

ಮೈಸೂರು, ಮೇ 4– ಗಾಯಕ ಸೋನು ನಿಗಮ್ ದುರ್ವರ್ತನೆಯನ್ನು ಚಿತ್ರ ನಿರ್ದೇಶಕ ಹಾಗೂ ಚಲನಚಿತ್ರ ವಾಣಿಜ್ಯ ಮಂಡಳಿಯ ಸದಸ್ಯ ಸಿದ್ದೇಗೌಡ ಬಿಜಿಎಸ್ ತೀವ್ರವಾಗಿ ಖಂಡಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಕನ್ನಡ ಹಾಡಿಗೆ ಒತ್ತಾಯಿಸಿದವರನ್ನು ವ್ಯಂಗ್ಯ ಮಾಡಿದ್ದಲ್ಲದೆ, ಅವರನ್ನು ಪಹಲ್ಗಾಮ್ ಉಗ್ರರಿಗೆ ಹೋಲಿಸುವಂತೆ ಮಾತನಾಡಿದ್ದು ಖಂಡನೀಯ. ಸೋನು ನಿಗಮ್ ಜನಪ್ರಿಯ ಗಾಯಕನಾಗಿದ್ದು ಕನ್ನಡಿಗರಿಂದ. ಸಿನಿಮಾ ಜೊತೆಗೆ ದಸರಾ, ಹಂಪಿ ಉತ್ಸವ, ಜಲಪಾತೋತ್ಸವ ಇನ್ನಿತರ ವಿಶೇಷ ಸಮಾರಂಭಗಳಿಗೆ ಕೇಳಿದಷ್ಟು ಹಣ ನೀಡಿ, ಆಹ್ವಾನಿಸಿದ್ದರಿಂದಲೇ ಆತನಿಗೆ ಅಮಲು ನೆತ್ತಿಗೇರಿದೆ. ಬೇರೆ ಭಾಷೆ ಗಾಯಕರಿಗೆ ಮಣೆ ಹಾಕುವ ಬದಲು ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ನೀಡಿದ್ದರೆ ಈ ರೀತಿಯ ಘಟನೆಗಳು ನಡೆಯುತ್ತಿರಲಿಲ್ಲ. ಮೂರ್ಖನಂತೆ ನಡೆದುಕೊಂಡಿರುವ ಸೋನು ನಿಗಮ್, ಸ್ಟಾರ್ ನಟರ ಚಿತ್ರಗಳಿಗೆ ಹಾಡಿ ಪ್ರಸಿದ್ಧರೆನಿಸಿಕೊಂಡಿದ್ದಾರೆ ಹೊರತು ಅವರ ಗಾಯನದಿಂದಲ್ಲ. ಆತ ಕನ್ನಡದ ಹಾಡುಗಳನ್ನು ಹಣಕ್ಕಾಗಿ ಮಾತ್ರ ಹಾಡುತ್ತಿದ್ದು, ನಮ್ಮ ಭಾಷೆ ಮೇಲೆ ಕಿಂಚಿತ್ತೂ ಪ್ರೀತಿಯಿಲ್ಲ. ಈ ಬಗ್ಗೆ ವಾಣಿಜ್ಯ ಮಂಡಳಿ ಸಭೆಯಲ್ಲಿ ಚರ್ಚಿಸಿ, ಸೋನು ನಿಗಮ್ ಬ್ಯಾನ್ ಮಾಡುವ ಸಂಬಂಧ ಕ್ರಮ ವಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಭಾರತದ ಗಡಿಯಲ್ಲಿ ಬೇಹುಗಾರಿಕೆ: ಬಿಎಸ್ಎಫ್‌ನಿಂದ ಪಾಕಿಸ್ತಾನಿ ರೇಂಜರ್ಸ್ ಯೋಧ ವಶಕ್ಕೆ

ಜೈಪುರ, ಮೇ 4– ಭಾರತದ ಗಡಿಯಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಪಾಕಿಸ್ತಾನಿ ರೇಂಜರ್ಸ್ ಯೋಧನನ್ನು ಭಾರತದ ಗಡಿ ಭದ್ರತಾ ಪಡೆ ಶನಿವಾರ ವಶಕ್ಕೆ ಪಡೆದುಕೊಂಡಿದೆ.

ರಾಜಸ್ಥಾನದ ಶ್ರೀ ಗಂಗಾನಗರದಲ್ಲಿ ಗಡಿ ಭದ್ರತಾ ಪಡೆ (ಬಿಎಸ್ಎಫ್) ಸಿಬ್ಬಂದಿ ಪಾಕಿಸ್ತಾನಿ ರೇಂಜರ್‌ನನ್ನು ಬಂಧಿಸಿದ್ದಾರೆ. ಗಡಿಯೊಳಗೆ ನುಸುಳಲು ಯತ್ನಿಸುತ್ತಿದ್ದಾಗ ಆತನನ್ನು ಬಂಧಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ಭಾರತದ ಗಡಿಯಲ್ಲಿ ಬೇಹುಗಾರಿಕೆ ನಡೆಸುತ್ತಿದ್ದಾಗ ಬಹಾವಲ್ಪುರ್ ವಲಯದಿಂದ ಬಿಎಸ್ಎಫ್ ಪಾಕಿಸ್ತಾನಿ ರೇಂಜರ್‌ನನ್ನು ಬಂಧಿಸಿದ್ದಾಗಿ ವರದಿಯಾಗಿದೆ.

ಬಿಎಸ್ಎಫ್ ಕಾನ್‌ಸ್ಟೆಬಲ್ ಒಂದು ವಾರಕ್ಕೂ ಹೆಚ್ಚು ಕಾಲ ಪಾಕಿಸ್ತಾನದ ವಶದಲ್ಲಿದ್ದು, ಅವರ ಭವಿಷ್ಯ ಇನ್ನೂ ಅನಿಶ್ಚಿತವಾಗಿದೆ. ಭಾರತದಿಂದ ಬಲವಾದ ಪ್ರತಿಭಟನೆಯ ಹೊರತಾಗಿಯೂ ಯೋಧನನ್ನು ಹಸ್ತಾಂತರಿಸಲು ಪಾಕಿಸ್ತಾನ ನಿರಾಕರಿಸಿದೆ. ಈ ನಡುವಲ್ಲೇ ಪಾಕಿಸ್ತಾನಿ ರೇಂಜರ್ಸ್ ಯೋಧನನ್ನು ಬಿಎಸ್ಎಫ್ ಪಡೆ ವಶಕ್ಕೆ ಪಡೆದಿದೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಉಭಯ ದೇಶಗಳ ನಡುವೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ ಉಗ್ರರು ನಡೆಸಿದ್ದ ದಾಳಿಯಲ್ಲಿ 26 ಮಂದಿ ಪ್ರವಾಸಿಗರು ಸಾವನ್ನಪ್ಪಿದ್ದರು.

ಸಿಎನ್ಎಂ ಪಬ್ಲಿಕ್ ಶಾಲೆಗೆ ಶೇ.100ರಷ್ಟು ಫಲಿತಾಂಶ





ಮೈಸೂರು, ಮೇ 4– ಮೈಸೂರು ತಾಲೂಕು, ಜಯಪುರ ಹೋಬಳಿ, ಚಿಕ್ಕನಹಳ್ಳಿ ಗ್ರಾಮದ ಸಿಎನ್ಎಂ ಪಬ್ಲಿಕ್ ಶಾಲೆ, 2024–25ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಸಾಧಿಸಿದೆ.

ಬಿ.ವೈ.ಯೋಗಿತಾನಂದ 606 (ಶೇ.96.96) ಅಂಕ ಪಡೆದು ಶಾಲೆಯ ಟಾಪರ್ ಆಗಿದ್ದು, ಪ್ರೀತಿ ಎಸ್. 585 ಹಾಗೂ ಸ್ನೇಹ ಎಂ. 573 ಅಂಕ ಗಳಿಸಿದ್ದಾರೆ. ಇವರೊಂದಿಗೆ ಐದು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಶಾಲೆಯ ಅಧ್ಯಕ್ಷರಾದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾರ್ಯದರ್ಶಿ ಭರತ್ ಎಂ.ಗೌಡ, ಖಜಾಂಚಿ ಭಾರ್ಗವಿ ಎಂ., ಮುಖ್ಯ ಶಿಕ್ಷಕಿ ಸತ್ಯಶೀಲ ಹಾಗೂ ನಿರ್ದೇಶಕರು ಅಭಿನಂದಿಸಿದ್ದಾರೆ.

ಪೂರ್ವಿಕಾಗೆ 616 ಅಂಕ



ಮೈಸೂರು, ಮೇ 4– ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆ ವಿದ್ಯಾರ್ಥಿನಿ ಪೂರ್ವಿಕಾ ಎಸ್., ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.98.5(616) ಅಂಕ ಗಳಿಸಿ, ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.

ಕನ್ನಡದಲ್ಲಿ 124, ಸಮಾಜ ವಿಜ್ಞಾನದಲ್ಲಿ 100, ಹಿಂದಿ ಹಾಗೂ ವಿಜ್ಞಾನದಲ್ಲಿ 99, ಗಣಿತದಲ್ಲಿ 98 ಹಾಗೂ ಇಂಗ್ಲಿಷ್‌ನಲ್ಲಿ 96 ಅಂಕ ಗಳಿಸಿದ್ದಾಳೆ. ಈಕೆ ಕೆ.ಜಿ.ಕೊಪ್ಪಲಿನ ನಿವಾಸಿ ಶಿವಕುಮಾರ್ ಹಾಗೂ ಪೂರ್ಣಿಮಾ ದಂಪತಿ ಪುತ್ರಿ. ಶಾಲೆಯ ಕಾರ್ಯದರ್ಶಿ ವಾಸುದೇವ್ ಭಟ್ ಅವರು ಪೂರ್ವಿಕಾಳನ್ನು ಅಭಿನಂದಿಸಿದರು.

ಮೈಸೂರಲ್ಲಿ ಜೈ ಭೀಮ್ ಗಾಯನೋತ್ಸವ


ವಿದ್ಯಾರಣ್ಯಪುರಂ ಬುದ್ಧ ಭವನದಲ್ಲಿ ಜೈ ಭೀಮ್ ಗಾಯನೋತ್ಸವ ನಡೆಯಿತು.

ಮೈಸೂರು, ಮೇ 4(ಎಂಕೆ)– ಮೈಸೂರಿನ ವಿದ್ಯಾರಣ್ಯಪುರಂ ಬುದ್ಧ ಭವನದಲ್ಲಿ ಜನಚೈತನ್ಯ ಫೌಂಡೇಷನ್ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಸಾಂಸ್ಕೃತಿಕ ನಾಯಕ ಬಸವೇಶ್ವರರ ಜಯಂತಿ ಅಂಗವಾಗಿ ಜೈ ಭೀಮ್ ಗಾಯನೋತ್ಸವ ನಡೆಯಿತು.

ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ನೇತೃತ್ವದಲ್ಲಿ ಗಾಯಕರಾದ ಜಾಯ್ಸ್ ವೈಶಾಖ್, ಎ.ಎಸ್. ಪೂರ್ಣಿಮಾ, ತೇಜಾವತಿ, ಎಸ್.ಆರ್. ತಿರುಮಲೇಶ್, ಶಿವಕುಮಾರ್, ಚಿತ್ತಾರ ರಮೇಶ್, ಎನ್.ಲೋಕೇಶ್, ಲೀಲಾವತಿ, ಶಾಂತಕುಮಾರಿ, ವಿಜಯ್ ಆನಂದ್, ರಾಜು ಹೊಸಮನೆ, ಶಿವಕುಮಾರ್, ಸಂಜೀವಯ್ಯ, ಧನರಾಜ್, ಗೋವಿಂದರಾಜ್, ಜಿ.ನರಸಿಂಹ, ಸುಧಾಕರ್, ಬಿ. ಇಂಚರಾ ಹತ್ತಾರು ಜೈ ಭೀಮ್ ಗೀತೆಗಳನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಎಲ್ಲಾ ದಾರ್ಶನಿಕರು ಸಮ ಸಮಾಜದ ನಿರ್ಮಾಣ, ಸಾಮರಸ್ಯ, ಶಾಂತಿ–ಸಹಬಾಳ್ವೆಯನ್ನು ಬೋಧಿಸಿದ್ದಾರೆ. ಈ ಮಹನೀಯರ ಸಂದೇಶಗಳು ಇವತ್ತಿಗೂ ಕೂಡ ಪ್ರಸ್ತುತವಾಗಿವೆ. ಬುದ್ಧ ಪ್ರಾರಂಭಿಸಿದ ಸಮಾನತೆಯ ಸಂದೇಶವನ್ನು 12ನೇ ಶತಮಾನದಲ್ಲಿ ಬಸವಣ್ಣ ಮುಂದುವರೆಸಿದರೆ, 20ನೇ ಶತಮಾನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್, ಸಂವಿಧಾನವನ್ನು ರೂಪಿಸುವ ಮೂಲಕ ಪ್ರತಿಯೊಬ್ಬ ಭಾರತೀಯರಿಗೂ ಸಮಾನತೆಯಿಂದ ಬದುಕುವ ಹಕ್ಕನ್ನು ಕಲ್ಪಿಸಿಕೊಟ್ಟರು ಎಂದು ತಿಳಿಸಿಕೊಟ್ಟರು. ಜಿಲ್ಲಾ ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಬಿ.ಎಂ.ಮರಪ್ಪ, ಮುಖಂಡರಾದ ಕೃಷ್ಣಮೂರ್ತಿ, ದೇವಿ ಆನಂದ್, ಪಿ.ಗುರುಸ್ವಾಮಿ, ಸಬಿತಾ, ಶ್ರೀನಿವಾಸ್, ಜಿ. ಪೀಟರ್, ಟಿ.ಚೇತನ್, ಪಿ.ಪ್ರಶಾಂತ್, ಡಿ.ಎಲ್.ವಿಕಾಸ್ ಮತ್ತಿತರರಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಗೆ ಉಡುಗೊರೆ


ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 606(ಶೇ.97) ಅಂಕ ಗಳಿಸಿರುವ ಪ್ರತಿಭಾನ್ವಿತ ವಿದ್ಯಾರ್ಥಿ ಪ್ರಮತ್‌ಗೆ, ಹೆಬ್ಬಸೂರಿನ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಮತಿ ನಾಗಿನಿ ರಾಜೇಂದ್ರ ಅವರು ಉಡುಗೊರೆ ನೀಡಿ, ಅಭಿನಂದಿಸಿದರು. ಈ ವೇಳೆ ವಿದ್ಯಾರ್ಥಿ ಅಜ್ಜಿ ಶ್ರೀಮತಿ ನಾಗರತ್ನ ಹಾಜರಿದ್ದರು.

46 ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ತಿ.ನರಸೀಪುರ, ಕೆ.ಆರ್.ನಗರದಲ್ಲಿ ಭಗೀರಥ ಜಯಂತಿ



ತಿ.ನರಸೀಪುರ ತಾಪಂ ಸಭಾಂಗಣದಲ್ಲಿ ಶ್ರೀಭಗೀರಥ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ/ಕೆ.ಆರ್.ನಗರ, ಮೇ 4– ತಿ.ನರಸೀಪುರ ಹಾಗೂ ಕೆ.ಆರ್.ನಗರದಲ್ಲಿ ಭಾನುವಾರ ಶ್ರೀಭಗೀರಥ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ತಿ.ನರಸೀಪುರ: ಸಾಂಸ್ಕೃತಿಕ ಪರಂಪರೆ ಹೊಂದಿರುವ ಉಪ್ಪಾರ ಸಮುದಾಯ ಸಾಮಾಜಿಕವಾಗಿ ಹಿಂದುಳಿದಿದ್ದು, ಸಮಾಜದಲ್ಲಿ ಪ್ರಗತಿ ಸಾಧಿಸಲು ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಜಾಗೃತರಾಗಿ ಶೈಕ್ಷಣಿಕ ಸವಲತ್ತುಗಳನ್ನು ಪಡೆಯಲು ಹಾಗೂ ರಾಜಕೀಯ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಲು ಸಂಘಟಿತರಾಗಬೇಕು ಎಂದು ವಕೀಲ ಗೌಡಳ್ಳಿ ಮಹೇಶ್ ಸಲಹೆ ನೀಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಭಾನುವಾರ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ಭಗೀರಥ ಉಪ್ಪಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ನಡೆದ ಶ್ರೀ ಭಗೀರಥ ಜಯಂತಿಯಲ್ಲಿ ಮುಖ್ಯ ಭಾಷಣ ಮಾಡಿದ ಅವರು ಶಿಕ್ಷಣಕ್ಕೆ ಆದ್ಯತೆ ನೀಡದಿದ್ದರಿಂದ ಉಪ್ಪಾರರು ಹಿಂದುಳಿದಿದ್ದೇವೆ. ಸಂಘಟಿತರಾಗದೇ ಇರುವುದರಿಂದ ಕಾಂತರಾಜು ಆಯೋಗದ ವರದಿಯಲ್ಲಿ ಜನಸಂಖ್ಯೆಯ ಪ್ರಮಾಣದಲ್ಲಿ ತೀರ ಕೆಳಮಟ್ಟಕ್ಕೆ ಕುಸಿದಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ದೇವಗಂಗೆಯನ್ನು ಧರೆಗಿಳಿಸಿ ದೇಶದ ಸಂಸ್ಕೃತಿಗೆ ಕೊಡುಗೆ ನೀಡಿದ ಭಗೀರಥ ಮಹರ್ಷಿ ಬಗ್ಗೆ ಸ್ಕಂದ ಪುರಾಣದಲ್ಲಿ ಸ್ಪಷ್ಟವಾದ ಉಲ್ಲೇಖವಿದೆ. ರಾಜಮನೆತನದ ಹಿನ್ನೆಲೆ ಇದ್ದರೂ ಸಮುದಾಯದವರ ಬದುಕಿನಲ್ಲಿ ಹಲವು ಸುಧಾರಣೆಗಳು ಆಗಬೇಕಿದೆ. ಶ್ರೀಭಗೀರಥರ ಸ್ಮರಣೆ ಬಳಿಕ ಸಮುದಾಯದ ಜನರು ತಮ್ಮ ಕಟ್ಟುಪಾಡುಗಳಿಗೆ ಬದುಕನ್ನು ಸೀಮಿತಗೊಳಿಸಿಕೊಳ್ಳುತ್ತಿದ್ದಾರೆ. ಆಧುನಿಕ ಸಮಾಜದಲ್ಲಿ ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಮಕ್ಕಳಿಗೆ ಪ್ರತಿಯೊಬ್ಬರು ಕಡ್ಡಾಯವಾಗಿ ಶಿಕ್ಷಣ ನೀಡಬೇಕು ಎಂದು ಕರೆ ನೀಡಿದರು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿ, ಹಿಂದುಳಿದ ವರ್ಗಗಳ ಸಾಮಾಜಿಕ ಅಭಿವೃದ್ಧಿ ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ಉಪ್ಪಾರರು ಸೇರಿದಂತೆ ಕಡಿಮೆ ಸಂಖ್ಯೆಯುಳ್ಳ ಸಮುದಾಯಗಳು ಶಿಕ್ಷಣ ಪಡೆಯಬೇಕು. ಮಹಾತ್ಮರ ಆದರ್ಶಗಳನ್ನು ಅಳವಡಿಸಿಕೊಂಡು ಜೀವನದಲ್ಲಿ ಗುರಿ ಸಾಧಿಸಲು ಭಗೀರಥ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಶ್ರೀಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಪ್ಪಸ್ವಾಮಿ, ಉಪ್ಪಾರ ಮಹಾಸಭಾ ಅಧ್ಯಕ್ಷ ಮಹದೇವಶೆಟ್ಟಿ, ಗೌರವಾಧ್ಯಕ್ಷ ರಾಮಶೆಟ್ಟಿ, ಪ್ರಧಾನ ಕಾರ್ಯದರ್ಶಿ ಶಾಂತರಾಜು, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ವಕೀಲರ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ, ಕೆಪಿಸಿಸಿ ಅಲ್ಪಸಂಖ್ಯಾತರ ಪ್ರಧಾನ ಕಾರ್ಯದರ್ಶಿ ಬಿ.ಮನ್ಸೂರ್ ಅಲಿ, ರಾಜೇಂದ್ರ, ಚಿನ್ನಸ್ವಾಮಿ, ಮಣಿಕಂಠ, ಕೆಮಹದೇವಶೆಟ್ಟಿ, ಗ್ರಾಪಂ ಮಾಜಿ ಉಪಾಧ್ಯಕ್ಷ ರಾಜೇಶ್ ಮೂರ್ತಿ, ಮಾದೇಶ್, ನಾಗಣ್ಣ ಸೋಮಣ್ಣ, ಮರಿಸ್ವಾಮಿ, ಪುಟ್ಟಸ್ವಾಮಿ, ಮಾದೇಶ, ರವೀಶ್, ಸಿದ್ದಶೆಟ್ಟಿ, ಉಮಾಪತಿ, ಬಲ್ಲಶೆಟ್ಟಿ, ಮಹದೇವ ಸೇರಿದಂತೆ ವಿವಿಧ ಗ್ರಾಮಗಳ ಉಪ್ಪಾರ ಯಜಮಾನರು, ಮುಖಂಡರು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಗಂಗೆಯನ್ನು ಧರೆಗೆ ತಂದ ಮಹಾ ಪುರುಷ ಭಗೀರಥ



ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಮೇ 4– ಸೂಕ್ಷ್ಮ ಅತಿ ಸೂಕ್ಷ್ಮ ಸಮಾಜಗಳು ಒಗ್ಗಟ್ಟು ಪ್ರದರ್ಶಿಸಿದಾಗ ಮಾತ್ರ ಪ್ರಗತಿ ಕಾಣಲು ಸಾಧ್ಯ. ಈ ನಿಟ್ಟಿನಲ್ಲಿ ಉಪ್ಪಾರ ಸಮಾಜ ನಡೆದುಕೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಆಡಳಿತಸೌಧದ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ನಡೆದ ಭಗೀರಥ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉಪ್ಪಾರ ಸಮಾಜದವರು ಗ್ರಾಮೀಣ ಮತ್ತು ಪಟ್ಟಣವೆಂದು ವಿಂಗಡಿಸದೆ ಎಲ್ಲರೂ ಒಟ್ಟಾಗಿ ಸಮಾಜ ಸಂಘಟನೆಗೆ ಮುಂದಾಗಬೇಕು ಎಂದರು.

ಮಹನೀಯರ ಜಯಂತಿಗಳನ್ನು ಆಚರಣೆಗೆ ಸೀಮಿತಗೊಳಿಸದೆ ಅವರ ತತ್ವ, ಆದರ್ಶಗಳನ್ನು ಪಾಲಿಸಿದಾಗ ಮಾತ್ರ ಆಚರಣೆಗೆ ಅರ್ಥ ಬರಲಿದ್ದು, ಭಗೀರಥರು ತಮ್ಮ ಸತತ ಪರಿಶ್ರಮದಿಂದ ಗಂಗೆಯನ್ನು ಧರೆಗೆ ತಂದ ಮಹಾನ್ ಪುರುಷ ಎಂದು ಬಣ್ಣಿಸಿದರು.

ಉಪ್ಪಾರ ಸಮುದಾಯ ಭವನಕ್ಕೆ ಈ ಹಿಂದೆ ಸಿದ್ದರಾಮಯ್ಯ ಸಿಎಂ ಆಗಿದ್ದ ವೇಳೆ 25 ಲಕ್ಷ ಅನುದಾನ ಕೊಡಿಸಲಾಗಿದ್ದು, ಅದರ ಜೊತೆಗೆ ತಿಪ್ಪೂರು ಮತ್ತು ಕಾಟ್ನಾಳು ಗ್ರಾಮದಲ್ಲಿಯೂ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ ಎಂದರು.

ತಾಲೂಕು ಆಡಳಿತದಿಂದ ಆಚರಿಸುವ ಎಲ್ಲಾ ಮಹನೀಯರ ಜಯಂತಿಗಳಿಗೆ ಯಾವ ಇಲಾಖೆಯ ಅಧಿಕಾರಿಗಳು ಹಾಜರಾಗಿಲ್ಲ. ಅಂತಹವರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಅವರಿಗೆ ಸೂಚಿಸಿದ ಶಾಸಕರು ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ ಎಂದರು.

ಜಿಜಿ. ಆರ್.ಕೃಷ್ಣಪ್ಪ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಉಪ್ಪಾರ ಸಮಾಜದ ತಾಲೂಕು ಅಧ್ಯಕ್ಷ ಮಹದೇವ್, ತಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಕೇಶವಮೂರ್ತಿ, ರಾಮಕೃಷ್ಣ, ಡಿ.ತಮ್ಮಯ್ಯ, ದಯಾನಂದ, ನಿಂಗರಾಜು, ಯೋಗೇಶ್ ಕುಮಾರ್, ಗೋವಿಂದೇಗೌಡ, ಬಸವೇಗೌಡ, ರವಿ, ಧರ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ನಗರಾಧ್ಯಕ್ಷ ಎಂ.ಜೆ.ರಮೇಶ್, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು ಸೇರಿದಂತೆ ಇನ್ನಿತರರಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಪಿರಿಯಾಪಟ್ಟಣ, ಮೇ 4– ನಮ್ಮ ಸರ್ಕಾರ ಜನಸಾಮಾನ್ಯರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದು, ಗ್ಯಾರಂಟಿ ಯೋಜನೆಗಳ ಮೂಲಕ ಜನಸಾಮಾನ್ಯರನ್ನು ಸದೃಢಗೊಳಿಸುತ್ತಿದೆ ಎಂದು ಸಚಿವ ಕೆ.ವೆಂಕಟೇಶ್ ತಿಳಿಸಿದರು.

ತಾಲೂಕಿನ ರಾಗಿ ಆಲದಮರ, ಹಿಟ್ನೆ ಹೆಬ್ಬಾಗಿಲು, ಪಿರಿಯಾಪಟ್ಟಣ ಟೌನ್ ವ್ಯಾಪ್ತಿಯ ವಿವಿಧ ಕೆರೆಗಳಿಗೆ ತಡೆಗೋಡೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಾಕಷ್ಟು ಅನುದಾನ ತಂದು ತಾಲೂಕಿನ ಅಭಿವೃದ್ಧಿ ಮಾಡುತ್ತಿದ್ದೇನೆ. ವಿಪಕ್ಷಗಳು ಆಗಿಂದಾಗ್ಗೆ ನಮ್ಮ ಸರ್ಕಾರದ ಬಗ್ಗೆ ಟೀಕಾ ಪ್ರಹಾರ ಮಾಡುತ್ತಿದೆ. ಯಾವುದೇ ಕಾರಣಕ್ಕೂ ಅವರ ಮಾತುಗಳಿಗೆ ಮನ್ನಣೆ ನೀಡಿ ಕಿವಿ ಕೊಡಬೇಡಿ. ನಾನು ನುಡಿದಂತೆ ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ನಿಮ್ಮ ಸಹಕಾರ ಇದಕ್ಕೆ ಅಗತ್ಯ ಎಂದರು.

ಈ ವೇಳೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರೆಹಮತ್ ಜಾನ್‌ಬಾಬು, ಡಿ.ಟಿ.ಸ್ವಾಮಿ, ಟೌನ್ ಅಧ್ಯಕ್ಷ ಅಶೋಕ್ ಕುಮಾರ್ ಗೌಡ, ಪುರಸಭಾ ಸದಸ್ಯರಾದ ಮಂಜುಳಾರಾಜ್, ಮಂಜುನಾಥ್, ರವಿ, ಮುಖಂಡರಾದ ಮಲ್ಲಿಕಾರ್ಜುನ್, ಸುರೇಶ, ತಾಪಂ ಇಓ ಸುನೀಲ್ ಕುಮಾರ್, ಎಇಇ ವೆಂಕಟೇಶ್, ದಿನೇಶ್, ಮಲ್ಲಿಕಾರ್ಜುನ, ನವೀನ್, ಕುಮಾರ, ಕೃಷ್ಣಮೂರ್ತಿ, ಪಶುಪಾಲನಾ ಇಲಾಖೆ ಸೋಮಯ್ಯ, ಸಿಪಿಐ ಗೋವಿಂದರಾಜು ಹಾಗೂ ದೀಪಕ್ ಸೇರಿದಂತೆ ಇತರರಿದ್ದರು.

ಜಾತಿವಾರು ಸಮೀಕ್ಷೆ ವೇಳೆ ಮಾದಿಗ ಎಂದು ನಮೂದಿಸಿ

ವಿಧಾನಪರಿಷತ್ ಮಾಜಿ ಸದಸ್ಯ ಧರ್ಮಸೇನಾ ಮನವಿ



ಸುದ್ದಿಗೋಷ್ಠಿಯಲ್ಲಿ ಮಾಜಿ ಎಂಎಲ್‌ಸಿ ಧರ್ಮಸೇನಾ ಮಾತನಾಡಿದರು.

ತಿ.ನರಸೀಪುರ, ಮೇ 4– ನ್ಯಾ.ನಾಗಮೋಹನ್‌ದಾಸ್ ಆಯೋಗದ ಶಿಫಾರಸ್ಸಿನ ಮೇರೆಗೆ ಪ.ಜಾತಿಯ 101 ಸಮುದಾಯಗಳ ಜಾತಿವಾರು ಸಮೀಕ್ಷೆ ನಡೆಸಲಿದ್ದು, ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಜಾತಿಗೆ ಸೇರಿದ ಮಾದಿಗ ಸಮುದಾಯದ ಜನರು ಸಮೀಕ್ಷೆ ವೇಳೆ ಮಾದಿಗ ಎಂದು ನಮೂದು ಮಾಡಬೇಕೆಂದು ವಿಧಾನಪರಿಷತ್ ಮಾಜಿ ಸದಸ್ಯ ಮತ್ತು ಕಾಂಗ್ರೆಸ್ ಎಸ್‌ಸಿ ಘಟಕ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ಮನವಿ ಮಾಡಿದರು.

ಪಟ್ಟಣದ ತಮ್ಮ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿಗಾಗಿ ಮೇ 5ರಿಂದ ಪಜಾತಿಯ 101 ಸಮುದಾಯಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯಲಿದ್ದು, ಮೇ 5ರಿಂದ 17ರವರೆಗೆ ಮನೆ ಮನೆ ಸಮೀಕ್ಷೆ, 19 ರಿಂದ 21ರವರೆಗೆ ಬೂತ್‌ವಾರು ಸಮೀಕ್ಷೆ ನಡೆಸಲಿದ್ದು, 19 ರಿಂದ 23 ರವರೆಗೆ ಆನ್‌ಲೈನ್‌ನಲ್ಲಿ ಜಾತಿ ನಮೂದಿಗೆ ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ ಮಾದಿಗ ಸಮುದಾಯಕ್ಕೆ ಸೇರಿದ ಜನರು 061 ರಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಪ.ಜಾತಿಯ ಎಲ್ಲಾ ಜನರು ತಮ್ಮ ಉಪ ಜಾತಿ ಕಾಲಂನಲ್ಲಿ ತಮ್ಮ ಉಪ ಜಾತಿ ಯನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದರು.

ತಾಲೂಕು ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಹುಣಸೂರು ಪುಟ್ಟಯ್ಯ ಮಾತನಾಡಿ, ತಾಲೂಕಿನ ಮಾದಿಗ ಸಮುದಾಯ ವಾಸಿಸುವ 28 ಗ್ರಾಮಗಳಲ್ಲಿ ಸಮೀಕ್ಷೆ ವೇಳೆ ಪ.ಜಾತಿಯ ಉಪ ಜಾತಿ ಕಾಲಂ ಮಾದಿಗ ಎಂದು ನಮೂದಿಸಬೇಕು. ಸಮೀಕ್ಷೆ ವೇಳೆ ತಾಲೂಕಿನ ಮಾದಿಗ ಸಂಘಟನೆಗಳ ಮುಖ್ಯಸ್ಥರು, ಮಹಿಳಾ ಸಂಘದವರು, ಸಂಘ ಸಂಸ್ಥೆಗಳ ಮುಖಂಡರು ಸಮೀಕ್ಷೆದಾರರಿಗೆ ಸಹಕಾರ ನೀಡುವುದರ ಜೊತೆಗೆ ಜಾತಿ ಜನರಿಗೆ ಜಾಗೃತಿ ಮೂಡಿಸಬೇಕು ಎಂದರು.

ಈ ವೇಳೆ ಕಾಳಯ್ಯ, ವಕೀಲರಾದ ರಂಗನಾಥ್, ಪ್ರಸಾದ್, ಜಯರಾಮು, ಮಹೇಶ್, ಶಿವರಾಜು, ಮಲಿಯೂರು ಶಿವಕುಮಾರ್, ಸಿ.ಮಹದೇವ, ಹುಣಸೂರು ರಾಜಪ್ಪ, ಸಿದ್ದರಾಜು, ಮನುಕುಮಾರ್, ಶ್ರೀಕಾಂತ್ ಇತರರಿದ್ದರು.

ಕೆ.ಎಂ.ಅಭಯಗೌಡಗೆ ಶೇ.98.48%



ತಿ.ನರಸೀಪುರ, ಮೇ 4– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ಲಿಟಲ್ ಫ್ಲವರ್ ಕಾನ್ವೆಂಟ್ ವಿದ್ಯಾರ್ಥಿ ಕೆ.ಎಂ. ಅಭಯ್ ಗೌಡ 603 (ಶೇ.96.48) ಅಂಕ ಪಡೆದಿದ್ದು, ಹಿಂದಿ ಭಾಷೆಯಲ್ಲಿ ನೂರಕ್ಕೆ ನೂರು ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ಹಳೆ ಕೆಂಪಯ್ಯನಹುಂಡಿ ಗ್ರಾಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್ ಮಮತಾ ದಂಪತಿ ಪುತ್ರ.

ನೀಲಕಂಠೇಶ್ವರ ಶಾಲೆಗೆ ಉತ್ತಮ ಫಲಿತಾಂಶ




ರೋಷ್ನಿ | ಯಶವಂತ್ | ಅರುಣ | ಪ್ರಿಯಾ | ಗಾಯತ್ರಿ

ನಂಜನಗೂಡು, ಮೇ 4– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ನೀಲಕಂಠೇಶ್ವರ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಶಾಲೆಯ ಆರ್.ಪಿ.ರೋಷ್ನಿ 608, ಡಿ.ಎಸ್.ಯಶವಂತ್ 587, ಅರುಣ 579, ಎಂ.ಪ್ರಿಯಾ 534, ಎನ್.ಸಹನಾ ಗಾಯತ್ರಿ 533 ಅಂಕಗಳನ್ನು ಗಳಿಸಿದ್ದಾರೆ. ಅಲ್ಲದೇ ಶಾಲೆಯ 8 ವಿದ್ಯಾರ್ಥಿಗಳು ಅತ್ಯುತ್ತಮ, 22 ಪ್ರಥಮ, 9 ಮಂದಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ವಿದ್ಯಾರ್ಥಿಗಳ ಸಾಧನೆಗೆ ಶಾಲೆ ಅಧ್ಯಕ್ಷ ಅರುಣ್ ಕುಮಾರ್, ಕಾರ್ಯದರ್ಶಿ ಕುಮಾರ್ ಮತ್ತು ಆಡಳಿತ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ.

ಹುರ ಸರ್ಕಾರಿ ಪ್ರೌಢಶಾಲೆಗೆ ಶೇ.82ರಷ್ಟು ಫಲಿತಾಂಶ



ಮುಲ್ಲುಂಡಿ, ಮೇ 4– ಇಲ್ಲಿಗೆ ಸಮೀಪದ ಹುರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.82ರಷ್ಟು ಫಲಿತಾಂಶ ಪಡೆದಿದೆ. ವಿದ್ಯಾರ್ಥಿಗಳಾದ ಅಜಂಲಿ(566), ಕುಮಾರಿ(547), ಗುಣಶೀಲ (543) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಮುಖ್ಯ ಶಿಕ್ಷಕ ರಾಜಕುಮಾರ್ ತಿಳಿಸಿದ್ದಾರೆ.

ಇಂದಿನಿಂದ ಗಿರಿಜಾ ಕಲ್ಯಾಣ ಮಹೋತ್ಸವ



ಮೂಗೂರು, ಮೇ 4– ದೇವೇಶ ಗಿರಿ ಎಂದೇ ಪ್ರಸಿದ್ಧಿ ಪಡೆದು ಉದ್ಭವ ಮೂರ್ತಿಯಾಗಿ ನೆಲೆಸಿರುವ ಗ್ರಾಮದ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವ ಮೇ 5 ರಿಂದ 11ರವರೆಗೆ ನಡೆಯಲಿದ್ದು, ಮೇ 8 ರಂದು ಶ್ರೀಪಾರ್ವತಿ ಅಮ್ಮನವರ ಸಮೇತ ಶ್ರೀದೇಶೇಶ್ವರ ಸ್ವಾಮಿಯವರ ಶ್ರೀಮದ್ದಿವ್ಯ ರಥೋತ್ಸವ ಜರುಗಲಿದೆ.

ಗ್ರಾಮದ ಶ್ರೀದೇಶೇಶ್ವರಸ್ವಾಮಿ ಹಾಗೂ ಶ್ರೀಪಾರ್ವತಿ ಅಮ್ಮನವರ ಧಾರ್ಮಿಕ ಆಚರಣೆಗೆ ಸಕಲ ಸಿದ್ಧತೆ ಪೂರ್ಣಗೊಂಡಿದ್ದು, ಪ್ರತಿವರ್ಷ ನಡೆಯುವ ಈ ರಥೋತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಸಿರುವ (ದೇವರ ಒಕ್ಕಲಿನ ಮನೆತನದವರು) ಅಪಾರ ಸಂಖ್ಯೆಯಲ್ಲಿ ರಥೋತ್ಸವಕ್ಕೆ ಆಗಮಿಸುವ ನಿರೀಕ್ಷೆಯಿದೆ. ಪಂಚಲಿಂಗ ಒಳಗೊಂಡಿರುವ ಈ ದೇಗುಲದಲ್ಲಿ ಕತ್ತಲೆ ಮನೆ ಸಿದ್ದೇಶ್ವರ, ಚಂಡಿಕೇಶ್ವರ, ವೀರಾಂಜನೇಯ, ನಾಗರಕಟ್ಟೆ, ಶ್ರೀಶನೇಶ್ಚರ ಸ್ವಾಮಿ ದೇವಾಲಯವಿದ್ದು, ರಥೋತ್ಸವಕ್ಕೂ ಮುನ್ನ ಈ ದೇಗುಲಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿದೆ.

ಮೇ 5ರಂದು ಆಶ್ಲೇಷ ಅಂಕುರಾರ್ಪಣ, ಧ್ವಜಾರೋಹಣ, 6ರಂದು ವೃಷಭ ವಾಹನ ಉತ್ಸವ, 7ರಂದು ಗಿರಿಜಾ ಕಲ್ಯಾಣೋತ್ಸವ, 8 ರಂದು ಶ್ರೀಮದ್ದಿವ್ಯ ಬ್ರಹ್ಮ ರಥೋತ್ಸವ, 9ರಂದು ಶಯನೋತ್ಸವ, 10 ರಂದು ಅವಭೃತ ತೀರ್ಥ ಸ್ನಾನ, 11 ರಂದು ಮಹಾ ರುದ್ರಾಭಿಷೇಕ ಹಾಗೂ ಶ್ರೀ ದೇಶೇಶ್ವರಸ್ವಾಮಿ ಹಾಗೂ ಶ್ರೀ ಪಾರ್ವತಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ, ರಾತ್ರಿ ದೇವಾಲಯದಲ್ಲಿ ಪೂರ್ಣಾಭಿಷೇಕ ಹಾಗೂ ವಿಶೇಷ ಪೂಜೆ ಮಹಾಮಂಗಳಾರತಿಯೊಂದಿಗೆ ಗಿರಿಜಾ ಕಲ್ಯಾಣ ಧಾರ್ಮಿಕ ಆಚರಣೆಯ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಸೂರ್ಯಮಂಡಲ ಉತ್ಸವ



ಹೆಚ್.ಡಿ.ಕೋಟೆಯ ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮೀ ವರದರಾಜಸ್ವಾಮಿ ಅವರ 13ನೇ ಬ್ರಹ್ಮೋತ್ಸವದ ಅಂಗವಾಗಿ ಸೂರ್ಯಮಂಡಲ ವಾಹನದಲ್ಲಿ ಶ್ರೀಸ್ವಾಮಿಯವರ ಉತ್ಸವ ನಡೆಸಲಾಯಿತು. ಈ ವೇಳೆ ಹೆಚ್.ಎನ್.ನಾಗರಾಜಶೆಟ್ಟಿ, ಗುಂಡಣ್ಣ, ಕೆಂಡಗಣ್ಣ, ಶ್ರೀಕಾಂತ್, ರಾಜಣ್ಣ, ಕನ್ನಡ ಪ್ರಮೋದ, ವಿನಯ್, ಶ್ರೀನಿವಾಸ್, ಸುರೇಶ್, ಕೃಷ್ಣಶೆಟ್ಟಿ ಜಯಚಂದ್ರ, ರಾಜ, ಸ್ವಾಮಿ, ಭರತ್ ಇದ್ದರು.

ಮುತ್ತಲವಾಡಿ ಗ್ರಾಪಂಗೆ ನಾಗಮಣಿ ಅಧ್ಯಕ್ಷೆ, ರೇಖಾ ಉಪಾಧ್ಯಕ್ಷೆ



ಗ್ರಾಪಂ ಅಧ್ಯಕ್ಷೆಯಾಗಿ ನಾಗಮಣಿ, ಉಪಾಧ್ಯಕ್ಷೆಯಾಗಿ ರೇಖಾ ಆಯ್ಕೆಯಾದರು.

ತಿ.ನರಸೀಪುರ, ಮೇ 4– ತಾಲೂಕಿನ ಮುತ್ತಲವಾಡಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ನಾಗಮಣಿ ಕೃಷ್ಣ, ಉಪಾಧ್ಯಕ್ಷೆಯಾಗಿ ರೇಖಾ ಅವಿರೋಧವಾಗಿ ಆಯ್ಕೆಯಾದರು.

ನಿಕಟಪೂರ್ವ ಅಧ್ಯಕ್ಷೆ ಪುಷ್ಪ ಹಾಗೂ ಉಪಾಧ್ಯಕ್ಷ ಕೆ.ಎನ್.ಅಶೋಕ್ 20 ತಿಂಗಳ ಅಧಿಕಾರಾವಧಿ ಪೂರೈಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಪ.ಜಾತಿ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಾಗಮಣಿ ಕೃಷ್ಣ ಹಾಗೂ ಸಾಮಾನ್ಯ ವರ್ಗಕ್ಕೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ ರೇಖಾ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜಿಪಂ ತಾಂತ್ರಿಕ ಉಪ ವಿಭಾಗದ ಎಇಇ ಪಿ.ಎನ್.ಚರಿತ ಪ್ರಕಟಿಸಿದರು.

ಪಿಎಸಿಎಸ್ ಅಧ್ಯಕ್ಷ ಮುಸುವಿನಕೊಪ್ಪಲು ಶಿವರಾಮು ಮಾತನಾಡಿ, ಗ್ರಾಪಂನಲ್ಲಿ ಅವಿರೋಧ ಆಯ್ಕೆ ಮೂಲಕ ಸಾಮಾಜಿಕ ನ್ಯಾಯ ದೊರಕಿಸಿಕೊಡಲಾಗಿದೆ. ಕಳೆದ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಈ ಭಾಗದಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದೇವೆ. ಮುಂದೆಯೂ ಇದೇ ರೀತಿಯ ಬೆಂಬಲ ಮುಂದುವರೆಯಲಿದೆ ಎಂದರು.

ಮತ್ತೊಬ್ಬ ಮಾಜಿ ಅಧ್ಯಕ್ಷ ಕೆ.ಎಂ.ರಮೇಶ್ ಮಾತನಾಡಿ, ನೂತನ ಅಧ್ಯಕ್ಷರು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರ ಸಂಪರ್ಕ ಸಾಧಿಸಿ ಹೆಚ್ಚಿನ ಅನುದಾನ ತರುವ ಮೂಲಕ ಗ್ರಾಪಂ ಅನ್ನು ಮಾದರಿ ಮಾಡುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯ ಪ್ರವೃತ್ತರಾಗಬೇಕಿದೆ ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷೆ ನಾಗಮಣಿ ಮಾತನಾಡಿ, ಗ್ರಾಪಂನ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು, ಬೀದಿ ದೀಪ, ರಸ್ತೆ ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗುವುದು. ಜೊತೆಗೆ ಹೆಚ್ಚು ಅನುದಾನಕ್ಕೆ ಸಚಿವರು ಮತ್ತು ಸಂಸದರಿಗೆ ಬೇಡಿಕೆ ಸಲ್ಲಿಸಲಾಗುತ್ತದೆ ಎಂದರು.

ಈ ವೇಳೆ ಸದಸ್ಯರಾದ ಪುಷ್ಪ, ಕೆ.ಎನ್.ಅಶೋಕ್, ಶಿವಸ್ವಾಮಿ, ನಾಗರ ತ್ನಮ್ಮ, ಪಿ.ಮಹದೇವಯ್ಯ, ಸಿದ್ದಮ್ಮ, ಎಂ.ನಾಗೇಶ್, ಆರ್.ಸರಸ್ವತಿ, ಹೆಚ್.ಎಂ.ಮಹಾಲಿಂಗಸ್ವಾಮಿ, ಮಂಗಳಮ್ಮ, ಮಂಜುಳ, ಪ್ರಕಾಶ್, ಎಸ್.ಸಿದ್ದರಾಜು ಸೇರಿದಂತೆ ಪಿಡಿಓ ನಿರ್ಮಲ, ಮುಖಂಡರಾದ ಎಸ್.ಮಹೇಶ, ಬೀರೇಶ, ಮಹದೇವಯ್ಯ, ಗಿರಿಯಪ್ಪ, ಸಿದ್ದರಾಜು, ಪುಟ್ಟಸ್ವಾಮಿ, ಮಹೇಶ, ಶಿವಮೂರ್ತಿ ಇತರರಿದ್ದರು.

ವಿಜೃಂಭಣೆಯ ಗಂಗಾಪರಮೇಶ್ವರಿ ಪೂಜಾ ಮಹೋತ್ಸವ



ಗಂಗಾ ಪರಮೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ನಡೆಯಿತು.


ನಂಜನಗೂಡು, ಮೇ 4– ನಗರದ ಚಾಮಲಾಪುರ ಬೀದಿಯಲ್ಲಿ ಗಂಗಾ ಪರಮೇಶ್ವರಿ ಅಮ್ಮನವರ 51ನೇ ವರ್ಷದ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಮೊದಲಿಗೆ ಶ್ರೀಕಂಠೇಶ್ವರ ದೇವಾಲಯದ ಕಪಿಲಾ ನದಿ ಸ್ನಾನಘಟ್ಟದ ಬಳಿಯಿಂದ ಪೂರ್ಣಕುಂಭ ಕಳಸ ಹೊತ್ತ ಸಾವಿರಾರು ಮಹಿಳೆಯರ ಜೊತೆಗೂಡಿ ಪರಮ ರಾಮರೂಢ ಸ್ವಾಮೀಜಿ ಅವರನ್ನು ಬೆಳ್ಳಿರಥದ ಸಾರೋಟ್‌ನಲ್ಲಿ ಮಂಗಳವಾದ್ಯಗಳೊಡನೆ ಮೆರವಣಿಗೆ ಮಾಡುವ ಮೂಲಕ ಗಂಗಾ ಮಾತೆಯನ್ನು ಕರೆತರಲಾಯಿತು. ನಂತರ ಚಾಮಲಾಪುರ ಬೀದಿ ದೇವಾಲಯದಲ್ಲಿ ಗಂಗಾಮಾತೆಗೆ ಅಭಿಷೇಕ ಸಲ್ಲಿಸಲಾಯಿತು.

ಪರಮ ರಾಮರೂಢ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಉತ್ತಮ ಮಳೆ, ಬೆಳೆಯಾಗಿ ಜನರು ಸುಭಿಕ್ಷೆಯಿಂದ ಬಾಳ್ವೆ ಮಾಡುವಂತಾಗಲಿ ಎಂದು ಗಂಗಾಮಾತೆಯನ್ನು ಪೂಜಿಸುವ ಇಂತಹ ಸಂಸ್ಕೃತಿಯನ್ನು ಕಳೆದ ಹಲವು ವರ್ಷಗಳಿಂದ ನಗರದ ಚಾಮಲಾಪುರ ಬೀದಿ ನಿವಾಸಿಗಳು ನಡೆಸಿಕೊಂಡು ಬರುತ್ತಿದ್ದಾರೆ. ನಮ್ಮ ಧಾರ್ಮಿಕ ಸಂಸ್ಕೃತಿ, ಪರಂಪರೆ, ನಮ್ಮ ಮುಂದಿನ ಪೀಳಿಗೆಗೆ ತಲುಪುವಂತಾಗಬೇಕು ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಗಂಗಾ ಪರಮೇಶ್ವರಿ ಅಮ್ಮನವರ ಪೂಜೆ ಮಹೋತ್ಸವದ ಅಂಗವಾಗಿ ಸೋಮವಾರ 2 ಸಾವಿರ ಜನರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದರು. ಈ ವೇಳೆ ನಗರಸಭಾ ಸದಸ್ಯರಾದ ಮಹದೇವ ಪ್ರಸಾದ್, ಗಾಯತ್ರಿ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ರವಿಕುಮಾರ್, ಮುಖಂಡರಾದ ಗೋವಿಂದರಾಜು, ಗಜೇಂದ್ರ, ರವಿ, ಗೋಪಾಲ್ ಸೇರಿದಂತೆ ಹಲವರಿದ್ದರು.

ಹುಣಸೂರು ನ್ಯಾಯಾಲಯದಲ್ಲಿ ಅಂಬೇಡ್ಕರ್ ಜಯಂತಿ



ನ್ಯಾಯಾಲಯದ ಆವರಣದಲ್ಲಿ ಅಂಬೇಡ್ಕರ್ ಜಯಂತಿ ನಡೆಯಿತು.

ಹುಣಸೂರು, ಮೇ 4– ಡಾ.ಬಿ.ಆರ್.ಅಂಬೇಡ್ಕರ್ ಭಾರತಕ್ಕೆ ಬೃಹತ್ ಸಂವಿಧಾನ ನೀಡಿದ್ದಾರೆ ಎಂದು 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಗೋವಿಂದಯ್ಯ ತಿಳಿಸಿದರು.

ನಗರದ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದಿಂದ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಅಂಬೇಡ್ಕರ್ ಹೆಸರು ಕೇಳಿದಾಕ್ಷಣ ನಮಗೆ ಮೊದಲು ನೆನಪಾಗುವುದೇ ಸಂವಿಧಾನ. ಅವರು ಆರ್ಥಿಕ ಚಿಂತಕರೂ ಆಗಿದ್ದರು ಎನ್ನುವುದು ಹಲವರಿಗೆ ತಿಳಿದಿರದ ವಿಚಾರ. ಆ ಕಾಲಘಟ್ಟದಲ್ಲಿ ಹಣಕಾಸು, ಉದ್ಯಮದ ಸ್ಥಿತಿಗತಿ ಬಗ್ಗೆ ಅಂಬೇಡ್ಕರ್ ತೆರೆದಿಟ್ಟ ಒಂದೊಂದು ವಿಚಾರವೂ ಇಂದಿಗೂ ಪ್ರಸ್ತುತ. ರೂಪಾಯಿ ಸಮಸ್ಯೆಗಳಿಗೆ ಅಂದೇ ಪರಿಹಾರ ಸೂಚಿಸಿದ್ದರು ಎಂದರು.


ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ಮತ್ತು ಪ್ರಥಮ ದರ್ಜೆ ದಂಡಾಧಿಕಾರಿ ಜೈಬುನಿಸ್ಸಾ ಮಾತನಾಡಿ, ಸಮಾಜದ ಎಲ್ಲಾ ವರ್ಗದ ಜನರನ್ನು ಗಮನದಲ್ಲಿಟ್ಟುಕೊಂಡು ಸರ್ವರ ಏಳ್ಗೆಗೆ ಶ್ರಮಿಸಿ, ಸಮಾನತೆಗಾಗಿ ಹೋರಾಡಿ ನಮ್ಮ ದೇಶದ ಸಂವಿಧಾನ ರಚಿಸಿದ್ದು ಅವರ ಮಹಾನ್ ಸಾಧನೆ. ಇದು ನಾವೆಲ್ಲರೂ ಹೆಮ್ಮೆ ಪಡುವ ವಿಷಯವಾಗಿದೆ. ಅವರೊಬ್ಬ ಅಸಾಮಾನ್ಯ ವ್ಯಕ್ತಿಯಾಗಿದ್ದರು. ಅಂಬೇಡ್ಕರ್ ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಅನಿತಾ ಮಾತನಾಡಿ, ಅಂಬೇಡ್ಕರ್ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿದ ಮಹಾ ಮಾನವತಾವಾದಿ. ಪುರುಷ ಪ್ರಧಾನ ಸಮಾಜದಲ್ಲಿ ಮಾನವಿಯತೆ ನೆಲ ಕಚ್ಚಿದಾಗ ಮಹಿಳೆಯರ ಹಕ್ಕುಗಳಿಗಾಗಿ ಅಂಬೇಡ್ಕರ್ ಹೋರಾಡಿ ಮಾನ ವೀಯ ಮೌಲ್ಯಗಳ ಪುನಶ್ಚೇತನ ನೀಡಿ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸಿದರು ಎಂದರು.

ಸಂಘದ ಅಧ್ಯಕ್ಷ ಎಸ್.ಶಿವಣ್ಣೇಗೌಡ ಮಾತನಾಡಿದರು. 3 ವರ್ಷಗಳ ಕಾಲ ಸೇವೆ ಸಲ್ಲಿಸಿ ಹುಣಸೂರಿನಿಂದ ಬೇರೆಡೆಗೆ ವರ್ಗಾವಣೆಗೊಂಡ ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ಪ್ರಥಮ ದರ್ಜೆ ದಂಡಾಧಿಕಾರಿ ಜೈಬುನಿಸ್ಸಾ, ಪ್ರಧಾನ ಸಿವಿಲ್ ನ್ಯಾಯಧೀಶರಾದ ಪೂಜಾ ಬೆಳಕೆರೆ ಅವರನ್ನು ವಕೀಲರ ಸಂಘದಿಂದ ಗೌರವಿಸಲಾಯಿತು.

ಕಾರ್ಯದರ್ಶಿ ಹೆಚ್.ಜೆ.ಸಂದೀಪ್, ಖಜಾಂಚಿ ಬಿ.ಎಂ.ತಾಂಡವಮೂರ್ತಿ, ಸಹ ಕಾರ್ಯದರ್ಶಿ ಬಿ.ಪಿ.ಪರಮೇಶ್, ಮಹಿಳಾ ಸಹ ಕಾರ್ಯದರ್ಶಿ ನೇತ್ರಾವತಿ, ನಿರ್ದೇಶಕರಾದ ಚಂದ್ರಶೇಖರ, ಶ್ರೀಧರ್, ಶಂಕರೇಗೌಡ, ಹಿರಿಯ ವಕೀಲರಾದ ಶ್ರೀನಿವಾಸಮೂರ್ತಿ, ಪುಟ್ಟರಾಜು, ಡಿ.ಅನಂತ ಕುಮಾರ್, ಡಿ.ಪಿ.ಮಹದೇವ್, ವಿ.ಜಿ.ಮುರುಳೀಧರ, ಯೋಗಣ್ಣೇಗೌಡ, ಟಿ.ಶ್ರೀನಿವಾಸ್, ವೆಂಕಟೇಶ್ ಎಂ.ಎನ್.ರಾಘವೇಂದ್ರ, ಮಂಜುನಾಥ, ಎಂ.ಆರ್. ಹರೀಶ್, ಲಕ್ಷ್ಮೀಕಾಂತ್, ಗಿರಿಜಾ, ಪವಿತ್ರ, ಮಾನಸ, ರಜಿನಿ, ನವೀನ್, ಇಂದ್ರೇಶ್, ವೆಂಕಟೇಶ್ ಸೇರಿದಂತೆ ಇತರರಿದ್ದರು.

ಕೋಟೆಯಲ್ಲಿ ಕಾರ್ಮಿಕರ ದಿನಾಚರಣೆ



ಹೆಚ್.ಡಿ.ಕೋಟೆ ತಾಲೂಕು ಟೈಲರಿಂಗ್ ಕಾರ್ಮಿಕರ ಅಭಿವೃದ್ಧಿ ಟ್ರಸ್ಟ್‌ನಿಂದ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಟೈಲರಿಂಗ್ ಕಾರ್ಮಿಕರ ನೆರವು ನಿಧಿ ಬಾಂಡ್‌ಗಳನ್ನು ಟ್ರಸ್ಟ್ ಅಧ್ಯಕ್ಷ ರಂಗಸ್ವಾಮಿ ವಿತರಿಸಿ, ಹಿರಿಯ ಟೈಲರ್‌ಗಳನ್ನು ಸನ್ಮಾನಿಸಿದರು. ಟ್ರಸ್ಟ್ ಗೌರವಾಧ್ಯಕ್ಷ ಜಗದೀಶ್, ಕಾರ್ಯದರ್ಶಿ ಸದಾಶಿವಮೂರ್ತಿ, ಖಜಾಂಚಿ ಪುಟ್ಟಮಾದು, ಟೇಲರ್‌ಗಳಾದ ಪಾರ್ಥಸಾರಥಿ, ಮಣಿ, ಶಂಕರ, ಇನಾಯತ್, ರಮೇಶ್, ಸ್ವಾಮಿ, ರಾವ್, ಮಲ್ಲೇಶ, ಶೆಟ್ಟಿ, ಕುಮಾರ್ ಇನ್ನಿತರರಿದ್ದರು.

ಪಾರ್ವತಮ್ಮ ನಿಧನ



ಬೆಟ್ಟದಪುರ, ಮೇ 4– ಗ್ರಾಮದ ನಿವಾಸಿ ಪಾರ್ವತಮ್ಮ (80) ಭಾನುವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ



ಐಪಿಎಲ್ ಹಂಗಾಮ

ರಿಯಾನ್ ಪರಾಗ್ ಹೋರಾಟ ವ್ಯರ್ಥ

ಆರ್‌ಆರ್ ವಿರುದ್ಧ ಕೆಕೆಆರ್‌ಗೆ 1 ರನ್ ಅಂತರದ ರೋಚಕ ಜಯ



ಕೋಲ್ಕತ್ತ, ಮೇ 4– ರಿಯಾನ್ ಪರಾಗ್, ಆಂಡ್ರೆ ರಸೆಲ್ ಬ್ಯಾಟಿಂಗ್ ಅಬ್ಬರದ ಜಿದ್ದಾಜಿದ್ದಿನ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ 1 ರನ್ ಅಂತರದ ರೋಚಕ ಜಯ ಸಾಧಿಸಿತು.

ಇಲ್ಲಿನ ಈಡನ್ ಗಾರ್ಡನ್‌ನಲ್ಲಿ ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತ ನೈಟ್ ರೈಡರ್ಸ್, ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿತು. ಆಂಡ್ರೆ ರಸೆಲ್ ಅಜೇಯ (57 ರನ್)ಅರ್ಧಶತಕ ಬಾರಿಸಿದರೆ, ಅಂಗ್‌ಕ್ರಿಶ್ ರಘುವಂಶಿ 44 ರನ್, ಅಂಜಿಕ್ಯಾ ರಹಾನೆ 30 ರನ್, ರಹಮಾನುಲ್ಲಾ ಗುರ್ಬಾಜ್ 35 ರನ್ ಕೊಡುಗೆ ನೀಡಿದರು.

207 ರನ್ ಗುರಿ ಬೆನ್ನತ್ತಿದ್ದ ರಾಜಸ್ಥಾನ ರಾಯಲ್ಸ್ ಗೆಲುವಿಗಾಗಿ ವಿರೋಚಿತ ಹೋರಾಟವನ್ನೇ ನಡೆಸಿತು. ನಾಯಕ ರಿಯಾನ್ ಪರಾಗ್ 45 ಎಸೆತಗಳಲ್ಲಿ 6 ಬೌಂಡರಿ, 8 ಭರ್ಜರಿ ಸಿಕ್ಸರ್ ಸಹಿತ 95 ರನ್ ಗಳಿಸಿ, ತಂಡವನ್ನು ಗೆಲುವಿನ ಸನಿಹಕ್ಕೆ ತಂದಿದ್ದರು. ಆದರೆ ಹರ್ಷಿತ್ ರಾಣಾ ಎಸೆದ 18 ಓವರ್‌ನಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ವೈಭವ್ ಅರೋರಾಗೆ ಕ್ಯಾಚ್ ಕೊಟ್ಟು ಅಭಿಮಾನಿಗಳಿಗೆ ನಿರಾಶೆ ಉಂಟುಮಾಡಿದರು.

ನಂತರ ಬಂದ ಶಿಮ್ರಾನ್ ಹೆಟ್ಮೆಯರ್ 29 ರನ್, ಶುಭಂ ದುಬೆ ಅಜೇಯ 25 ರನ್ ಮತ್ತು ಜೋಫ್ರಾ ಆರ್ಚರ್ 12 ರನ್ ಸಿಡಿಸಿ ಗೆಲುವಿನ ಹೋರಾಟ ನಡೆಸಿದರಾದರೂ ಕೊನೆಯ ಎಸೆತಕ್ಕೆ 3 ರನ್ ಬೇಕಿದ್ದ ವೇಳೆ ಜೋಫ್ರಾ ಆರ್ಚರ್ ರನ್ ಔಟ್ ಆಗುವ ಮೂಲಕ ಜಯದ ಹಂಚಿನಲ್ಲಿ ಎಡವಿದರು. ಅಂತಿಮವಾಗಿ ರಾಜಸ್ಥಾನ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿ, 1 ರನ್‌ಗಳ ವಿರೋಚಿತ ಸೋಲನ್ನೊಪ್ಪಿಕೊಂಡಿತು. ರೋಚಕ ಗೆಲುವಿನೊಂದಿಗೆ ಕೋಲ್ಕತ್ತ ನೈಟ್ ರೈಡರ್ಸ್ ಪ್ಲೇ ಆಫ್ ಕನಸನ್ನು ಜೀವಂತವಾಗಿಟ್ಟುಕೊಂಡಿದೆ. ಕೆಕೆಆರ್ ಪರ ಮೊಯಿನ್ ಅಲಿ, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ ತಲಾ 2 ವಿಕೆಟ್ ಪಡೆದರು. ಅಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿದ ಆಂಡ್ರೆ ರಸೆಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಒಂದೇ ಓವರ್‌ನಲ್ಲಿ 5 ಸಿಕ್ಸ್: ರಾಜಸ್ಥಾನ ರಾಯಲ್ಸ್ ನಾಯಕ ರಿಯಾನ್ ಪರಾಗ್, ಅನುಭವಿ ಸ್ಪಿನ್ನರ್ ಮೋಯಿನ್ ಅಲಿ ಹಾಕಿದ 13ನೇ ಓವರ್‌ನಲ್ಲಿ ಐದು ಸಿಕ್ಸರ್‌ಗಳನ್ನು ಹೊಡೆದರು. ಈ ಓವರ್‌ನ ಮೊದಲ ಎಸೆತದಲ್ಲಿ ಹೆಟ್ಮೆಯರ್ 1 ರನ್ ಗಳಿಸಿ ಬಳಿಕ ಕ್ರೀಸ್‌ಗೆ ಬಂದ ಪರಾಗ್ ಉಳಿದ ಐದು ಎಸೆತಗಳಲ್ಲೂ ಸಿಕ್ಸರ್ ಸಿಡಿಸಿದರು.

ಲಕ್ನೋ ವಿರುದ್ಧ ಗೆಲುವು: ಪ್ಲೇಆಫ್ ಸನಿಹದಲ್ಲಿ ಪಂಜಾಬ್

ಧರ್ಮಶಾಲಾ, ಮೇ 4– ಸಂಘಟಿತ ಬೌಲಿಂಗ್, ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ ಪಂಜಾಬ್ ಕಿಂಗ್ಸ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 37 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಆ ಮೂಲಕ 11 ಪಂದ್ಯಗಳಲ್ಲಿ 7 ರಲ್ಲಿ ಗೆಲುವು ಸಾಧಿಸಿ 15 ಅಂಕದೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿರುವ ಪಂಜಾಬ್ ಪ್ಲೇ ಆಫ್ ಹಾದಿಯನ್ನು ಬಹುತೇಕ ಖಚಿತಪಡಿಸಿಕೊಂಡಿದೆ. ಇತ್ತ 11 ಪಂದ್ಯಗಳಲ್ಲಿ ಕೇವಲ 5 ರಲ್ಲಿ ಮಾತ್ರ ಗೆಲುವು ಸಾಧಿಸಿರುವ ಲಕ್ನೋ ಸೂಪರ್ ಜೈಂಟ್ಸ್ 10 ಅಂಕಗಳೊಂದಿಗೆ 7ನೇ ಸ್ಥಾನದಲ್ಲೇ ಉಳಿದಿದೆ. ಅಲ್ಲದೇ ಪ್ಲೇ ಆಫ್ ಹಾದಿ ಬಹುತೇಕ ಮುಚ್ಚಿದಂತಾಗಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 236 ರನ್ ಗಳಿಸಿತ್ತು. ಬೃಹತ್ ಗುರಿ ಬೆನ್ನಟ್ಟಿದ ಲಕ್ನೋ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯದಿಂದ ನಿಗದಿ ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 199 ರನ್‌ಗಳಿಸಿ ಸೋಲೊಪ್ಪಿಕೊಂಡಿತು.

ಪಂಜಾಬ್ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಿಯಾಂಶ್ ಆರ್ಯ 1 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಜೋಶ್ ಇಂಗ್ಲಿಷ್ 4 ಸಿಕ್ಸರ್, 1 ಬೌಂಡರಿ ಒಳಗೊಂಡ 30 ರನ್ ಗಳಿಸಿ ಔಟಾದರು. ನಂತರ ಜೊತೆಯಾದ ನಾಯಕ ಶ್ರೇಯಸ್ ಅಯ್ಯರ್ ಹಾಗೂ ಪ್ರಭಸಿಮ್ರಾನ್ ಸಿಂಗ್ 3ನೇ ವಿಕೆಟ್‌ಗೆ 78 ರನ್ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಈ ವೇಳೆ 45 ರನ್ ಗಳಿಸಿದ್ದ ಶ್ರೇಯಸ್ ಅಯ್ಯರ್ ವಿಕೆಟ್ ಒಪ್ಪಿಸಿದರು. ಅರ್ಧ ಶತಕ ಸಿಡಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಪ್ರಭಸಿಮ್ರನ್ 48 ಎಸೆತಗಳಲ್ಲಿ 7 ಸಿಕ್ಸರ್, 6 ಬೌಂಡರಿ ಒಳಗೊಂಡ 91ರನ್ ಗಳಿಸಿ ಔಟಾಗುವ ಮೂಲಕ 9 ರನ್‌ನಿಂದ ಶತಕದಿಂದ ವಂಚಿತರಾದರು. ಉಳಿದಂತೆ ನೇಹಾಲ್ ವಧೇರಾ 16, ಶಶಾಂಕ್ ಸಿಂಗ್ 33, ಮಾರ್ಕಸ್ ಸ್ಟೋಯಿನಸ್ ಅಜೇಯ 15 ರನ್ ಗಳಿಸಿದರು. ಲಖ್ನೋ ಪರ ಆಕಾಶ್ ಮಹಾರಾಜ್ ಸಿಂಗ್ ಹಾಗೂ ದಿಗೇಶ್ ರಾಠಿ ತಲಾ ಎರಡು, ಪ್ರಿನ್ ಯಾದವ್ 1 ವಿಕೆಟ್ ಗಳಿಸಿದರು.

ಪಂಜಾಬ್ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ಲಕ್ನೋ ತಂಡದ ಮೊತ್ತ 27 ರನ್ ಆಗುವಷ್ಟರಲ್ಲೇ ಐಡನ್ ಮಾರ್ಕ್ರಮ್ 13, ಮಿಚೆಲ್ ಮಾರ್ಷ್ 0, ನಿಕೋಲಸ್ ಪೂರನ್ 6 ರನ್ ಗಳಿಸಿ ಬಹುಬೇಗ ಪೆವಿಲಿಯನ್ ಸೇರಿಕೊಂಡರು. ನಂತರ ಬಂದ ನಾಯಕ ರಿಷಬ್ ಪಂತ್ 18, ಡೇವಿಡ್ ಮಿಲ್ಲರ್ 11 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಆಯುಷ್ ಬದೋನಿ 40 ಎಸೆತಗಳಲ್ಲಿ ತಲಾ 5 ಸಿಕ್ಸರ್, ಬೌಂಡರಿ ಒಳಗೊಂಡ 74, ಅಬ್ದುಲ್ ಸಮದ್ 2 ಬೌಂಡರಿ, 4 ಸಿಕ್ಸ್ ಒಳಗೊಂಡ ಬಿರುಸಿನ 45 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಆವೇಶ್ ಖಾನ್ 19 ರನ್ ಗಳಿಸಿದರು. ಪಂಜಾಬ್ ಪರ ಅರ್ಷದೀಪ್ ಸಿಂಗ್ 3, ಅಜ್ಮತುಲ್ಲಾ ಒಮರ್ಜೈ 2, ಮಾರ್ಕೋ ಯಾನ್ಸನ್, ಯಜುವೇಂದ್ರಚಹಲ್ ತಲಾ ಒಂದೊಂದು ವಿಕೆಟ್ ಪಡೆದರು. ಪ್ರಭಸಿ ಮ್ರಾನ್‌ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	11	8	3	0	16
ಪಂಜಾಬ್	11	7	3	1	15
ಮುಂಬೈ	11	7	4	0	14
ಗುಜರಾತ್	10	7	3	0	14
ಡೆಲ್ಲಿ	10	6	4	0	12
ಕೋಲ್ಕತ್ತಾ	11	5	5	1	11
ಲಕ್ನೋ	11	5	6	0	10
ರಾಜಸ್ಥಾನ್	12	3	9	0	6
ಹೈದರಾಬಾದ್	10	3	7	0	6
ಚೆನ್ನೈ	11	2	9	0	4

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್
V/S
ಡೆಲ್ಲಿ ಕ್ಯಾಪಿಟಲ್ಸ್

ಸಮಯ: ಸಂಜೆ 7.30

ಸ್ಥಳ : ರಾಜೀವ್ ಗಾಂಧಿ, ಕ್ರೀಡಾಂಗಣ, ಹೈದರಾಬಾದ್

ಮೈಸೂರಿನಲ್ಲಿ ಬಿಗಿ ಭದ್ರತೆಯಲ್ಲಿ ನಡೆದ ನೀಟ್

- 19 ಪರೀಕ್ಷಾ ಕೇಂದ್ರಗಳಲ್ಲಿ 7,709 ವಿದ್ಯಾರ್ಥಿಗಳು ಹಾಜರು
- ಪರೀಕ್ಷಾ ಅಕ್ರಮ ತಡೆಗಟ್ಟಲು ಬಯೋಮೆಟ್ರಿಕ್‌ನಂತಹ ಆಧುನಿಕ ತಂತ್ರಜ್ಞಾನ ಬಳಕೆ
- ರಾಜ್ಯದ 381 ಪರೀಕ್ಷಾ ಕೇಂದ್ರದಲ್ಲಿ 1.49 ಲಕ್ಷ ವಿದ್ಯಾರ್ಥಿಗಳು ಭಾಗಿ
- ಸಿಸಿ ಕ್ಯಾಮರಾದ ಹದ್ದಿನಕಣ್ಣು
- ಪರೀಕ್ಷಾ ಕೇಂದ್ರದಲ್ಲಿ ಕಂಟ್ರೋಲ್ ರೂಂ



ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಪ್ರವೇಶಾತಿಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮೈಸೂರಿನ 19 ಪರೀಕ್ಷಾ ಕೇಂದ್ರದಲ್ಲಿ ಭಾನುವಾರ ನೀಟ್ ಆಯೋಜಿಸಿತ್ತು. ಪರೀಕ್ಷಾ ಕೇಂದ್ರದೊಳಗೆ ಪ್ರವೇಶ ನೀಡುವ ಮುನ್ನ ವಿದ್ಯಾರ್ಥಿಗಳಿಗೆ ಬಯೋಮೆಟ್ರಿಕ್ ಮೂಲಕ ಪ್ರವೇಶಾತಿ ನೀಡಲಾಯಿತು.

ಸರ, ಬಳೆ, ಕಿವಿಯೋಲೆ, ಕಾಲ್ಗೆಜ್ಜೆ, ಮೂಗುತಿ ಧರಿಸಲು ನಿರ್ಬಂಧ

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನೀಟ್‌ನಲ್ಲಿ ಭಾಗಿಯಾಗುವ ವಿದ್ಯಾರ್ಥಿಗಳಿಗೆ ಕಟ್ಟುನಿಟ್ಟಾದ ವಸ್ತ್ರ ಸಂಹಿತೆಯನ್ನು ಜಾರಿಗೊಳಿಸಿತ್ತು. ಇಂದು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಇದನ್ನು ಚಾಚೂತಪ್ಪದೆ ಪಾಲಿಸಿದರು. ನೀಟ್‌ಗಾಗಿ ನೀಡಿರುವ ಗುರುತಿನ ಚೀಟಿ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಕಾಲೇಜಿನ ಗುರುತಿನ ಚೀಟಿ ಪರಿಶೀಲನೆ ನಡೆಸಿ ಬಯೋಮೆಟ್ರಿಕ್ ಮೂಲಕ ಹಾಜರಾತಿ ನೀಡಲಾಯಿತು. ಇಂದು ನಡೆದ ನೀಟ್‌ನಲ್ಲಿ ಸರ, ಬಳೆ, ಕಿವಿಯೋಲೆ, ಕಾಲ್ಗೆಜ್ಜೆ, ಮೂಗುತಿ, ಜಡೆ ಕ್ಲಿಪ್, ಹೈ ಹೀಲ್ಡ್ ಚಪ್ಪಲಿ, ಶೂ ಸೇರಿದಂತೆ ಕೆಲವು ವಸ್ತುಗಳನ್ನು ಕೊಂಡೊಯ್ಯಲು ನಿರ್ಬಂಧಿಸಲಾಗಿತ್ತು.

ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣ ಕೊಂಡೊಯ್ಯಲು ಅವಕಾಶ ನೀಡದೆ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಪರಿಶೀಲನೆ ನಡೆಸಿ ಪರೀಕ್ಷಾ ಕೇಂದ್ರದೊಳಗೆ ಪ್ರವೇಶ ನೀಡಲಾಯಿತು.

ಮೊಬೈಲ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ ಉಪಕರಣ ಕಾರ್ಯ ನಿರ್ವಹಿಸದಂತೆ ಜಾಮರ್ ಅಳವಡಿಸಲಾಗಿತ್ತು. ಪರೀಕ್ಷಾ ಕೇಂದ್ರದಲ್ಲಿ ಸ್ವಚ್ಛತೆ ಕಾಪಾಡಲಾಗಿತ್ತು. ಪರೀಕ್ಷೆಗೆ ಹಾಜರಾಗುವ ದಿವ್ಯಾಂಗರು, ವಿಶೇಷಚೇತನ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಹೋಗಲು ವ್ಹೀಲ್‌ಚೇರ್ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಲಾಗಿತ್ತು. ಮುನ್ನೆಚ್ಚರಿಕಾ ಕ್ರಮವಾಗಿ ಆರೋಗ್ಯ ಇಲಾಖೆ, ಅಗ್ನಿಶಾಮಕ ದಳ ಸೇರಿದಂತೆ ಇತರೆ ಇಲಾಖೆಯ ಸಿಬ್ಬಂದಿಗಳನ್ನು ಸನ್ನದ್ಧಗೊಳಿಸಲಾಗಿತ್ತು. ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿತ್ತು.

ಮೈಸೂರು, ಮೇ 4(ಬಿಎಲ್‌ಯು)– 2025–26 ನೇ ಸಾಲಿನ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪ್ರವೇಶಕ್ಕಾಗಿ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ಮೈಸೂರಿನಲ್ಲಿ ಇಂದು ಬಿಗಿ ಭದ್ರತೆಯಲ್ಲಿ ನಡೆಯಿತು. ಮೈಸೂರು ನಗರದ 19 ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ಪರೀಕ್ಷಾ ಅಕ್ರಮ ನಡೆಯದಂತೆ ಬಯೋಮೆಟ್ರಿಕ್ ನಂತಹ ಆಧುನಿಕ ತಂತ್ರಜ್ಞಾನ ಬಳಕೆ ಮೂಲಕ ಸುಸೂತ್ರವಾಗಿ ಪರೀಕ್ಷೆ ನಡೆಸಲಾಯಿತು.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮೈಸೂರು ಸೇರಿದಂತೆ ದೇಶಾದ್ಯಂತ ಇಂದು ನೀಟ್ ಆಯೋಜಿಸಿತ್ತು. ರಾಜ್ಯದ 381 ಪರೀಕ್ಷಾ ಕೇಂದ್ರಗಳಲ್ಲಿ 149 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹಾಜರಾಗಿದ್ದರೆ, ದೇಶಾದ್ಯಂತ 23 ಲಕ್ಷ ವಿದ್ಯಾರ್ಥಿಗಳು ಇಂದು ವೈದ್ಯಕೀಯ ಪ್ರವೇಶಕ್ಕಾಗಿ ನೀಟ್ ಬರೆದರು.

ಮೈಸೂರು ನಗರದ 19 ಪರೀಕ್ಷಾ ಕೇಂದ್ರಗಳಲ್ಲಿ 7,709 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಮಧ್ಯಾಹ್ನ 2 ಗಂಟೆಗೆ ಆರಂಭವಾದ ಪರೀಕ್ಷೆ 5 ಗಂಟೆಗೆ ಮುಕ್ತಾಯಗೊಂಡಿತು.

ಒಂದು ತರಗತಿಯಲ್ಲಿ ಪರೀಕ್ಷೆ ಬರೆಯಲು 24 ವಿದ್ಯಾರ್ಥಿಗಳಿಗೆ ಮಿತಿಗೊಳಿಸಲಾಗಿತ್ತು 19 ಪರೀಕ್ಷಾ ಕೇಂದ್ರಗಳಲ್ಲಿ ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾ ಕೇಂದ್ರದಲ್ಲಿ ಕನಿಷ್ಠ 149 ವಿದ್ಯಾರ್ಥಿಗಳಿದ್ದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಬಿ ಬ್ಲಾಕ್, ಅಶೋಕ ರಸ್ತೆಯ ಸಿಪಿಸಿ ಪಾಲಿಟೆಕ್ನಿಕ್, ಮಾನಸ ಗಂಗೋತ್ರಿಯ ರಿಜಿನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಹಾಗೂ ಮಹಾರಾಣಿ ಸರ್ಕಾರಿ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ತಲಾ ಗರಿಷ್ಠ 720 ವಿದ್ಯಾರ್ಥಿಗಳಿದ್ದರು. ಪರೀಕ್ಷಾ ಅಕ್ರಮ ನಡೆಯದಂತೆ ಪರೀಕ್ಷಾ ಕೇಂದ್ರದ ಪ್ರತಿ ಕೋಣೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು. ಪರೀಕ್ಷಾ ಕೇಂದ್ರದಲ್ಲಿರುವ ಕಂಟ್ರೋಲ್ ರೂಂನಲ್ಲಿ ಪರೀಕ್ಷೆಯ ಚಲನವಲನಗಳ ಮೇಲೆ ಹದ್ದಿನಕಣ್ಣಿಡಲಾಗಿತ್ತು.

ಬೆಳಿಗ್ಗೆ 11.30 ಗಂಟೆಗೆ ಪರೀಕ್ಷಾ ಕೇಂದ್ರದೊಳಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು. ಬಯೋಮೆಟ್ರಿಕ್ ಸೇರಿದಂತೆ ಇತರೆ ತಪಾಸಣೆಯನ್ನು ಮಧ್ಯಾಹ್ನ 1.30 ಗಂಟೆವರೆಗೆ ನಡೆಸಲಾಯಿತು. ಯಾವುದೇ ಪರೀಕ್ಷಾ ಅಕ್ರಮ ನಡೆಯದಂತೆ ಬಹಳ ಸೂಕ್ಷ್ಮವಾದ ಪರಿಶೀಲನೆ ನಡೆಸಲಾಯಿತು.

ಕೆನರಾ ಬ್ಯಾಂಕ್ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿರುವ ಸ್ಟ್ರಾಂಗ್ ರೂಂನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಇಡಲಾಗಿತ್ತು. ಪರೀಕ್ಷೆಗೆ ಅರ್ಧ ಗಂಟೆ ಇರುವಾಗ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ವಿತರಣೆ ಮಾಡಲಾಯಿತು.

ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕ, ಉಪ ಮುಖ್ಯ ಅಧೀಕ್ಷಕ, ಪರೀಕ್ಷಾ ವೀಕ್ಷಕರು ಪರೀಕ್ಷಾ ಅಕ್ರಮ ನಡೆಯದಂತೆ ಹದ್ದಿನಕಣ್ಣಿಟ್ಟಿದ್ದರು. ಫ್ಲೈಯಿಂಗ್ ಸ್ಕ್ವಾಡ್ ಆಗಾಗ್ಗೆ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿತ್ತು. ಇಬ್ಬರು ಮೇಲ್ವಿಚಾರಕರು 19 ಪರೀಕ್ಷಾ ಕೇಂದ್ರಗಳ ಉಸ್ತುವಾರಿ ವಹಿಸಿದ್ದರು.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮತ್ತು ಜಿಲ್ಲಾಡಳಿತ ಸಹಭಾಗಿತ್ವದಲ್ಲಿ ಪರೀಕ್ಷಾ ಸುರಕ್ಷತಾ ಕ್ರಮ ಕೈಗೊಳ್ಳಲಾಗಿತ್ತು. ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ತಹಶೀಲ್ದಾರರು ಪರೀಕ್ಷಾ ಕೇಂದ್ರಗಳ ಬಗ್ಗೆ ಗಮನಹರಿಸಿ ಯಾವುದೇ ಪರೀಕ್ಷಾ ಅಕ್ರಮ ನಡೆಯದಂತೆ ಮುತುವರ್ಜಿ ವಹಿಸಿದ್ದರು.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ: ಎನ್‌ಐಎ ತನಿಖೆಗೆ ವಹಿಸುವ ಅಗತ್ಯವಿಲ್ಲ

ಗೃಹ ಸಚಿವ ಡಾ.ಜಿ.ಪರಮೇಶ್ವರ್



ಬೆಂಗಳೂರು, ಮೇ 4– ಮಂಗಳೂರಿನ ಹಿಂದೂ ಪರ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣವನ್ನು ಎನ್‌ಐಎ ತನಿಖೆಗೆ ಒಪ್ಪಿಸಬೇಕು ಎಂಬ ಬಿಜೆಪಿಯ ಬೇಡಿಕೆಯನ್ನು ಗೃಹ ಸಚಿವ ಜಿ.ಪರಮೇಶ್ವರ ಅವರು ಭಾನುವಾರ ತಿರಸ್ಕರಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ಎನ್‌ಐಎ ತನಿಖೆ ನಡೆಯಬೇಕು ಎಂಬುದು ಬಿಜೆಪಿ ಅಭಿಪ್ರಾಯ. ನಮ್ಮ ಪೊಲೀಸರು ತಮ್ಮ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದಾರೆ ಎಂಬುದು ನಮ್ಮ ಅಭಿಪ್ರಾಯ. ಈ ಸಂಬಂಧ ಎಂಟು ಮಂದಿಯನ್ನು ಬಂಧಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಈ ಹಂತದಲ್ಲಿ ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸುವ ಅಗತ್ಯವಿಲ್ಲ ಎಂದರು.

ಸರ್ಕಾರದಿಂದ ಯಾರೊಬ್ಬರೂ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿಲ್ಲ ಯಾಕೆ ಎಂಬ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ್, ಸುಹಾಸ್ ಶೆಟ್ಟಿ ವಿರುದ್ಧ ಐದು ಕ್ರಿಮಿನಲ್ ಪ್ರಕರಣಗಳಿವೆ. ದಯವಿಟ್ಟು ಇದೊಂದು ಕೊಲೆ ಪ್ರಕರಣ ಎಂದು ತಿಳಿಯಿರಿ. ಆತನ ವಿರುದ್ಧ ಐದು ಕ್ರಿಮಿನಲ್ ಮೊಕದ್ದಮೆಗಳಿದ್ದವು. ಆ ಕಾರಣಕ್ಕೆ ಸರ್ಕಾರದಿಂದ ಯಾರೊಬ್ಬರೂ, ನಾನಾಗಲಿ, ಬೇರೆ ಯಾರೇ ಆಗಲಿ ಅವರನ್ನು ಭೇಟಿ ಮಾಡಿಲ್ಲ ಎಂದು ಹೇಳಿದರು.

ಆದರೂ ಕುಟುಂಬಕ್ಕೆ ನ್ಯಾಯ ಸಿಗುವಂತೆ ಸರ್ಕಾರ ನೋಡಿಕೊಳ್ಳುತ್ತದೆ. ಈಗಾಗಲೇ ನಾವು ನಮ್ಮ ಕೆಲಸವನ್ನು ಮಾಡಿದ್ದೇವೆ ಮತ್ತು ನಾವು ಎಂಟು ಜನರನ್ನು ಬಂಧಿಸಿದ್ದೇವೆ. ಕೋಮು ಸೂಕ್ಷ್ಮ ಕರಾವಳಿ ಕರ್ನಾಟಕ ಭಾಗದಲ್ಲಿ ಶಾಶ್ವತವಾಗಿ ಕೋಮು ವಿರೋಧಿ ಕಾರ್ಯಪಡೆ ರಚಿಸಲಾಗುವುದು ಎಂದು ಪರಮೇಶ್ವರ ಹೇಳಿದರು.

ಯುವ ಲೇಖಕ ಹೆಚ್.ಜಿ.ಮನು ರಚಿತ 'ಕಾಲಘಟ್ಟ' ಕೃತಿ ಬಿಡುಗಡೆ



ಯುವ ಲೇಖಕ ಹೆಚ್.ಜಿ.ಮನು ರಚಿತ 'ಕಾಲಘಟ್ಟ'(ಭಾಗ–1) ಕೃತಿಯನ್ನು ಸಿನಿಮಾ ಸಾಹಿತಿ ಕವಿರಾಜ್ ಭಾನುವಾರ ಬಿಡುಗಡೆಗೊಳಿಸಿದರು.

ಮೈಸೂರು,ಮೇ 4(ಎಸ್‌ಪಿಎನ್)– ಮೈಸೂರು ದಟ್ಟಗಳ್ಳಿ ರೋಟರಿ ಶಾಲಾ ಸಭಾಂಗಣದಲ್ಲಿ ಯುವ ಲೇಖಕ ಹೆಚ್.ಜಿ.ಮನು ರಚಿತ, ಮೈಸೂರು ಸಂವಹನ ಪ್ರಕಾಶನ ಪ್ರಕಟಿತ ಹಾಗೂ ಯುನಿವರ್ಸಲ್ ಸ್ಟೋರೀಸ್ ಅರ್ಪಿಸುವ 'ಕಾಲಘಟ್ಟ'(ಭಾಗ–1) ಕೃತಿಯನ್ನು ಸಿನಿಮಾ ಸಾಹಿತಿ ಕವಿರಾಜ್ ಭಾನುವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಸಿನಿಮಾಗಳಲ್ಲಿ ಕವಿತೆಗಳನ್ನು ಬರೆಯಲು ಲೇಖಕನಿಗೆ ಒಂದು ಚೌಕಟ್ಟು ಇರುತ್ತದೆ. ಆದರೆ, ಸಾಮಾನ್ಯ ಸನ್ನಿವೇಶದಲ್ಲಿ ಕವಿತೆಗಳನ್ನು ರಚಿಸುವಾಗ ಯಾವುದೇ ಆಕೃತಿ ಇರುವುದಿಲ್ಲ. ಎಲ್ಲವನ್ನು ಊಹಿಸಿಕೊಂಡು ಆ ಸನ್ನಿವೇಶಕ್ಕೆ ತಕ್ಕಂತೆ ಕವಿತೆ ಪೂರ್ಣಗೊಳಿಸಬೇಕು. ಇದು ಲೇಖಕನಿಗೆ ಕಷ್ಟದ ಕೆಲಸ ಎಂದರು.

ಸಿನಿಮಾಗಳಲ್ಲಿ ಕಥೆ, ಸಾಹಿತ್ಯ, ಸಂಭಾಷಣೆ, ಅಭಿನಯ ಎಲ್ಲವೂ ಇರುತ್ತದೆ. ಇದರ ಮಧ್ಯೆ ಒಂದು ಹಾಡು ಬೇಕು ಎಂದು ನಿರ್ದೇಶಕರಿಗೆ ಅನಿಸಿದರೆ, ಆ ಕೆಲಸವನ್ನು ನಮಗೆ ಒಪ್ಪಿಸುತ್ತಾರೆ. ಆ ಸನ್ನಿವೇಶಕ್ಕೆ ತಕ್ಕಂತೆ ಪದ್ಯ ಕಟ್ಟುವುದು ಸುಲಭವಾಗುತ್ತದೆ. ಆದರೆ, ನಮ್ಮ ಕಣ್ಣೆದುರಿಗೆ ಯಾವುದೇ ಕಥಾವಸ್ತು ಇಲ್ಲದೆ, ಕೇವಲ ಭಾವನೆ, ಕಲ್ಪನೆ ಆಧಾರದ ಮೇಲೆ ಕವಿತೆ, ಕಥೆಗಳನ್ನು ರಚಿಸುವುದು ಲೇಖಕನಿಗೆ ಸ್ವಲ್ಪ ಕಷ್ಟವಾಗುತ್ತದೆ ಎಂದರು.

ವೇದಿಕೆಯಲ್ಲಿ ಕನ್ನಡ ಪ್ರಾಧ್ಯಾಪಕ ಪ್ರೊ.ಕೃ.ಪ.ಗಣೇಶ್, ಸಾಹಿತಿ ದೇವರಾಜು ಪಿ.ಚಿಕ್ಕಹಳ್ಳಿ(ದೇಚ), ಲೇಖಕ ದೀಕ್ಷಿತ್ ನಾಯರ್, ಡಾ.ಆರ್. ಛಲಪತಿ, ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪ, ಎಸ್.ಮಧು, ಕೆ.ವಿ.ನಾಣಯ್ಯ, ಹೆಚ್.ಆರ್.ರಾಮಕೃಷ್ಣ, ಎಂ.ಎಸ್.ಶೇಖರ್, ಎನ್.ಲಕ್ಷ್ಮೀಕಾಂತ್(ಎಸಿಎಫ್) ಉಪಸ್ಥಿತರಿದ್ದರು. ಸಿದ್ದನಕೊಪ್ಪಲಿನ ವಕೀಲ ಕುಮಾರ್ ನಿರೂಪಿಸಿದರು. 'ಹೆಬ್ಬುಲಿ ಕಟ್' ಚಿತ್ರತಂಡ ಟೀಸರ್ ಪ್ರದರ್ಶಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೇಡ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ನಾನ್ ಪೋಲಿ (ಕ) + ರಿಕ್ಷಾ ಚಾಲಕ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತರಳಬಾಳು ಶಾಲೆಯ ನಮಿತಾಗೆ 619 ಅಂಕ



ಮೈಸೂರು, ಮೇ 4– ಮೈಸೂರಿನ ತರಳಬಾಳು ಪ್ರೌಢಶಾಲೆ ವಿದ್ಯಾರ್ಥಿನಿ ಜಿ.ನಮಿತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 619(ಶೇ.99) ಅಂಕ ಪಡೆದು, ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.

ಕನ್ನಡದಲ್ಲಿ 125, ಹಿಂದಿ 100, ಇಂಗ್ಲಿಷ್, ವಿಜ್ಞಾನ ಹಾಗೂ ಸಮಾಜ ವಿಜ್ಞಾನದಲ್ಲಿ 99 ಮತ್ತು ಗಣಿತದಲ್ಲಿ 97 ಅಂಕ ಪಡೆದಿದ್ದಾಳೆ. ಈಕೆ ಪಿರಿಯಾಪಟ್ಟಣ ತಾಲೂಕು ಕೊತ್ತವಳ್ಳಿ ಗ್ರಾಮದ ಗಣೇಶ್ ಹಾಗೂ ಮಹಾದೇವಿ ದಂಪತಿ ಪುತ್ರಿ.

625ಕ್ಕೆ 618 ಅಂಕ ಪಡೆದ ಗೀತಾಂಜಲಿ



ಮೈಸೂರು: ಮೈಸೂರಿನ ಸಿಕೆಸಿ ಶಾಲೆಯ ವಿದ್ಯಾರ್ಥಿನಿ ಬಿ. ಗೀತಾಂಜಲಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 618 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಸಂಸ್ಕೃತದಲ್ಲಿ 125, ಇಂಗ್ಲಿಷ್ 98, ಕನ್ನಡ 99, ಗಣಿತ 100, ವಿಜ್ಞಾನ 96 ಹಾಗೂ ಸಮಾಜಶಾಸ್ತ್ರದಲ್ಲಿ 100 ಅಂಕಗಳನ್ನು ಪಡೆದಿರುವ ಈಕೆ ಮೈಸೂರಿನ ಹೊಸಬಂಡಿಕೇರಿಯ ಬೋಜರಾಜು ಮತ್ತು ಲಕ್ಷ್ಮಿ ದಂಪತಿಯ ಪುತ್ರಿ.

ವೈಷ್ಣವಿಗೆ ಉನ್ನತ ಶ್ರೇಣಿ



ಮೈಸೂರು: ಮೈಸೂರು ತಾಲೂಕು, ವರುಣ ಹೋಬಳಿ ಮಲ್ಲಹಳ್ಳಿಯ ಸುಮನ ವಿದ್ಯಾಕೇಂದ್ರದ ವಿದ್ಯಾರ್ಥಿನಿ ವಿ.ಎಲ್.ವೈಷ್ಣವಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 615 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 125, ಇಂಗ್ಲಿಷ್ 96, ಹಿಂದಿ 99, ಗಣಿತ 100, ವಿಜ್ಞಾನ 95 ಹಾಗೂ ಸಮಾಜಶಾಸ್ತ್ರದಲ್ಲಿ 100 ಅಂಕ ಪಡೆದಿರುವ ಈಕೆ ವರುಣ ಹೋಬಳಿ ವರಕೋಡು ಗ್ರಾಮದ ಲಕ್ಷ್ಮಣ್ ಮತ್ತು ಎನ್.ವಿನೋದ ದಂಪತಿಯ ಪುತ್ರಿ.

ನಿಸರ್ಗ.ಜೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 4– ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆ ಲಿಟಲ್ ಲಿಲ್ಲೀಸ್ ವಿದ್ಯಾರ್ಥಿನಿ ನಿಸರ್ಗ.ಜೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 607 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ –99, ಸಂಸ್ಕೃತ –123, ಇಂಗ್ಲಿಷ್ – 99, ಗಣಿತ –98, ವಿಜ್ಞಾನ –92, ಸಮಾಜ ವಿಜ್ಞಾನ –96 ಅಂಕ ಗಳಿಸಿದ್ದಾರೆ. ಜಿತೇಂದ್ರ ಹಾಗೂ ಮಂಜುಳ ದಂಪತಿ ಪುತ್ರಿ

ಯಶಸ್ವಿನಿ.ಎನ್‌ಗೆ ಅತ್ಯುನ್ನತ ಶ್ರೇಣಿ



ಮೈಸೂರು, ಮೇ 4– ನಗರದ ವಿದ್ಯಾರಣ್ಯಪುರಂನಲ್ಲಿರುವ ಸೆಂಟ್ ಥಾಮಸ್ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಕುಮಾರಿ ಯಶಸ್ವಿನಿ.ಎನ್ ಅವರು ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 579 ಅಂಕಗಳನ್ನು ಗಳಿಸಿ ಶೇ.92.64% ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಅಶೋಕಪುರಂ 12ನೇ ಕ್ರಾಸ್‌ನ ನಿವಾಸಿ ಎಸ್.ಮಂಜುನಾಥ್ ಹಾಗೂ ವಿನುತಾ.ಸಿ ದಂಪತಿ ಪುತ್ರಿ

ಶ್ರೀ ಶಂಕರಚಾರ್ಯರ ತತ್ವ ಮತಾತೀತ

ಶಂಕರ ನಮನ ಕಾರ್ಯಕ್ರಮದಲ್ಲಿ ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್



ಮೈಸೂರಿನ ಗಾನಭಾರತಿಯ ರಮಾಗೋವಿಂದ ಕಲಾವೇದಿಕೆಯಲ್ಲಿ ಭಾನುವಾರ ಶ್ರೀ ಶಂಕರ ನಮನ ಕಾರ್ಯಕ್ರಮವನ್ನು ಬೆಂಗಳೂರು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪಿ.ಜಿ.ದ್ವಾರಕನಾಥ್ ಉದ್ಘಾಟಿಸಿದರು.

ಮೈಸೂರು, ಮೇ 4(ಪಿಎಂ)– ಶಂಕರಾಚಾರ್ಯರ ತತ್ವ ಮತ್ತು ಚಿಂತನೆಗಳು ಇಂದಿಗೂ ಪ್ರಸ್ತುತ. ಅವರ ತತ್ವ ಚಿಂತನೆಗಳು ಕೇವಲ ಒಂದು ವರ್ಣ, ಜಾತಿ, ಮತ, ದೇಶ ಮತ್ತು ಕಾಲಕ್ಕೆ ಮಾತ್ರ ಸೀಮಿತವಲ್ಲ ಎಂದು ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ಹೇಳಿದರು.



ಆರ್.ಗಣೇಶ್

ಮೈಸೂರಿನ ಕುವೆಂಪುನಗರದ ಗಾನಭಾರತಿಯ ರಮಾಗೋವಿಂದ ಕಲಾವೇದಿಕೆಯಲ್ಲಿ ಅಜ್ಜನ ಮನೆ ಕಲಾ ಪ್ರಪಂಚ ಸಂಸ್ಥೆ ವತಿಯಿಂದ ಶ್ರೀ ಶಂಕರ ಜಯಂತಿ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ವೈಶಾಖ ಶುಕ್ಲಪಂಚಮಿ ಶ್ರೀಶಂಕರ ನಮನ ಕಾರ್ಯಕ್ರಮದಲ್ಲಿ ಶಂಕರಚಾರ್ಯರ ಕುರಿತು ಅವರು ಮಾತನಾಡಿದರು.

ಯಾವುದೇ ವಿಚಾರ, ಜ್ಞಾನ, ಕಲೆ, ಜೀವನ ಪದ್ಧತಿಯಾಗಲಿ ನಮ್ಮ ಇಂದಿನ ಬದುಕಿಗೆ ಅನ್ವಯವಾಗದಿದ್ದರೆ ಪ್ರಯೋಜನವಿಲ್ಲ. ಶಂಕರರ ತತ್ವಗಳು ವರ್ತಮಾನದ ಜಗತ್ತಿಗೆ ಪ್ರಸ್ತುತ. ತತ್ವ ಎಷ್ಟೇ ದೊಡ್ಡದಾಗಿದ್ದರೂ ಅದು ನಮಗೆ ವರ್ತಮಾನದ ನಿತ್ಯ ಜೀವನಕ್ಕೆ ಸ್ವಲ್ಪವಾದರೂ ಅನ್ವಯವಾಗಬೇಕು. ಆ ದೃಷ್ಟಿಯಲ್ಲಿ ಶಂಕರರ ಅದ್ವೈತ ವೇದಾಂತ ತತ್ವವು ಇಂದಿನ ನಮ್ಮ ಜೀವನಕ್ಕೆ ಅತ್ಯಂತ ಪ್ರಯೋಜನಕಾರಿ ಎಂದು ತಿಳಿಸಿದರು.

ಶಂಕರರ ಮಾತು, ಚಿಂತನೆ, ಗ್ರಂಥಗಳು ನಮ್ಮ ನಿತ್ಯ ಜೀವನಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಪ್ರಯೋಜನವಾಗುತ್ತವೆ. ಶಂಕರರ ತತ್ವ ಯಾವುದೋ ಒಂದು ವರ್ಣ, ಜಾತಿ, ಮತ, ಒಂದು ದೇಶ ಮತ್ತು ಒಂದು ಕಾಲಕ್ಕೆ ಸೀಮಿತವಲ್ಲ. ಜಗತ್ತಿನಲ್ಲಿ ಯಾವುದಾದರೂ ಮತಾತೀತವಾದ ತತ್ವ ಇದ್ದರೆ ಅದು ಶಂಕರರ ಮೂಲಕ ಎಲ್ಲರಿಗೂ ಮುಟ್ಟಿಸಲ್ಪಟ್ಟಂತಹ ವೇದಾಂತ ತತ್ವವೇ ಆಗಿದೆ ಎಂದರು.

ಇದಕ್ಕೂ ಮುನ್ನ ಉದ್ಘಾಟನೆ ನೆರವೇರಿಸಿದ ಬೆಂಗಳೂರು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪಿ.ಜಿ.ದ್ವಾರಕನಾಥ್ ಮಾತನಾಡಿ, ಶಂಕರರ ಕೊಡುಗೆ ಅಪಾರ. ಅವರು ಆಚಾರ್ಯತ್ರಯರಲ್ಲಿ ಪ್ರಮುಖರು. ಮಾನವ ಕುಲಕ್ಕೆ ಹೊಸ ದಿಕ್ಕು ಕೊಟ್ಟ ಮಹನೀಯರು. ಇವರ ವಿಚಾರಗಳನ್ನು ಪ್ರತಿಯೊಬ್ಬರೂ ಅನುಸರಿಸಬಹುದಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹಿರಿಯ ಪತ್ರಕರ್ತ ಕುಂದೂರು ಉಮೇಶ್ ಭಟ್ ಮಾತನಾಡಿ, ಸೇವೆ ಎನ್ನುವುದು ಮೈಸೂರಿನಲ್ಲಿ ಮಹಾರಾಜರ ಕಾಲದಿಂದಲೂ ಒಂದು ಪರಂಪರೆಯಾಗಿ ನಡೆದು ಬಂದಿದೆ. ಕಳೆದ ಎಂಟು ವರ್ಷಗಳಿಂದ ವಾರಕ್ಕೆ ಒಂದು ದಿನ ಅಜ್ಜನ ಮನೆ ಸಹ ಹಸಿದವರಿಗೆ ಅನ್ನದಾನ ಮಾಡುವಂತಹ ದೊಡ್ಡ ಕೆಲಸ ಮಾಡುತ್ತಿದೆ. ಇದು ನಿಜಕ್ಕೂ ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಬಳಿಕ ವಿದುಷಿ ಡಾ.ಆರ್.ಎನ್.ಶ್ರೀಲತಾ ಮತ್ತು ಅವರ ಶಿಷ್ಯರಿಂದ ಗಾಯನ ನಮನ ಕಾರ್ಯಕ್ರಮ ನಡೆಯಿತು. ಅಲ್ಲದೆ, ವಾದ್ಯ ನಮನ ಹಾಗೂ ವಿದುಷಿ ಡಾ.ಕೃಪಾ ಫಡ್ಕೆ ಅವರ ಶಿಷ್ಯ ವೃಂದದಿಂದ ನೃತ್ಯ ನಮನ ಕಾರ್ಯಕ್ರಮಗಳು ನಡೆದವು. ಅಜ್ಜನ ಮನೆ ಸಂಸ್ಥೆ ಸಂಸ್ಥಾಪಕ ಎನ್.ಕೃಷ್ಣ, ನಿರ್ದೇಶಕಿ ಸುಮಾ ಕೃಷ್ಣಮೂರ್ತಿ, ಸದಸ್ಯ ನಾಗೇಶ್ ಮತ್ತಿತರರು ಹಾಜರಿದ್ದರು.

ಹೊಸ ತಲೆಮಾರಿನ ಲೇಖಕರು ಅಚ್ಚುಕಟ್ಟಾದ ಗ್ರಂಥ ರಚನೆಗೆ ಗಮನಹರಿಸಬೇಕು

ಸಾಹಿತಿ ಪ್ರೊ. ಸಿ. ನಾಗಣ್ಣ ಸಲಹೆ

ಮೈಸೂರು,ಮೇ.4(ಎಂಟಿವೈ)– ಹೊಸ ತಲೆಮಾರಿನ ಲೇಖಕರು ಅಚ್ಚುಕಟ್ಟಾದ ಗ್ರಂಥ ರಚನೆಗಮನ ಹರಿಸಬೇಕು ಎಂದು ಸಾಹಿತಿ ಪ್ರೊ.ಸಿ.ನಾಗಣ್ಣ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಡಾ.ಕೆ.ಎನ್.ಗಿರೀಶ್ ಅವರ 'ರಾಗೌ ಕಾವ್ಯ: ವಿಭಿನ್ನ ನೆಲೆಗಳು' ಸಂಶೋಧನಾ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಹಿರಿಯ ಸಾಹಿತಿ ಪ್ರೊ.ರಾಗೌ(ರಾಮೇಗೌಡ) ಅವರ ಬಗ್ಗೆ ಪಿಹೆಚ್‌ಡಿಗಾಗಿ ಮಾಡಿದ ಸಂಶೋಧನಾ ವರದಿಯನ್ನು ಯುವ ಲೇಖಕ ಡಾ.ಕೆ.ಎನ್.ಗಿರೀಶ್ ರಾಗೌ ಕಾವ್ಯ: ವಿಭಿನ್ನ ನೆಲೆಗಳು ಶೀರ್ಷಿಕೆಯಲ್ಲಿ ಅಚ್ಚುಕಟ್ಟಾಗಿ ಕೃತಿ ರೂಪದಲ್ಲಿ ಹೊರ ತಂದಿದ್ದಾರೆ. ಈ ಕೃತಿ ಸೊಗಸಾಗಿ ಮೂಡಿಬಂದಿದ್ದು, ಹೊಸ ತಲೆ ಮಾರಿನ ಬರಹಗಾರರು ಪುಸ್ತಕ ರಚನೆಯಲ್ಲಿ ಗಮನವಿಟ್ಟು, ಹೆಚ್ಚಿನ ಆಸ್ಥೆವಹಿಸಬೇಕು ಎಂದರು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ರಾಗೌ ಅವರು ಐದು ದಶಕಗಳ ಸುದೀರ್ಘ ಅವಧಿಯ ಸೇವೆ ಸಲ್ಲಿಸಿ, ಅಪಾರ ಕೊಡುಗೆ ನೀಡಿದ್ದಾರೆ. ಉತ್ತಮ ಜಾನಪದ ತಜ್ಞರೂ ಆಗಿರುವ ಸಾಹಿತಿ ಪ್ರೊರಾಗೌ ನೆನಪಿನಲ್ಲಿಟ್ಟುಕೊಳ್ಳುವಂತಹ ಅನೇಕ ಕವನ ಸಂಕಲನ ರಚಿಸಿ, ಸಾಹಿತ್ಯಾಸಕ್ತರ ಮನ ಗೆದ್ದಿದ್ದಾರೆ. ತಮ್ಮ ಕೃತಿಗಳಲ್ಲಿ ಕವಿ ಮತ್ತು ಕಾವ್ಯದ ತಾತ್ವಿಕತೆ, ಜೀವನ್ಮುಖಿ ದೃಷ್ಟಿಕೋನ, ಉದ್ಧಾತತೆಯ ಹಂಬಲ, ಭಾವನಾತ್ಮಕತೆಯ ಜೊತೆಗೆ ವೈಚಾರಿಕ ಮಿಡಿತ ಹಾಗೂ ಆತ್ಮಸ್ಥೈರ್ಯದ ಜೊತೆಗೆ ವರ್ತಮಾನ ಕಾಲದ ಮುಖಾಮುಖಿ ನೆಲೆಗಟ್ಟಿನೊಳಗೆ ವಸಾಹತು ಶಾಹಿ, ಬಂಡವಾಳ ಶಾಹಿ ಕುರಿತು ಚರ್ಚಿಸಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಡಾ.ಕೆ.ಎನ್.ಗಿರೀಶ್ ಅವರ 'ರಾಗೌ ಕಾವ್ಯ: ವಿಭಿನ್ನ ನೆಲೆಗಳು' ಸಂಶೋಧನಾ ಕೃತಿಯನ್ನು ಸಾಹಿತಿ ಪ್ರೊ.ಸಿ.ನಾಗಣ್ಣ ಬಿಡುಗಡೆ ಮಾಡಿದರು.

ಉತ್ತಮ ಜಾನಪದ ತಜ್ಞರೂ ಆಗಿರುವ ರಾಗೌ ಹದಿಹರೆಯದವರವರೆಗೂ ಗ್ರಾಮೀಣ ಪ್ರದೇಶದ ಸುಪರ್ದಿಯಲ್ಲಿದ್ದರು. ಭಾಷಾಕೋಶಕ್ಕೆ ಹೊಸ ಆಯಾಮ ನೀಡಿದ್ದಾರೆ. ಅವರ ಬದುಕಿನ ಆರಂಭದ ಘಟ್ಟದಲ್ಲಿ ಗ್ರಾಮ ಜೀವನ ದಟ್ಟ ಅನುಭವ ಸ್ಥಾಯಿಯಾಗಿ ಹೃದಯದಲ್ಲಿ ಉಳಿದಿದೆ. ಅವರ ಕವಿತಾ ಸಂಕಲನ ನೆನಪು ಮಾಡಿಕೊಳ್ಳಬೇಕು. 1966ರಲ್ಲಿ ಕಾವ್ಯ 'ಯಾತ್ರೆ' ಆರಂಭಿಸಿದ ಅವರು ಇತ್ತೀಚೆಗಷ್ಟೆ ಹೊಸ ಕಾವ್ಯ ರಚಿಸಿದ್ದಾರೆ ಎಂದರು.

ಕಾವ್ಯದಿಂದ ಮಾತ್ರ ಭಾವನೆ, ಆಲೋಚನೆ ವ್ಯಕ್ತಪಡಿಸಲು ಸಾಧ್ಯ. ಹಲವು ಲೇಖಕರು ಕಾವ್ಯಗಳ ಮೂಲಕವೇ ಬರವಣಿಗೆಯ ಲೋಕ ಪ್ರವೇಶಿಸಿದ್ದಾರೆ. ಕಾವ್ಯದ ಬಗ್ಗೆ ಹೊಸ ವ್ಯಾಖ್ಯಾನಗಳು ಸೃಷ್ಟಿಯಾಗುತ್ತಲೇ ಇವೆ. ಕಾವ್ಯಕ್ಕೆ ಮನಸೋಲದವರು ಯಾರೂ ಇಲ್ಲ. ರಾಗೌ ಅಪ್ಪಟ ಕವಿಯಾಗಿದ್ದು, ಅವರ ಬದುಕು ಹಾಗೂ ಭಾವವನ್ನು ಕೃತಿಯಲ್ಲಿ ಸರಳವಾಗಿ ಮೂಡಿಸಿದ್ದಾರೆ. ರಾಗೌ ಅವರು ಯಾವ ಪಂತಕ್ಕೂ ಸೇರಿದವರಲ್ಲ, ಸತ್ಯ, ಸೌಂದರ್ಯವನ್ನು ಸ್ವಾಗತಿಸುವ ವ್ಯಕ್ತಿತ್ವ ಅವರದ್ದಾಗಿದೆ. ಇದನ್ನು ತಮ್ಮ ಬರಹದಲ್ಲಿ ಬರೆದು, ಅದರಂತೆಯೇ ನಡೆಯುತ್ತಿದ್ದಾರೆ. ವಿಮರ್ಶಕರ ತೀಕ್ಷ್ಣತೆಗೆ ಒಳಪಡದೆ, ಯಾವ ಪಂಥಕ್ಕೂ ಸೇರಿಸಲಾಗದೆ ತಟಸ್ಥವಾಗಿ ಸಾಹಿತ್ಯ ನಿಷ್ಠರಾಗಿ ಸೇವೆ ಸಲ್ಲಿಸುತ್ತಿರುವ ಶ್ರೇಷ್ಠ ಸಾಹಿತಿ ಎನಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾರದಾ ವಿಲಾಸ ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ದೇವಿಕಾ, ಸಾಹಿತಿ ರಾಗೌ, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಎನ್.ಆರ್.ಚಂದ್ರೇಗೌಡ, ಲೇಖಕ ಡಾ.ಕೆ.ಎನ್.ಗಿರೀಶ, ಪ್ರಕಾಶಕ ಹೆಚ್.ಆರ್.ಮಂಜೇಗೌಡ ಉಪಸ್ಥಿತರಿದ್ದರು.

ಪ್ರೌಢಶಾಲಾ ಶಿಕ್ಷಕರ ಜೇಷ್ಠತಾ ಪಟ್ಟಿ ಪ್ರಕಟ: ಆಕ್ಷೇಪಣೆ ಅಹ್ವಾನ

ಮೈಸೂರು, ಮೇ 4– ನಂಜನಗೂಡು ತಾಲೂಕಿನ ಎಲ್ಲಾ ಪ್ರೌಢಶಾಲೆಗಳ ಸಹಶಿಕ್ಷಕರು ಉಪನ್ಯಾಸಕರ ಹುದ್ದೆಯ ಜೇಷ್ಠತಾ ಪಟ್ಟಿಯನ್ನು ಶಾಲಾ ಶಿಕ್ಷಣ ತಂತ್ರಾಂಶದಲ್ಲಿ (ಜಾಲತಾಣದಲ್ಲಿ) ಬಿಡುಗಡೆ ಮಾಡಲಾಗಿದೆ.

ಜೇಷ್ಠತಾ ಪಟ್ಟಿಯಲ್ಲಿ ಶಿಕ್ಷಕರು ತಮ್ಮ ಹೆಸರು ಇದೆಯೆ ಎಂದು ಪರಿಶೀಲಿಸಿ ಜೇಷ್ಠತಾ ಕ್ರಮಾಂಕದಲ್ಲಿ ಮಾಹಿತಿಗಳು ಸರಿಯಾಗಿ ಇದೆಯೆ ಎಂದು, ಸಂಪೂರ್ಣ ಡ್ಯಾಟಾ ಮತ್ತು ಇನ್ ಕಂಪ್ಲೀಟ್ ಡ್ಯಾಟಾ, ಎರಡರಲ್ಲು ಪರಿಶೀಲಿಸಿಕೊಂಡು ಏನಾ ದರೂ ಆಕ್ಷೇಪಣೆಗಳಿದ್ದಲ್ಲಿ ನಂಜನಗೂಡು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಮೇ 8 ರೊಳಗೆ ಆಕ್ಷೇಪಣಾ ನಮೂನೆ ಸಹಿತ, ಪೂರಕ ದಾಖಲೆಗಳನ್ನು ಸಲ್ಲಿಸ ಬೇಕು ಎಂದು ನಂಜನಗೂಡು ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಮೇ 4– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಜಿಲ್ಲೆಯಲ್ಲಿ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿರುವ ನಿರಾಶ್ರಿತರಿಗೆ ಉತ್ತಮ ಮಾನಸಿಕ ಆರೋಗ್ಯ ಸೇವೆಗಳನ್ನು ಸರ್ಕಾರೇತರ ಸಂಸ್ಥೆಗಳು ತಮ್ಮ ಸ್ವಂತ ಖರ್ಚಿನಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಪುನರ್ವಸತಿಯನ್ನು ಜಿಲ್ಲಾ ಆಸ್ಪತ್ರೆ ಒದಗಿಸುವ ಬಗ್ಗೆ ಆಸಕ್ತ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು EOI(Expression of Interest) ನಿಯಮಾನುಸಾರ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಮೇ 28 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿದೆ ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಿರ್ಲೆ ಗ್ರಾಮ ಪಂಚಾಯ್ತಿ, ಮಿರ್ಲೆ, ಸಾಲಿಗ್ರಾಮ ತಾಲ್ಲೂಕು, ಮೈಸೂರು ಜಿಲ್ಲೆ

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಈ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಟೆಂಡರ್ ಪ್ರಕಟಣೆ ಸಂಖ್ಯೆ: RDPR/2025-26/BD/WORK_INDENT14029 ದಿನಾಂಕ: 02.05.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Standard Tender Document - KW-3 ಪ್ರಕಾರ ಈ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಇ–ಪ್ರೋಕ್ಯೂರ್‌ಮೆಂಟ್–ಪೋರ್ಟಲ್ - http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್‌ನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಟೆಂಡರ್ ಫಾರಂ ಬೆಲೆ
1	2	4	5	7	8
1	ಸಾಲಿಗ್ರಾಮ ತಾಲ್ಲೂಕು ಮಿರ್ಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಸಿ.ಕೊಪ್ಪಲಿನಲ್ಲಿರುವ ಅಂಗನವಾಡಿ ಕೇಂದ್ರ ಕಟ್ಟಡದ ನಿರ್ಮಾಣ ಕಾಮಗಾರಿ.	15.00 ಲಕ್ಷ	37500	ಲೋಕಪಯೋಗಿ ಇಲಾಖೆ ಮತ್ತು NREGA ನೋಂದಾಯಿತ 1/2/3/4 ನೇ ದರ್ಜೆ ಗುತ್ತಿಗೆದಾರರು	ಇ-ಗೌರ್ನೆನ್ಸ್ ರಂತೆ

1) ಮೇಲ್ಕಂಡ ಕಾಮಗಾರಿಯ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಈ–ಪೋರ್ಟಲ್‌ನಲ್ಲಿ ದಿನಾಂಕ: 05.05.2025 ರಿಂದ ದಿನಾಂಕ: 20.05.2025 ರ ಸಂಜೆ 4.00 ಗಂಟೆಯವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದು.

2) ಟೆಂಡರ್ ಬಿಡ್‌ಗಳನ್ನು ಈ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 20.05.2025 ರ ಸಂಜೆ 4.00 ಗಂಟೆವರೆಗೆ.

3) ಟೆಂಡರ್ ಅಪ್ ಲೋಡಿಂಗ್‌ಗೆ ಸಂಬಂಧಿಸಿದಂತೆ ಈ ಪೋರ್ಟಲ್ ಸಹಾಯಕ ದೂರವಾಣಿ 080–22485867 ಅಥವಾ 080– 2550 1216 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗೆ www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಮಿರ್ಲೆ ಗ್ರಾಮ ಪಂಚಾಯ್ತಿ, ಮಿರ್ಲೆ, ಸಾಲಿಗ್ರಾಮ ತಾಲ್ಲೂಕು, ಮೈಸೂರು ಜಿಲ್ಲೆ ಈ ಕಛೇರಿಯಲ್ಲಿ ಪಡೆಯಬಹುದು.

4) ಟೆಂಡರ್‌ನ್ನು ಅಂಗೀಕರಿಸುವ ಅಥವಾ ರದ್ದುಪಡಿಸುವ ಅಧಿಕಾರ ಮಿರ್ಲೆ ಗ್ರಾಮ ಪಂಚಾಯ್ತಿ ವಿವೇಚನೆಗೆ ಒಳಪಟ್ಟಿರುತ್ತದೆ.

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಮಿರ್ಲೆ ಗ್ರಾಮ ಪಂಚಾಯಿತಿ, ಸಾಲಿಗ್ರಾಮ ತಾಲ್ಲೂಕು